ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

03 ಸೆಪ್ಟೆಂಬರ್ 2014 ಪುಟ 20 ರೂ. 15/-


ಶರಣರ ತ್ಯಾಗ ಅರಿಯದ ಜನ




ಸ್ಟಾರ್ + ಟಿವಿ = ಸರ್ವನಾಶ?


ಭಟ್ಕಳ ಮರಳು ಮಾಫಿಯಾಕ್ಕೆ ವೈದ್ಯನೇ ದೊರೆ

JDS ಬುಸುಗುಡುವ ಅಪ್ಪ ಬಸವಳಿದ ಮಗ






ಕಂಬಾಲಪಲ್ಲಿ ದಲಿತರಿಗೆ ಮತ್ತೊಮ್ಮೆ ಅನ್ಯಾಯ



ಪ್ರೀತಿಯ ಬುಗ್ಗೆಯಾಗಿದ್ದ ಮಿತ್ರ ಯುವರಾಜ್

ರೈತರ ಹಿತ ಕಾಪಾಡುವಲ್ಲಿ ಡಬ್ಲ್ಯುಟಿಒನಲ್ಲಿ ಭಾರತ ಸರ್ಕಾರದ ಅಬ್ಬ
'ಮೋದಿ ಯಾರ ಮಗ ಆದರೆ ಏನು, ಗುಣಕ್ಕೆ ಮತ್ಸರ ಬೇಡ' ಅನ್ನೋಣವೆ



ಡಬ್ಲ್ಯುಟಿಒ(ವಿಶ್ವ ವಾಣಿಜ್ಯ ಸಂಸ್ಥೆ)ನ ನಿರ್ದಿಷ್ಟ ಒಪ್ಪಂದವೊಂದಕ್ಕೆ ಸಹಿ ಹಾಕಲು ನಿರಾಕರಿಸಿದ್ದಕ್ಕಾಗಿ ಪ್ರಪಂಚದ ಹಲವಾರು ಅಭಿವೃದ್ಧಿ ದೇಶಗಳು ಭಾರತ ಸರ್ಕಾರದ ವಿರುದ್ಧ ಗುಟುರು ಹಾಕುತ್ತಿವೆ. ಭಾರತ ಸರ್ಕಾರ ಸಹಾ ಸಂಸತ್ತಿನೊಳಗೆ ಮತ್ತು ಹೊರಗೆ ತನ್ನ ಪ್ರತಾಪವನ್ನು ಹೇಳಿಕೊಳ್ಳುತ್ತಿದೆ. ಈ ಮಧ್ಯೆ ನಿನ್ನೆ (ಆಗಸ್ಟ್ 20) ಪ್ರಧಾನಿ ಮೋದಿಯವರು 'ಪ್ರಪಂಚ ಯಾವುದನ್ನು 2020ಕ್ಕೆ ಸಾಧಿಸಲಿದೆಯೋ, ಅದನ್ನು ಭಾರತವು 2018ಕ್ಕೇ ಸಾಧಿಸಬೇಕು' ಎಂದು ಕರೆ ನೀಡಿದ್ದಾರೆ. ಅಂದರೆ ಏನೋ ಮಹತ್ತರವಾದದ್ದು ಈ ದೇಶದಲ್ಲಿ ಮುಂದಿನ ನಾಲ್ಕು ವರ್ಷಗಳಲ್ಲಿ ಸಾಧಿಸಲಿರುವ ಸೂಚನೆ ಸಿಗುತ್ತಿದೆ ಎಂದು ನಾವು ಭಾವಿಸಬಹುದೇ? ಮೋದಿ ಪ್ರಧಾನಿಯಾದರೆ ಭಾರತ ಸೂಪರ್‌ಪವರ್ ಆಗಲಿದೆ ಎಂಬ ನಿರೀಕ್ಷೆಯನ್ನು ಹುಟ್ಟುಹಾಕಲಾಗಿತ್ತು. 'ಕಾಂಗ್ರೆಸ್ ಮುಕ್ತ ಭಾರತ ನಮ್ಮ ಸಂಕಲ್ಪ' ಎಂದು ಬಿಜೆಪಿ ಘೋಷಿಸಿತ್ತು. ಈಚೆಗೆ ಬಿಜೆಪಿಯ ಅಧ್ಯಕ್ಷ ಅಮಿತ್‌ಷಾ ಸಹಾ 'ಸಂಪೂರ್ಣ ನಿಸ್ತೇಜವಾಗಿರುವ ಕಾಂಗ್ರೆಸ್ ನಮಗೆ ಎದುರಾಳಿಯಲ್ಲ. ಹಾಗೊಂದು ವೇಳೆ ಯಾರಾದರೂ ನಮಗೆ ಎದುರಾಳಿಗಳಿದ್ದರೆ ಅದು ಕಮ್ಯುನಿಸ್ಟರು ಮಾತ್ರ' ಎಂದು ಹೇಳಿದ್ದಾನೆ. ಕಮ್ಯುನಿಸ್ಟರು ದೇಶಾದ್ಯಂತ ದೊಡ್ಡ ಶಕ್ತಿಯೇನಲ್ಲ ಮತ್ತು ಸದ್ಯಕ್ಕೆ ಅವರೂ ನಿಸ್ತೇಜವಾಗಿದ್ದಾರೆ. ಇದರರ್ಥ ಬಿಜೆಪಿ ಹಾಗೂ ಎನ್‌ಡಿಎ ಸರ್ಕಾರಕ್ಕೆ ಈಗ ದೇಶದೊಳಗೆ ಎದುರಾಳಿಗಳಿಲ್ಲದಿರುವುದರಿಂದ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ರಾಜಕೀಯ, ಆರ್ಥಿಕ ಎದುರಾಳಿಗಳನ್ನು ಮಟ್ಟ ಹಾಕಿ ಮೇಲೇರುವ ಸಂಗತಿಗೆ ಗಮನ ಕೊಡುತ್ತಿರಬಹುದೇ? ಸ್ವತಂತ್ರವಾಗಿ ಅಧಿಕಾರ ಹಿಡಿಯಲು ಶಕ್ತವಾಗಿರುವುದರಿಂದ ಈ ದೇಶದ 'ಅಭಿಪ್ರಾಯ ನಿರೂಪಣೆ'ಯಲ್ಲಿ ಸದ್ಯದಲ್ಲಿ ಮೇಲುಗೈ ಸಾಧಿಸಿರುವ ಮಾಧ್ಯಮಗಳು, ಸಾಮಾಜಿಕ ಮಾಧ್ಯಮಗಳು ಮತ್ತು ಮೇಲ್ಮಧ್ಯಮ ವರ್ಗದ ನಿರ್ದಿಷ್ಟ ಗುಂಪುಗಳು ಹೀಗೆ ಬಿಂಬಿಸಿದರೂ ಆಶ್ಚರ್ಯವಿಲ್ಲ. ಏಕೆಂದರೆ ಪರಿಸ್ಥಿತಿ ಅವರಿಗೆ ಪೂರಕವಾಗಿದೆ. ಡಬ್ಲ್ಯುಟಿಒದ ಉದಾಹರಣೆಯನ್ನೇ ನೋಡುವುದಾದರೆ, ಇದುವರೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಸರ್ಕಾರವು ತಲೆ ಬಾಗಿದ್ದೇ ಹೆಚ್ಚು. ಯುಪಿಎ ಸರ್ಕಾರವು ಅಂತರರಾಷ್ಟ್ರೀಯ ಮಾರುಕಟ್ಟೆ ಶಕ್ತಿಗಳು ಭಾರತದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕೆ ತೀವ್ರ ರೂಪದ ಪ್ರತಿರೋಧವನ್ನು ತೋರಿದ್ದಿಲ್ಲ. ಕಳೆದ ಡಿಸೆಂಬರ್‌ನಲ್ಲಿ ಇಂಡೋನೇಷ್ಯಾದ 'ಬಾಲಿ'ಯಲ್ಲಿ ನಡೆದ ಮಾತುಕತೆಗಳ ಸಂದರ್ಭದಲ್ಲಿ ಒಂದಷ್ಟು ಸಮಾನ ಅಭಿಪ್ರಾಯಗಳಿಗೆ ಬರಲಾಗಿತ್ತು. ಅದರಲ್ಲಿ 'ಬಾಲಿ ಪ್ಯಾಕೇಜ್' ಎಂದು ಕರೆಯಲಾಗುವ ವಾಣಿಜ್ಯಕ್ಕೆ ಸಂಬಂಧಿಸಿದ ಒಂದಷ್ಟು ನಿಯಮಗಳ ಪ್ರಸ್ತಾಪವನ್ನು ಸಿದ್ಧಪಡಿಸಲಾಗಿತ್ತು. ಆ ಪ್ಯಾಕೇಜ್‌ಗೆ ಯುಪಿಎ ಸರ್ಕಾರದ ಪ್ರತಿನಿಧಿಗಳು ಒಪ್ಪಿಗೆ ಸೂಚಿಸಿ ಬಂದಿದ್ದರು.

ಅದನ್ನೂ ಈಗ ಎನ್‌ಡಿಎ ಸರ್ಕಾರದ ಪ್ರತಿನಿಧಿಗಳು ತಿರಸ್ಕರಿಸಿ ಬಂದಿದ್ದಾರೆ. 'ನಮ್ಮ ದೇಶದ ಆಹಾರ ಭದ್ರತೆಗೆ ಧಕ್ಕೆ ತರುವ ಈ ನಿಯಮಾವಳಿಗಳನ್ನು ನಾವು ಒಪ್ಪುವುದಿಲ್ಲ' ಎಂದು ಎನ್‌ಡಿಎ ಸರ್ಕಾರ ಬಿಗಿಪಟ್ಟು ಹಿಡಿಯಿತು. ನಮ್ಮ ದೇಶದ ರೈತರ ಹಿತವನ್ನು ಕಾಯುವ ಹಾಗೂ ಆಹಾರ ಭದ್ರತೆಗೆ ಕಾರಣವಾಗಿರುವ ನೀತಿಯಲ್ಲಿ ರಾಜಿಯಿಲ್ಲ ಎಂಬುದು ಅದರ ಅಭಿಪ್ರಾಯವಾಗಿತ್ತು. ಆ ವಿಚಾರದಲ್ಲಿ 'ಆಹಾರ ಭದ್ರತಾ ಕಾಯ್ದೆಯನ್ನು ತಂದ ಹಾಗೂ ಸಾಮಾನ್ಯ ಜನರ ಪರ ಎಂದು ಹೇಳಿಕೊಳ್ಳುವ ಯುಪಿಎ ಸರ್ಕಾರದ್ದು ಕೇವಲ ಬಾಯಿಮಾತಿನ ಬದ್ಧತೆಯಾದರೆ, ನಮ್ಮದು ಕೃತಿಯಲ್ಲಿ ತೋರಿಸಿದ ಬದ್ಧತೆ' ಎಂಬುದು ಎನ್‌ಡಿಎ ಹೇಳುತ್ತಿರುವ ಮಾತು. ಇದನ್ನೇ ಸಚಿವೆ ನಿರ್ಮಲಾ ಸೀತಾರಾಮನ್ ಸಂಸತ್ತಿನಲ್ಲೂ ಸ್ಪಷ್ಟಪಡಿಸಿದರು.

ಹಾಗಾದರೆ, ಮೋದಿ ಸರ್ಕಾರ ನಿಜವಾಗಲೂ ಅಹುಜನಪರವಾಗಿ ಕೆಲಸ ಮಾಡುತ್ತಿದೆಯೇ, ಕಾರ್ಪೋರೇಟ್‌ಪರ ಎಂಬ ನಮ್ಮ ಅನಿಸಿಕೆ ಸುಳ್ಳೇ? ಕೇವಲ 'ಸೆಕ್ಯುಲರ್' ಪೂರ್ವಗ್ರಹ ಇದಕ್ಕೆ ಕಾರಣವೇ? ಇದನ್ನು ಪರಿಶೀಲಿಸುವ ಮುನ್ನ ಡಬ್ಲ್ಯುಟಿಒ ನಿಯಮಾವಳಿಗಳ ಸಂಗತಿ ಏನು ಎಂಬುದನ್ನು ವಿವರವಾಗಿ ನೋಡಬೇಕು.

ಒಟ್ಟಾರೆ ಡಬ್ಲ್ಯುಟಿಒ ಒಪ್ಪಂದವು ಮುಕ್ತ ಮಾರುಕಟ್ಟೆ ಹೆಸರಿನಲ್ಲಿ ಜಾಗತಿಕ ಕಾರ್ಪೋರೇಟ್ ಶಕ್ತಿಗಳ ಮುಕ್ತ ಲೂಟಿಗೆ ಅನುವು ಮಾಡಿಕೊಡುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಅದರಲ್ಲಿ ಅಮೆರಿಕ ಮತ್ತು ಯೂರೋಪ್ ಒಕ್ಕೂಟಗಳ ಪ್ರಾಬಲ್ಯವೂ ಸಾಕಷ್ಟಿದೆ. ಪ್ರತಿಯೊಂದು ದೇಶವೂ, ತನ್ನ ಆರ್ಥಿಕತೆಯ ಪರಿಸ್ಥಿತಿಗನುಗುಣವಾಗಿ ಮೇಲುಗೈ ಸಾಧಿಸುತ್ತದೆ. ಅದರಲ್ಲೂ ಎಲ್ಲಾ ದೇಶಗಳ ಭಾರೀ ದೊಡ್ಡ ಬಂಡವಾಳಿಗರಿಗೆ ಇದು ದಾರಿ ಮಾಡಿಕೊಡುತ್ತದೆ. ಇದಿಷ್ಟು ಇಂದು ಸಾಮಾನ್ಯ ಜ್ಞಾನವೆನಿಸಿರುವ ಸಂಗತಿ.

ವಾಣಿಜ್ಯ ಸುಗಮಗೊಳಿಸುವ ಒಪ್ಪಂದ (Trade facilitation agreement - TFA) ಡಬ್ಲ್ಯುಟಿಒದ ಒಟ್ಟಾರೆ ಒಪ್ಪಂದದ ಅನುಬಂಧ 1-ಎಗೆ ಸೇರಿಸಬೇಕೆಂದು ಉದ್ದೇಶಿಸಿದ್ದ 'ಬಾಲಿ ಪ್ಯಾಕೇಜ್'ನ ಒಂದು ಭಾಗ. ಅದನ್ನು ಜುಲೈ 31ರ ಒಳಗೆ ಒಪ್ಪಂದದ ಸ್ವರೂಪಕ್ಕೆ ತಂದು ಡಬ್ಲ್ಯುಟಿಒನ ಒಂದು ನಿಯಮವನ್ನಾಗಿ ಮಾಡಬೇಕಿತ್ತು. ಆದರೆ ಭಾರತದ ವಿರೋಧದ ಕಾರಣಕ್ಕೆ ಅದು ಆಗಿಲ್ಲ.

ಟಿಎಫ್‌ಎನಲ್ಲಿ ಕಸ್ಟಮ್ಸ್ ವಿಧಾನಗಳಲ್ಲಿ ಸರಳಗೊಳಿಸುವುದು, ಬಂದರುಗಳಿಂದ ಸರಕುಗಳನ್ನು ತ್ವರಿತವಾಗಿ ಬಿಡುಗಡೆಗೊಳಿಸುವುದು, ಇನ್ನಿತರ ವ್ಯಾವಹಾರಿಕ ವೆಚ್ಚಗಳನ್ನು ಕಡಿಮೆ ಮಾಡುವುದು ಅದರಲ್ಲಿ ಒಳಗೊಂಡಿದೆ.

ನಡೆಯಬೇಕಿರಲಿಲ್ಲ, ಅದು ಮುಗಿಯಬೇಕಾದ್ದು 2017ರ ಒಳಗೆ ಆಗಿತ್ತು! ಇದುವರೆಗಿನ ಡಬ್ಲ್ಯುಟಿಒ ಒಪ್ಪಂದದ ಜಾರಿಯಾಗಿದ್ದ ರೀತಿಯೇ ಹೀಗೆ. ಸಮಸ್ಯೆಗಳೆಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ, ಲಾಭ ಜಾಗತಿಕ ಕಾರ್ಪೋರೇಟ್ ಕಂಪೆನಿಗಳಿಗೆ.

ಆದರೆ ಈ ಸಾರಿ ಭಾರತ ಸರ್ಕಾರ ಇದಕ್ಕೆ, ಜುಲೈ 2014ರ ಒಳಗೆ ಸಹಿ ಹಾಕಲು ಒಪ್ಪಲಿಲ್ಲ. 2017ರ ಒಳಗೆ ಮುಗಿಯಬೇಕೆಂದುಕೊಳ್ಳಲಾಗಿದ್ದ ಅಂಶಗಳ ಕುರಿತೂ ಪ್ರಕ್ರಿಯೆಯನ್ನು ಈಗಲೇ ಆರಂಭಿಸಿ, 'ತ್ವರಿತ ಗತಿಯ ಮಾತುಕತೆ'ಗಳನ್ನು ಮಾಡಿ ಎಂದರೆ ಅದಕ್ಕೂ ಬಲಾಢ್ಯ



ಅದರ ಜೊತೆಗೆ ಸರ್ಕಾರಗಳು ಕನಿಷ್ಠ ಬೆಂಬಲ ಬೆಲೆ ಅಥವಾ ನ್ಯಾಯಯುತ ಬೆಲೆ (MSP- minimum support price, FRP- fair and renumerative price) ಗಳನ್ನು ನೀಡುವುದಕ್ಕೂ ನಿರ್ಬಂಧಗಳಿವೆ. ಡಬ್ಲ್ಯುಟಿಒ ಒಪ್ಪಂದದ ನಿಯಮಗಳ ಪ್ರಕಾರ ಕೃಷಿಗೆ ನೀಡುವ ಒಟ್ಟಾರೆ ಸಬ್ಸಿಡಿಯು ಕೃಷಿ ಉತ್ಪನ್ನದ ಒಟ್ಟು ಬೆಲೆಯ ಶೇ.10ನ್ನು ಮೀರುವಂತಿಲ್ಲ. ಆದರೆ ಕೃಷಿ ಉತ್ಪನ್ನದ ಒಟ್ಟು ಬೆಲೆಯನ್ನು ಹೇಗೆ ನಿರ್ಧರಿಸಬೇಕು? ಸದರಿ ಬೆಳೆಯ ಬೆಲೆ 1986-88ರಲ್ಲಿ ಎಷ್ಟಿತ್ತೋ ಅದನ್ನು ಮಾನದಂಡವನ್ನಾಗಿ ತೆಗೆದುಕೊಳ್ಳಬೇಕು! ನಮ್ಮ ಸಬ್ಸಿಡಿ ಎಷ್ಟಿರಬೇಕೆಂದು ನೀವ್ಯಾರು ನಿರ್ಧರಿಸುತ್ತೀರಿ, ಎಂದು ಅಭಿವೃದ್ಧಿಶೀಲ ದೇಶಗಳ ಸರ್ಕಾರಗಳು ಕೇಳುತ್ತಿಲ್ಲ. 1986-88ರ ಬೆಲೆಗಳೆಂದು ಹೇಳುವುದು ಸರಿಯಲ್ಲ ಎಂದು ತಕರಾರೆತ್ತುತ್ತಿವೆ.



ಸಾರ್ವಜನಿಕ ಬಳಕೆಗಾಗಿ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು (ಬೆಂಬಲ ಬೆಲೆಯ ಮೂಲಕ ಅಥವಾ ಲೆವಿಯ ಮೂಲಕ) ಕೊಂಡು ಸ್ಟಾಕ್ ಮಾಡುವುದನ್ನೂ ವಿಶ್ವ ವಾಣಿಜ್ಯ ಸಂಸ್ಥೆಯು ನಿರ್ಬಂಧ ಮಾಡುತ್ತದೆ. ಇದು ನಮ್ಮ ಆಹಾರ ಭದ್ರತೆಯ ಮೇಲೂ ಪರಿಣಾಮ ಬೀರುತ್ತದೆ ಮತ್ತು ಇದರಿಂದ ನಮ್ಮ ರೈತರು ಸಂಕಷ್ಟಕ್ಕೀಡಾಗುತ್ತಾರೆ. ಈಗಾಗಲೇ ಉತ್ಪಾದನಾ ವೆಚ್ಚದ ತೀವ್ರ ಹೆಚ್ಚಳದಿಂದ ತತ್ತರಿಸಿರುವ ರೈತಾಪಿ ಮತ್ತಷ್ಟು ಬಿಕ್ಕಟ್ಟಿಗೆ ಈಡಾಗುತ್ತಾರೆ. ಆತ್ಮಹತ್ಯೆಗಳ ಇನ್ನೊಂದು ದೊಡ್ಡ ಸರಣಿ ನಡೆಯುವ ಸಾಧ್ಯತೆಯಿರುತ್ತದೆ.

ಇದನ್ನು 'ಬಾಲಿ ಪ್ಯಾಕೇಜ್'ನಲ್ಲೇ ಚರ್ಚಿಸಲಾಗಿರಲಿಲ್ಲ ಎಂದೇನಲ್ಲ. ಟಿಎಫ್‌ಎಅನ್ನು ಜಾರಿ ಮಾಡುವುದರೊಂದಿಗೇ ಅಭಿವೃದ್ಧಿ ಶೀಲ ದೇಶಗಳ ಆಹಾರ ಭದ್ರತೆಯ ಕುರಿತ ಆತಂಕಗಳನ್ನು ನಿವಾರಿಸುವ ಕ್ರಮಗಳನ್ನೂ ಕೈಗೊಳ್ಳುವ ಕುರಿತ ಚರ್ಚೆಯೂ ನಡೆಯಬೇಕೆಂದು ಅಂದುಕೊಳ್ಳಲಾಗಿತ್ತು. ಆದರೆ ಅದೇನೂ ಜುಲೈ 2014ರ ಒಳಗೆ ಸದಸ್ಯ ದೇಶಗಳು ಒಪ್ಪಿಲ್ಲ. ಹಾಗಾಗಿ ಭಾರತವು ಸಹಿ ಹಾಕಲು ಒಪ್ಪಲಿಲ್ಲ. ವಾಸ್ತವದಲ್ಲಿ ಡಬ್ಲ್ಯುಟಿಒ ಒಪ್ಪಂದದ ಭಾಗವಾದ ಎಒಎ (Agreement On Agriculture ಕೃಷಿಯ ಮೇಲಿನ ಒಪ್ಪಂದ)ದ ಮುನ್ನುಡಿಯಲ್ಲಿಯೇ 'ನ್ಯಾಯಯುತ ಮತ್ತು ಮಾರುಕಟ್ಟೆ ಆಧಾರಿತ ಕೃಷಿ ವ್ಯಾಪಾರ ವ್ಯವಸ್ಥೆ ರೂಪುಗೊಳ್ಳಬೇಕು', ಆದಕ್ಕಾಗಿ 'ಕೃಷಿಗೆ ನೀಡುತ್ತಿರುವ ಬೆಂಬಲ ಮತ್ತು ರಕ್ಷಣೆಯನ್ನು ಹಂತಹಂತವಾಗಿ ಗಣನೀಯವಾಗಿ ತಗ್ಗಿಸಬೇಕು' ಎಂದು ಹೇಳಲಾಗಿದೆ. ಆದರೆ ಇದೇ ಸಂದರ್ಭದಲ್ಲಿ 'ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿಶೀಲ ಸದಸ್ಯ ದೇಶಗಳ ಅಗತ್ಯ ಮತ್ತು ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು', 'ಅಭಿವೃದ್ಧಿ ಶೀಲ ದೇಶಗಳಿಗೆ ವಿಶೇಷವಾದ ಸವಲತ್ತುಗಳನ್ನು ಕಲ್ಪಿಸಬೇಕು', ಹಾಗೂ ಅದು 'ಮಾತುಕತೆಗಳ ಅವಿಭಾಜ್ಯ ಅಂಗವಾಗಿರಬೇಕು' ಎಂತಲೂ ಹೇಳಲಾಗಿದೆ.

ಸಾಮಾನ್ಯವಾಗಿ ಇಂತಹ ಎಲ್ಲಾ ಮಾತುಗಳ ಮೊದಲರ್ಧವು ಜಾರಿಯಾಗಬೇಕಾದ ನಿಯಮಗಳಾಗಿಯೂ, ಉಳಿದರ್ಧವು ಮಾರ್ಗಸೂಚಿ ಸೂತ್ರಗಳಂತೆಯೂ ಇರುತ್ತವೆ. ನಮ್ಮ ಸಂವಿಧಾನದ ಜಾರಿಯಾಗಬೇಕಾದ ಕಲಂ ಮತ್ತು ರಾಜ್ಯ ನಿರ್ದೇಶಕ ಸೂತ್ರಗಳೂ ಇರುವಂತೆ. ಈ ಸಾರಿಯೇನೋ ಭಾರತವು ಇಂತಹ ಅಂಶಗಳನ್ನೇ ಮುಂದೆ ಮಾಡಿ, ಸಹಿ ಹಾಕುವುದಿಲ್ಲವೆಂದು ಹೇಳಿದೆ. ಈ ವಿಚಾರದಲ್ಲಿ ಬಲಾಢ್ಯ ದೇಶಗಳ ಆಷಾಢಭೂತಿತನಕ್ಕೆ ಎಣೆಯೇ ಇಲ್ಲ. ಡಬ್ಲ್ಯುಟಿಒ ಒಪ್ಪಂದದನ್ವಯ ಕಳೆದ 20 ವರ್ಷಗಳಲ್ಲಿ ಭಾರತದಂತಹ ದೇಶಗಳು ತಮ್ಮ ರೈತರಿಗೆ ನೀಡುತ್ತಿದ್ದ ಸಬ್ಸಿಡಿಗಳನ್ನು ಭಾರೀ ಪ್ರಮಾಣದಲ್ಲಿ ಕಡಿತಗೊಳಿಸಿವೆ. ಆದರೆ ಇದೇ ಅವಧಿಯಲ್ಲಿ ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟಗಳು ತಮ್ಮ ದೇಶಗಳ ಕೃಷಿಕರಿಗೆ ನೀಡುತ್ತಿರುವ ಬೆಂಬಲ ಹಾಗೂ ರಕ್ಷಣೆ ಹೆಚ್ಚಾಗಿದೆ.

ಇನ್ನು ಬೆಂಬಲ ಬೆಲೆಯ ವಿಚಾರಕ್ಕೆ ಬರುವುದಾ
ಭಾರತದಂತಹ ದೇಶಗಳನ್ನು ಅಮೆರಿಕವು ನಿರ್ಬಂಧಿಸು
ಈ ಬೆಂಬಲ ಬೆಲೆ ಯಾಕೆ ಬೇಕು? ರೈತರ ಉತ್ಪಾ
ವೆಚ್ಚದಷ್ಟೂ ಬೆಲೆ ಮಾರುಕಟ್ಟೆಯಲ್ಲಿ ಅವರಿಗೆ ಸಿಗುವು
ಅಮೆರಿಕದಲ್ಲೂ ಈ ಮಾತು ನಿಜ. ಹಾಗಾಗಿ ಅಮೆರಿಕ
ಸುಮಾರು 5,000 ರೈತರ ಮಾರುಕಟ್ಟೆಗಳಿವೆ.
ಸರ್ಕಾರದ ಸಹಾಯಧನದೊಂದಿಗೆ (ಎಸ್‌ಎನ್‌ಎ
ಫುಡ್‌ಸ್ಟಾಂಪ್ ಕಾರ್ಯಕ್ರಮ) ಗ್ರಾಹಕರು ಬ
ಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿ ಸೂಕ್ತ ದರ ಸಿಗುವು
ಎಂದಾಗ ಅಲ್ಲಿನ ರೈತರು ಈ ಮಾರುಕಟ್ಟೆಗ
ಬಳಸಿಕೊಳ್ಳುತ್ತಾರೆ. ಕೊಳ್ಳಲು ಗ್ರಾಹಕರಿಗೂ ಸರ್ಕಾ
ಸಹಾಯ ಇರುವುದರಿಂದ ಅವರಿಗೂ ಸಮಸ್ಯೆ
ರೈತರಿಗೆ ನೇರವಾಗಿ ಆದಾಯ ಹೆಚ್ಚಳಕ್ಕೆ ಬೇಕಾದ
ಕ್ರಮಗಳನ್ನೂ ಸರ್ಕಾರ ಅಲ್ಲಿ ಕೈಗೊಳ್ಳುತ್ತದೆ.

ಹಾಗಾಗಿ ಅಭಿವೃದ್ಧಿ ಹೊಂದಿದ ದೇಶ
ಆಷಾಢಭೂತಿತನವನ್ನು ವಿರೋಧಿಸುವ ಭಾರತ ಸರ್ಕಾ
ಕ್ರಮವನ್ನು ನಾವು ಮೆಚ್ಚಲೇಬೇಕಲ್ಲವೇ? 'ಯಾರ
ಆದರೆ ಏನು, ಗುಣಕ್ಕೆ ಮತ್ಸರ ಬೇಡ'
ಅನ್ನಲೇಬೇಕಲ್ಲವೇ? ಇಲ್ಲ, ನಮ್ಮ ಸರ್ಕಾರವೂ ದ
ಆಷಾಢಭೂತಿಯೇ ಆಗಿದೆ.

ಯಾವ ಸಂಸತ್ ಅಧಿವೇಶನದಲ್ಲಿ ವಾಣಿ
ಸಂಬಂಧಿಸಿದ ಖಾತೆಯ ರಾಜ್ಯ ಸಚಿವೆ ನಿರ್ಮ
ಸೀತಾರಾಮನ್ ಭಾರತದ ನಿಲುವನ್ನು ದೇಶಕ್ಕೆ ತಿಳಿಸಿದ
ಅದೇ ಅಧಿವೇಶನದಲ್ಲೇ ಇನ್ನೊಂದು ಬೆಳವಣಿಗೆ
ನಡೆದಿದೆ. ಕೇಂದ್ರ ಸರ್ಕಾರದ ಕೃಷಿ ರಾಜ್ಯ ಮಂತ್ರಿ
ರಾಜ್ಯಸಭೆಯಲ್ಲಿ ಚುಕ್ಕೆ ಗುರುತಿನ ಪ್ರಶ್ನೆಯೊಂದಕ್ಕೆ
ನೀಡಿ ಹೇಳಿದರು, 'ಕೇಂದ್ರ ಸರ್ಕಾರವು ರಾಜ್ಯ ಸರ್ಕಾರ
ಎಂಎಸ್‌ಪಿ (ಕನಿಷ್ಠ ಬೆಂಬಲ ಬೆಲೆ) ಮೇಲೆ
ಬೋನಸ್ ನೀಡಬಾರದೆಂದು ಸುತ್ತೋಲೆ ಹೊರಡಿಸಲಾ
ಆದರೂ ಕೆಲವು ರಾಜ್ಯಗಳು ಅದನ್ನು ಉಲ್ಲಂಘಿಸುತ್ತಿರು
ಕಂಡುಬರುತ್ತಿದೆ. ಈಗ ಮತ್ತೊಮ್ಮೆ ಹೇಳುತ್ತಿದ
ಯಾವುದಕ್ಕೂ ಹೆಚ್ಚಿನ ಬೋನಸ್ ಕೊಡಬಾರದು ಎ
ಸ್ಪಷ್ಟಪಡಿಸುತ್ತಿದ್ದೇವೆ. ಇದರ ಬಗ್ಗೆ ರಾಜಿ ಇಲ್ಲ'.
ಅಕ್ಟೋಬರ್‌ನಿಂದ ಆಹಾರ ಧಾನ್ಯಗಳ ಸಂಗ್ರಹದ ಸಿ
ಶುರುವಾಗಲಿದೆ. ಸರ್ಕಾರದ ಬೆಂಬಲ ಬೆಲೆಯೂ ಇಲ್ಲದ
ರೈತರು ಸಂಪೂರ್ಣವಾಗಿ ಖಾಸಗಿ ಲಾಬಿಗಳ ಬಾ
ಬೀಳುತ್ತಾರೆ. ಇದರ ಜೊತೆಗೆ 'ಇದುವರೆಗೆ ಶೇ.25
ಶೇ.50ರವರೆಗೆ ಇರುವ ಲೆವಿ ಸಂಗ್ರಹವನ್ನು ಕೇವಲ 25
ಇಳಿಸಬೇಕು. ಏಕೆಂದರೆ ಈಗಿರುವ ಕ್ರಮಗಳಿಂದ ಅ
ಉತ್ಪಾದನೆಯ ವೈವಿಧ್ಯ ಕಡಿಮೆಯಾಗುತ್ತದೆ ಅದ
ಸರಿಪಡಿಸಬೇಕಿದೆ'

ಇದರರ್ಥವೇನು? ಯಾವುದನ್ನು ಮಾಡಿ ಎ
ಡಬ್ಲ್ಯುಟಿಒ ಹೇಳುತ್ತಿದೆಯೋ, ಅದಕ್ಕೆ ಸಹಿ ಹಾಕು
ಎಂದು ಅಬ್ಬರಿಸಿರುವ ಸರ್ಕಾರವು ಅದನ್ನು ಜಾರಿ ಮಾ
ಈಗಾಗಲೇ ಸುತ್ತೋಲೆಯ ಮೇಲೆ ಸುತ್ತೋಲೆ
ಹೊರಡಿಸುತ್ತಿದೆ. ಅಂದರೆ ತಾನು 'ದೇಶದ ಜನಸಾಮಾ
ರೈತರ ಪರವಾಗಿ ಕೆಲಸ ಮಾಡುವುದಾಗಿ' ಪೋ
ಕೊಡುತ್ತಾ, ಹಿಂದಿನ ಸರ್ಕಾರಕ್ಕಿಂತ ಕಠಿಣವಾದ ಕ್ರಮ
ಮುಂದಾಗುತ್ತಿದೆ. ಕರ್ನಾಟಕದಲ್ಲಿ ಕೃಷಿ ಬೆಲೆ ಆಯೋ
ಸ್ಥಾಪಿಸಿರುವ ಸರ್ಕಾರವು, ಸೂಕ್ತ ಬೆಲೆ ಖಾತರಿಪಡಿಸುವು
ಹೇಳಿತ್ತು. ಇದು ಸಿದ್ದರಾಮಯ್ಯನವರ ಸರ್ಕಾ
ಬಹುಮುಖ್ಯ ತೀರ್ಮಾನಗಳಲ್ಲೊಂದಾಗಿತ್ತು. ಈಗಾ
ಕೃಷಿ ವಿಜ್ಞಾನಿ ಪ್ರಕಾಶ್ ಕಮ್ಮರಡಿಯವರ ಅಧ್ಯಕ್ಷತೆ
ಅಂತಹ ಆಯೋಗವನ್ನು ರಚಿಸಲಾಗಿದೆ. ಕೇಂದ್ರ ಸರ್ಕಾ
ಸುತ್ತೋಲೆಯು ರಾಜ್ಯ ಸರ್ಕಾರದ ನಡೆಯ ಮೇಲೆ ಪರಿ
ಬೀರುವುದಿಲ್ಲವೇ? ಒಂದು ವೇಳೆ-ರಾಜ್ಯ ಸರ್ಕಾರ
ಉಲ್ಲಂಘಿಸಿದರೆ, ಕರ್ನಾಟಕಕ್ಕೆ ಬರಲೇಬೇಕಿರುವ ಕೇ
ಅನುದಾನದ ಕಡಿತವಾಗುವುದಿಲ್ಲವೇ ಎಂಬ ಪ್ರಶ್ನೆ ಏ

ಇಂತಹುದೇ ಆಷಾಢಭೂತಿತನಕ್ಕೆ, ಮತ್ತೊ
ಉದಾಹರಣೆ ಆಹಾರ ಭದ್ರತಾ ಕಾಯ್ದೆಯ
ಸಂಬಂಧಿಸಿದ್ದುದಾಗಿದೆ. ಸದರಿ ಕಾಯ್ದೆಯನ್ನು ಈ
ನಂತರದ 34 ತಿಂಗಳಲ್ಲಿ ಜಾರಿ ಮಾಡಿದರೆ ಸಾಕು
ಎನ್‌ಡಿಎ ಸರ್ಕಾರವು ರಾಜ್ಯಗಳಿಗೆ ಸೂಚಿಸಿದೆ.
ಅವಧಿ ಆದಕ್ಕೆ ಏಕೆ ಬೇಕಾಗಿದೆ? ಬಜೆಟ್‌ನಲ್ಲಿ
ವಿತ್ತ ಮಂತ್ರಿ ಅರುಣ್ ಜೇಟ್ಲಿ ನೀಡಲಾಗಿರುವ ಹ
ಎನ್‌ಡಿಎ ಸರ್ಕಾರದ ಧೋರಣೆಯನ್ನು ಸೂಚಿಸ
ಹಿಂದಿನ ಯುಪಿಎ ಸರ್ಕಾರವು 1,32,000
ರೂ. ಅಗತ್ಯವಿದೆ ಎಂದು ಅಂದಾಜಿಸಿತ್ತು, ಆದರೆ
ಸರ್ಕಾರ ಇಟ್ಟಿರುವುದು 1,15,000 ಕೋಟಿ ರೂ.

ಅಂದರೆ ಮೋದಿ ಯಾರ ಮಗ ಆದರೆ
ಕಾರ್ಪೋರೇಟ್ ಹಿತ ಕಾಪಾಡುವಲ್ಲಿ ಪ್ರತಿ ಹೆಜ್ಜೆ
ಹಿಂದೆ ಬೀಳುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ.

ಕಂಬಾಲಪಲ್ಲಿ ದಲಿತರಿಗೆ ಮತ್ತೊಮ್ಮೆ ಅನ್ಯಾಯ

ಹದಿನಾಲ್ಕು ವರ್ಷಗಳ ಹಿಂದೆ ...ಬಾಲಪಲ್ಲಿಯಲ್ಲಿ ಸವರ್ಣೀಯರಿಂದ ಜೀವಂತವಾಗಿ ...ಕಿಯಲ್ಲಿ ಸುಟ್ಟು ಕರಕಲಾದ ಏಳು ಜನ ದಲಿತರಿಗೆ ...ತ್ತು ಹೈಕೋರ್ಟ್‌ನಲ್ಲೂ ನ್ಯಾಯ ಎಂಬುದು ...ರೀಚಿಕೆಯಾಗಿದೆ. ಸರಿಯಾದ ಸಾಕ್ಷಗಳಿಲ್ಲದ ಕಾರಣಕ್ಕೆ ...ನ ನ್ಯಾಯಾಲಯ 2006ರಲ್ಲಿ ನೀಡಿದ್ದ ತೀರ್ಪನ್ನೇ ...ಹಿಡಿದಿರುವ ಹೈಕೋರ್ಟ್ ಎಲ್ಲಾ 46 ...ರೋಪಿಗಳನ್ನು ಖುಲಾಸೆಗೊಳಿಸಿದೆ.

2000ರ ಮಾರ್ಚ್ 11ರಂದು ನಡೆದ ಈ ...ಭತ್ಸ ಪ್ರಕರಣದಲ್ಲಿ ಶ್ರೀರಾಮಪ್ಪ, ಆತನ ...ಹೋದರ ಆಂಜನಪ್ಪ ಮಾತ್ರವಲ್ಲದೆ ಅವರ ತಾಯಿ ...ಮಕ್ಕ, ಅಕ್ಕ ಸುಬ್ಬಮ್ಮ, ಸಂಬಂಧಿಕರಾಗಿದ್ದ ಪಾಪಮ್ಮ, ...ಂಥ ಮತ್ತು ಕುಂಟ ಪಾಪಣ್ಣ ಎಂಬುವವರು ...ವಾಗಿದ್ದರು. ಇಡೀ ರಾಜ್ಯವನ್ನೇ ತಲ್ಲಣಗೊಳಿಸಿದ್ದ ...ಪ್ರಕರಣದ ನಂತರ ನಡೆದ ವಿಚಾರಣೆಯಲ್ಲಿ ...ನಾಯಿತು ಎಂದು ನೋಡಿದರೆ ನಮ್ಮ ಸಮಾಜ ...ವ ದಿಕ್ಕಿನತ್ತ ಸಾಗುತ್ತಿದೆ ಎಂಬುದು ...ವಾಗುತ್ತದೆ.



...ಕಂಬಾಲಪಲ್ಲಿಯ ಮಾರಣಹೋಮಕ್ಕೆ ಒಂದು ...ಹಾಸವೇ ಇತ್ತು. ಹೇಳಿಕೇಳಿ ಕೋಲಾರ ...ಧ್ರಪ್ರದೇಶಕ್ಕೆ ಆತುಕೊಂಡಿರುವ ಜಿಲ್ಲೆ. ...ಮಾನವಾಗಿ ಇಲ್ಲಿ ಆಂಧ್ರದ ಹೊಡಿ, ಬಡಿ, ...ಬು ಮತ್ತು ಬಂದೂಕು ಸಂಸ್ಕೃತಿಯೇ ...ನುಸುಹೊಕ್ಕಿದೆ. ಇಲ್ಲಿ ಪರಿಶಿಷ್ಟ ಜಾತಿ ಮತ್ತು ...ದವರು ಇತರೆಡೆಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ...ಲುಜಾತಿಯವರದಿ ಆ ಸಮುದಾಯಗಳ ...ಷಣೆಯೂ ಅಷ್ಟೇ ಹೆಚ್ಚಾಗಿದೆ. ಹಲವಾರು ...ಕಗಳಿಂದ ಇಲ್ಲಿ ದಲಿತರ ಮೇಲೆ ರೆಡ್ಡಿಗಳ ...ಹಾಸ ಮುಂದುವರಿದೇ ಬಂದಿದೆ.

...ಎಂಭತ್ತರ ದಶಕದಲ್ಲಿ ದಲಿತ ಸಂಘರ್ಷ ...ತಿಯ ಚಟುವಟಿಕೆಗಳು ಹೆಚ್ಚಾದಾಗ ದಲಿತ ...ವಕರೂ ಜಾಗೃತಗೊಳ್ಳಲಾರಂಭಿಸಿದರು. ಒಂದಿಷ್ಟು ... ಮತ್ತು ಹಣ ಸಂಪಾದಿಸಲಾರಂಭಿಸಿದ ದಲಿತ ...ವಕರು ವಾಚ್ ಕಟ್ಟಿಕೊಳ್ಳುವುದನ್ನು, ಬೈಕ್ ...ಸುವುದನ್ನು ಪ್ರಾರಂಭಿಸಿದರು. ಅಲ್ಲಿಯತನಕ ತಮ್ಮ ...ಯಾಳುಗಳಾಗಿದ್ದ ದಲಿತರು ಹೀಗೆ ...ವೃದ್ಧಿಗೊಂಡಿದ್ದು', ತಮ್ಮ ಹಕ್ಕುಗಳನ್ನು ಅರಿತದ್ದು ... ಯುವಕರಿಗೆ ಸಹಿಸಲಾಗಲಿಲ್ಲ. ಆಗ ರೆಡ್ಡಿ ಮತ್ತು ...ತ ಯುವಕರ ಗುಂಪುಗಳ ನಡುವೆ ಚಕಮಕಿಗಳು ...ಮಾನ್ಯವಾಗಲಾರಂಭಿಸಿದವು.

...ಒಮ್ಮೆ ಇಂತಹ ಚಕಮಕಿ ಒಂದರಲ್ಲಿ ರೆಡ್ಡಿ ...ಡುಗರು ಶ್ರೀರಾಮಪ್ಪ ಎಂಬ ದಲಿತ ಯುವಕನ ...ಪಿಗೆ ಸೇರಿದ್ದ ಹುಡುಗರ ಮೇಲೆ ದಾಳಿ ...ಡಿದರು. ಆಗ ಶ್ರೀರಾಮಪ್ಪ ತನ್ನ ...ತರರೊಂದಿಗೆ ರೆಡ್ಡಿ ಯುವಕರ ವಿರುದ್ಧ ಪೊಲೀಸ್ ...ಠಾಣೆಯಲ್ಲಿ ದೂರು ಸಲ್ಲಿಸಿದ. ತಮ್ಮ ವಿರುದ್ಧ ...ಲೀಸರಿಗೆ ದೂರು ನೀಡುವಷ್ಟು ಪೊಗರು ...ರಾಮಪ್ಪನಿಗೆ ಬಂತೆ ಎಂದು ರೆಡ್ಡಿ ಯುವಕರು ಕತ್ತಿ ...ಯಲಾರಂಭಿಸಿದರು.

...ಅಂದು ದೂರು ಕೊಟ್ಟ ನಂತರ ಶ್ರೀರಾಮಪ್ಪ, ... ಸಹೋದರ ಆಂಜನಪ್ಪ ಮತ್ತು ಇತರರು ...ಲಪಲ್ಲಿಗೆ ವಾಪಸ್ಸಾಗುತ್ತಿದ್ದಂತೆ ರೆಡ್ಡಿ ಯುವಕರ ...ಗುಂಪೊಂದು ಅವರ ಮೇಲೆ ಮುಗಿಬಿತ್ತು. ...ಹೊಡೆದಾಟದಲ್ಲಿ ಚೂರಿಗಳು ಹೊರಬಂದು ಕೃಷ್ಣಾ... ಎಂಬ ಯುವಕನ ಹೆಣ ಉರುಳಿತು. ಇದಾದದ್ದೇ ತಡ, ಇಡೀ ಕಂಬಾಲಪಲ್ಲಿ ಯುದ್ಧ ಭೂಮಿಯಾಯಿತು. ಪ್ರಾಣ ರಕ್ಷಿಸಿಕೊಳ್ಳಲು ಶ್ರೀರಾಮಪ್ಪ ಮತ್ತು ಆಂಜನಪ್ಪನ ತಮ್ಮ ಪುಟ್ಟ ಮನೆಯನ್ನು ಹೊಕ್ಕು ಬಾಗಿಲುಗಳನ್ನು ಮುಚ್ಚಿದರು.

ರೆಡ್ಡಿಗಳು ಆ ಮನೆಯ ಬಾಗಿಲನ್ನು ಹೊಡೆಯಲು ಯತ್ನಿಸಿದರು. ಸೂರನ್ನು ಒಡೆಯಲು ನೋಡಿದರು. ಅದ್ಯಾವುದೂ ಸಾಧ್ಯವಾಗದಿದ್ದಾಗ ಹತ್ತಿರದಲ್ಲೇ ಇದ್ದ ಬಣವೆಯಿಂದ ಒಣಹುಲ್ಲು ತಂದು ದಲಿತರು ಅಡಗಿಕೊಂಡಿದ್ದ ಮನೆಯ ಬಾಗಿಲು ಮತ್ತು ಕಿಟಕಿಗಳಿಗೆ ಒತ್ತಿ ಇಟ್ಟರು. ರೆಡ್ಡಿ ಸಮುದಾಯಕ್ಕೆ ಸೇರಿದ್ದ ಸೀಮೆಎಣ್ಣೆ ವ್ಯಾಪಾರಿ ಒಬ್ಬನಿಂದ ಬ್ಯಾರೆಲ್ ಸೀಮೆಎಣ್ಣೆ ತಂದು ಮನೆಯ ಮೇಲೆ ಸುರಿದು ಮನೆಗೆ ಬೆಂಕಿ ಇಟ್ಟರು. ಹೊರಗಿದ್ದವರ ಅಟ್ಟಹಾಸದ ಗದ್ದಲದಲ್ಲಿ ಒಳಗೆ ಬೆಂಕಿಯಲ್ಲಿ ಸುಡುತ್ತಿದ್ದವರ ಆಕ್ರಂದನ ಕೇಳಿಸಲೇ ಇಲ್ಲ. ರೆಡ್ಡಿಗಳ ರಣಕೇಕೆ ಹೇಗಿತ್ತೆಂದರೆ ಸ್ವಲ್ಪ ಸಮಯದ ನಂತರ ಬೆಂಕಿಯನ್ನು ಆರಿಸಲು ಬಂದ ಫೈರ್ ಇಂಜಿನ್ ಸಿಬ್ಬಂದಿಗಳೂ ಕೈಕಟ್ಟಿ ಕೂರುವಂತೆ ಧಮಕಿ ಹಾಕಿದ್ದರು.

ಈ ಪ್ರಕರಣದ ನಂತರ ಕಂಬಾಲಪಲ್ಲಿ ಸ್ಮಶಾನವಾದಂತಾಯಿತು. ದಲಿತರು ಅಲ್ಲಿ ಬದುಕುವುದಕ್ಕೇ ಅಂಜಲಾರಂಭಿಸಿದರು. ಆಗ ಅವರನ್ನೆಲ್ಲ ಚಿಂತಾಮಣಿಯ ಹತ್ತಿರದ ಪ್ರದೇಶಕ್ಕೆ ಸ್ಥಳಾಂತರಿಸಲಾಯಿತು. ಆ ಜಾಗವನ್ನೀಗ ಮಿನಿ ಕಂಬಾಲಪಲ್ಲಿ ಎಂದೇ ಸ್ಥಳೀಯರು ಕರೆಯುತ್ತಾರೆ.

ಈ ಪ್ರಕರಣ ಕೋರ್ಟ್ ಮೆಟ್ಟಿಲು ಏರಿದ ನಂತರ ಮೇಲುಜಾತಿಯವರ ಪ್ರವರ ಮತ್ತೊಮ್ಮೆ ಶುರುವಾಯಿತು. ಮಾರಣಹೋಮಕ್ಕೆ ಪ್ರತ್ಯಕ್ಷಸಾಕ್ಷಿಗಳಾಗಿದ್ದ ದಲಿತರು ನ್ಯಾಯಾಲಯದ ಮುಂದೆ ಸತ್ಯ ಹೇಳದಂತೆ ಕೆಲವರನ್ನು ಬೆದರಿಸಿದರು, ಇನ್ನೂ ಕೆಲವರಿಗೆ ದುಡ್ಡು ಕೊಟ್ಟು ಬಾಯಿ ಮುಚ್ಚಿಸಿದರು. ಪರಿಣಾಮವಾಗಿ ಎಲ್ಲಾ ಸಾಕ್ಷಿದಾರರು ನ್ಯಾಯಾಲಯದ ಮುಂದೆ ತಾವು ಕಂಡಿದ್ದ ಸತ್ಯವನ್ನು ಹೇಳದೆ ಸುಮ್ಮನಾದರು.


ಇದಾದ ಹಲವು ವರ್ಷಗಳ ನಂತರ ಕೆಲವು ಸಾಕ್ಷಿದಾರರು ತಮಗೆ ರಕ್ಷಣೆ ನೀಡಿದರೆ ಸತ್ಯ ಹೇಳುವುದಾಗಿಯೂ, ಹಿಂದೆ ತಾವು ಯಾವ ಕಾರಣಕ್ಕೆ ಸತ್ಯವನ್ನು ಹೇಳಲಾಗಿರಲಿಲ್ಲವೆಂದೂ ಒಪ್ಪಿಕೊಳ್ಳಲು ಮುಂದಾದರು. ಸಾವನ್ನಪ್ಪಿದ್ದ ದಲಿತರ ಪರವಾಗಿ ನ್ಯಾಯಾಲಯದಲ್ಲಿ ವಾದ ಮಂಡಿಸುತ್ತಿದ್ದ ಹಿರಿಯ ವಕೀಲರಾದ ಬಿ.ಟಿ.ವೆಂಕಟೇಶ್, ಚಂದ್ರಮೌಳಿ ಮತ್ತು ಮಲ್ಲಿಕಾರ್ಜುನ್ ಮಸಲಿ ಅವರುಗಳು ಈ ಬಗ್ಗೆ ನ್ಯಾಯಾಲಯಕ್ಕೆ ಅರ್ಜಿ ಹಾಕಿದರು. ಆದರೆ ಪ್ರಕರಣ ನಡೆದು ಹಲವಾರು ವರ್ಷಗಳೇ ಉರುಳಿದ್ದರಿಂದ ಇಂತಹ ಅರ್ಜಿಯನ್ನು ಸ್ವೀಕರಿಸಲು ನ್ಯಾಯಾಲಯ ಒಪ್ಪಿಗೆ ನೀಡಲಿಲ್ಲ.

ಜೊತೆಗೆ ಇನ್ನೊಂದು ಸಮಸ್ಯೆಯೂ ಎದುರಾಗಿತ್ತು. ಅಂದು ನಡೆದ ಕೃಷ್ಣಾರೆಡ್ಡಿಯ ಕೊಲೆ ಮತ್ತು ಶ್ರೀರಾಮಪ್ಪ ಮತ್ತು ಕುಟುಂಬದವರ ಸಜೀವ ದಹನಕ್ಕೆ ಪ್ರತ್ಯಕ್ಷಸಾಕ್ಷಿಗಳಾಗಿದ್ದ ಎಲ್ಲರೂ ತೆಲುಗು ಭಾಷಿಕರು. ಅವರು ಕೊಟ್ಟ ಹೇಳಿಕೆಗಳನ್ನು ನ್ಯಾಯಾಲಯಕ್ಕೆಂದು ಕನ್ನಡಕ್ಕೆ ಅನುವಾದ ಮಾಡಲಾಗಿತ್ತು, ಆದರೆ ಆ ಅನುವಾದ ಎಷ್ಟು ಸರಿಯಾಗಿದೆ ಎಂಬುದರ ಬಗ್ಗೆಯೇ ಅನುಮಾನಗಳಿದ್ದವು.

ಈಗ ಈ ಕೊಲೆಗಳು ನಡೆದು ಹದಿನಾಲ್ಕು ವರ್ಷಗಳ ನಂತರ ಸೂಕ್ತ ಸಾಕ್ಷ್ಯಾಧಾರಗಳಿಲ್ಲದ ಕಾರಣ ಎಲ್ಲಾ ಆರೋಪಿಗಳು ಖುಲಾಸೆಗೊಂಡಿದ್ದಾರೆ.

ಒಟ್ಟಾರೆಯಾಗಿ ಈ ಪ್ರಕರಣ ಎತ್ತಿ ತೋರಿಸುತ್ತಿರುವುದು ಇಷ್ಟನ್ನೇ: ಎಲ್ಲಿಯತನಕ ಮೇಲುಜಾತಿಯವರ ತೋಳು ಮತ್ತು ಹಣ ಬಲ ತಾಂಡವವಾಡುತ್ತೋ ಅಲ್ಲಿಯ ತನಕ ದಲಿತರ ಪ್ರಾಣಕ್ಕಾಗಲಿ, ಸತ್ಯಕ್ಕಾಗಲಿ ನಯಾಪೈಸೆಯ ಬೆಲೆ ಇಲ್ಲ...

***



• ಗೌರಿ ಲಂಕೇಶ್

editorlankesh@gmail.com

ಕಂಡಹಾಗೆ

ದೆಹಲಿಯಲ್ಲಿ ನರೇಂದ್ರ ಮೋದಿಯ ಸರ್ಕಾರ ಅಧಿಕಾರಕ್ಕೆ ಬಂದನಂತರ ದೇಶದಾದ್ಯಂತ ಬೆಳೆಯುತ್ತಿರುವ ಬಲಪಂಥೀಯ ರಾಜಕೀಯ ಎಲ್ಲ ಪ್ರಗತಿಪರರಲ್ಲಿ, ಶಾಂತಿಪ್ರಿಯರಲ್ಲಿ, ಜಾತ್ಯತೀತರಲ್ಲಿ ಸಹಜವಾಗಿಯೇ ಆತಂಕ ಮೂಡಿಸಿದೆ. ಕೋಮುವಾದದ ಜೊತೆಜೊತೆಗೆ ನವ ಉದಾರವಾದಿ ಕಾರ್ಪೊರೇಟ್ ಫ್ಯಾಸಿಸಂ ಕೂಡ ಬಲಗೊಳ್ಳುತ್ತಿದೆ. ಈ ಎರಡೂ ಜನವಿರೋಧಿ ತತ್ವಗಳನ್ನು ಎದುರಿಸುವುದು ಹೇಗೆ ಎಂಬ ಚಿಂತೆಯೂ ಜನರನ್ನು ಕಾಡುತ್ತಿದೆ. ಈ ನಿಟ್ಟಿನಲ್ಲಿ ಕಳೆದ ಶನಿವಾರ ಮತ್ತು ಭಾನುವಾರ ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಬೆಂಗಳೂರಿನಲ್ಲಿ ಆಯೋಜಿಸಿದ್ದ 'ರಾಷ್ಟ್ರ ಮಟ್ಟದ ಚಿಂತನಾ ಸಭೆ' ಎಲ್ಲರಲ್ಲೂ ಹೊಸ ಭರವಸೆಯನ್ನು ಮೂಡಿಸಿತು.

ಈ ಸಭೆಯಲ್ಲಿ ಮುಂಬೈನಿಂದ ಬಂದಿದ್ದ ತೀಸ್ತಾ ಸೆಟ್ಲವಾದ್, ಆನಂದ್ ತೇಲ್‌ತುಂಬ್ಡೆ ಮತ್ತು ರಾಮ್ ಪುನಿಯಾನಿ, ದೆಹಲಿಯಿಂದ ಬಂದಿದ್ದ ಸುಭಾಷ್ ಗಟಾಡೆ, ಕಲ್ಕತ್ತಾದಿಂದ ಬಂದಿದ್ದ ಕುನಲ್ ಚಟ್ಟೋಪಾಧ್ಯಾಯ ಭಾಗವಹಿಸಿದರಲ್ಲದೆ, ಗುಜರಾತ್, ಪಂಜಾಬ್, ಪಶ್ಚಿಮ ಬಂಗಾಲ, ತಮಿಳು ನಾಡು, ಮಹಾರಾಷ್ಟ್ರ ಮತ್ತು ಇತರೆ ರಾಜ್ಯಗಳಲ್ಲಿ ಜನಪರವಾಗಿ ಹೋರಾಡುತ್ತಿರುವ ಸಂಘಟನೆಗಳ ಪ್ರತಿನಿಧಿಗಳೂ ಬಂದಿದ್ದರು. ಜೊತೆಗೆ ರಾಜ್ಯದ ಹಲವಾರು ಜಿಲ್ಲೆಗಳಿಂದಲೂ ಕಾರ್ಯಕರ್ತರು ಹಾಜರಾಗಿದ್ದರು. ಅಷ್ಟೇ ಮುಖ್ಯವಾಗಿ ಸಿಪಿಐ (ಎಂ) ನಾಯಕರಾದ ಜಿ.ಎನ್.ನಾಗರಾಜ್ ಮತ್ತು ಗುರುಶಾಂತ್ ಹಾಗು ಸಿಪಿಐ ಪಕ್ಷದ ಹಿರಿಯರಾದ ಸಿದ್ದನಗೌಡ ಪಾಟೀಲ್ ಮತ್ತು ಮಿತ್ರ ಸಾತಿ ಸುಂದರೇಶ್ ಜೊತೆಗೆ ಇತರೆ ಕಾಮ್ರೇಡ್‌ಗಳು ಸುಮಾರು ಒಂದು ದಶಕದ ನಂತರ ವೇದಿಕೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಎಲ್ಲರಿಗೂ ಸಂತೋಷ ತಂದಿತು.

ವಿವಿಧ ಕಡೆಗಳಿಂದ ಬಂದಿದ್ದ ಜಾತ್ಯತೀತ ಜನರನ್ನು ನೋಡಿ ಹಿರಿಯ ಸ್ವಾತಂತ್ರ ಹೋರಾಟಗಾರರಾದ ಎಚ್.ಎಸ್.ದೊರೆಸ್ವಾಮಿಯವರಿಗೆ ಅದೆಷ್ಟು ಉಲ್ಲಾಸವಾಯಿತೆಂದರೆ ಅವರು ಬರೋಬ್ಬರಿ 40 ನಿಮಿಷಗಳ ಕಾಲ ಎಲ್ಲರನ್ನು ಉದ್ದೇಶಿಸಿ ಮಾತನಾಡಿದರು.

ದೇಶದ ವಿವಿಧ ಕಡೆ ಹಂಚಿಹೋಗಿರುವ ಎಲ್ಲ ಜಾತ್ಯತೀತರು ಮತ್ತು ಪ್ರಗತಿಪರ ಸಂಘಟನೆಗಳೂ ಜೊತೆಗೂಡಿ ಸೌಹಾರ್ದ ಭಾರತವನ್ನು ಕಟ್ಟುವ ಮಾರ್ಗ, ಶೈಲಿ, ಬಳಸುವ ಮಾಧ್ಯಮ, ಭಾಷೆ ಇತ್ಯಾದಿಗಳ ಬಗ್ಗೆ ಉಪಯುಕ್ತ ಚರ್ಚೆಗಳಾದವು.

ಸೌಹಾರ್ದ ಭಾರತವನ್ನು ನಿರ್ಮಿಸುವ ನಿಟ್ಟಿನಲ್ಲಿ ಇಂತಹ ಒಂದು ರಾಷ್ಟ್ರಮಟ್ಟದ ಕಾರ್ಯಕ್ರಮವನ್ನು ನಮ್ಮ ವೇದಿಕೆ ಆಯೋಜಿಸಿದ್ದನ್ನು ತೀಸ್ತಾ ತುಂಬು ಹೃದಯದಿಂದ ಸ್ವಾಗತಿಸಿದರು. ತೀಸ್ತಾರ ಅಪ್ಪಟ ಅಭಿಮಾನಿಯೂ ನನ್ನ ಹಲವಾರು ವರ್ಷಗಳ ಮಿತ್ರರಾದ ಫಿರೋಜ್ ಎಸ್ಟೇಟ್‌ನ ಮಾಲೀಕ ಫಿರೋಜ್ ತಮ್ಮ ಮನೆಯಲ್ಲಿ ಭಾನುವಾರ ಮಧ್ಯಾಹ್ನ ಊಟಕ್ಕೆ ತೀಸ್ತಾ ಮತ್ತು ನನ್ನನ್ನು ಆಹ್ವಾನಿಸಿದ್ದರು. ಭಾನುವಾರವೇ ಬೆಂಗಳೂರಿನಲ್ಲಿ ಸಿಪಿಐ (ಎಮ್) ಪಕ್ಷದ ಒಂದು ಕಾರ್ಯಕ್ರಮವೂ ಇದ್ದಿದ್ದರಿಂದ ಅವತ್ತು ಆ ಪಕ್ಷದ ಹಿರಿಯ ನಾಯಕ ಸೀತಾರಾಮ್ ಯಚೂರಿಯವರೂ ಬೆಂಗಳೂರಿನಲ್ಲಿದ್ದರು. ಯಚೂರಿಯವರನ್ನೂ ಫಿರೋಜ್ ಆಹ್ವಾನಿಸಿದ್ದರು.

ಸಾಮಾನ್ಯವಾಗಿ ಕಮ್ಯೂನಿಸ್ಟ್ ಪಕ್ಷಗಳು ಇತರೆ ಸಂಘಟನೆಗಳೊಂದಿಗೆ ಜಂಟಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲ, ಹಾಗೊಮ್ಮೆ ಭಾಗವಹಿಸಿದರೂ ಆ ಪಕ್ಷಗಳೇ ಹೋರಾಟದ ಮುಂಚೂಣಿಯಲ್ಲಿ ನಿಲ್ಲುತ್ತವೆ. ಅದರಲ್ಲೂ 'ನಕ್ಸಲ್' ವಾಸನೆ ಇದ್ದರಂತೂ ದೂರವಿಡುತ್ತಾರೆ. ಕಳೆದ ಹಲವಾರು ವರ್ಷಗಳಿಂದ ನಮ್ಮ ವೇದಿಕೆಯಲ್ಲಿ 'ನಕ್ಸಲ್ ಬೆಂಬಲಿಗರಿದ್ದಾರೆ' ಎಂದು ಆರೋಪಿಸಿದ ಕಮ್ಯೂನಿಸ್ಟ್ ಪಕ್ಷಗಳು ದೂರ ಉಳಿದಿದ್ದವು. ಆದರೀಗ ಪರಿಸ್ಥಿತಿ ಬದಲಾಗಿದೆ. ಎಲ್ಲ ಕಡೆ ಪ್ರಗತಿಪರ ಚಿಂತಕರು ಮತ್ತು ಎಡಪಂಥೀಯ ವಲಯ ಕರಗುತ್ತಿರುವುದರಿಂದ ಫ್ಯಾಸಿಸಂ ವಿರುದ್ಧದ ಹೋರಾಟದಲ್ಲಿ ಎಲ್ಲರೂ ಜೊತೆಗೂಡಬೇಕಿದೆ. ಹಾಗೆ ಆದರೆ ಮಾತ್ರ ಆ ಹೋರಾಟ ಪ್ರಬಲವೂ ಫಲಪ್ರದವೂ ಆಗುತ್ತದೆ.

ಅವತ್ತು ಫಿರೋಜ್ ಅವರ ಪತ್ನಿ ತಯಾರಿಸಿದ್ದ ರುಚಿಕರವಾದ ಮಟನ್ ಬಿರಿಯಾನಿ ಮತ್ತು ಚಿಕನ್ ಟಿಕ್ಕಾ ತಿನ್ನುತ್ತಿದ್ದಾಗ ಯಚೂರಿಯವರೊಂದಿಗೆ ಮಾತನಾಡಿದೆ. ಅವರೂ ಕೂಡ "ಇನ್ನು ಮುಂದೆ ನಾವು ಎಡಪಂಥೀಯರೂ ವಿಭಿನ್ನವಾಗಿ ಯೋಚಿಸಬೇಕಿದೆ. ನಮ್ಮನಮ್ಮಲ್ಲೇ ಬಿರುಕುಗಳನ್ನು ಮೂಡಿಸಿಕೊಂಡು ಕೂತರೆ ಆಗುವುದಿಲ್ಲ. ಈ ದೇಶದಲ್ಲಿ ಅದೆಷ್ಟೋ ಜನ ಎಡ ಪಕ್ಷಕ್ಕೆ ಸೇರಿರದಿದ್ದರೂ ಪ್ರಗತಿಪರರಾಗಿದ್ದಾರೆ, ಜಾತ್ಯತೀತರಾಗಿದ್ದಾರೆ. ನಾವೆಲ್ಲರೂ ಜೊತೆಗೂಡಿ ಕೆಲಸ ಮಾಡಬೇಕಿದೆ. ಆಗ ಮಾತ್ರ ಹಿಂದೂತ್ವ ಕೋಮುವಾದವನ್ನು ಎದುರಿಸಬಹುದು ಮತ್ತು ಅದನ್ನು ತಡೆಯಬಹುದು" ಎಂದು ಒಪ್ಪಿಕೊಂಡರು.

ಆಗ ತೀಸ್ತಾ ನಮ್ಮ ವೇದಿಕೆ ಮಾಡುತ್ತಿರುವ ಕೆಲಸಗಳನ್ನು ಮುಕ್ತ ಕಂಠದಿಂದ ಕೊಂಡಾಡಿದರು. "ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಹೊಸ ರೀತಿಯಲ್ಲಿ ಕೆಲಸ ಮಾಡುತ್ತಿದೆ. ರೈತ ಮತ್ತು ದಲಿತ ಸಂಘಟನೆಗಳಲ್ಲದೆ ಇನ್ನೂ ಹಲವಾರು ಸಂಘಟನೆಗಳನ್ನು ಮತ್ತು ವ್ಯಕ್ತಿಗಳನ್ನು ಜೊತೆಗೂಡಿಸಿ ಹೋರಾಟ ಮಾಡುತ್ತಿದೆ. ಇದನ್ನೇ ರಾಷ್ಟ್ರಮಟ್ಟದಲ್ಲೂ ಮಾಡಬೇಕಿದೆ" ಎಂದು ಯಚೂರಿಯವರಿಗೆ ಹೇಳಿದರು.

ಅಲ್ಲಿಂದ ಹೊರಡುವ ಮುನ್ನ ಯಚೂರಿಯವರು ಮತ್ತೊಮ್ಮೆ "ಎಲ್ಲರೂ ಜೊತೆಯಾಗಿ ಹೋರಾಡೋಣ" ಎಂದು ಹೇಳಿದರು.

ಎರಡು ದಿನಗಳ ಚಿಂತನಾ ಸಭೆಯ ಕೊನೆಗೆ ನಾವೆಲ್ಲರೂ ಟೌನ್‌ಹಾಲ್ ಮುಂದೆ ಸೇರಿದೆವು. ಅಲ್ಲಿ ಎಲ್ಲೆಡೆ ಮಹಿಳೆಯರ ಮೇಲಾಗುತ್ತಿರುವ ದಮನ, ಗಾಜಾ ಪಟ್ಟಿಯಲ್ಲಿ ಪ್ಯಾಲೆಸ್ತೀನಿಯರ ಮೇಲಾಗುತ್ತಿರುವ ದಾಳಿ ಮತ್ತು ಐಎಸ್‌ಐಎಸ್ ಎಂಬ ಭಯೋತ್ಪಾದಕ ಸಂಘಟನೆ ಸಿರಿಯಾದಲ್ಲಿ ಮಾಡುತ್ತಿರುವ ಕೊಲೆಗಳನ್ನು ಖಂಡಿಸಿದೆವು.

ಈ ಎರಡು ದಿನಗಳ ಸಭೆಯಲ್ಲಿ ಭಾಗವಹಿಸಿದ ಎಲ್ಲ ಹಿರಿಯ ಮತ್ತು ಕಿರಿಯ ಮಿತ್ರರಿಗೂ, ವಿಶೇಷವಾಗಿ ಕಮ್ಯೂನಿಸ್ಟ್ ಪಕ್ಷಗಳ ಕಾಮ್ರೇಡುಗಳಿಗೂ ವೇದಿಕೆಯ ಪರವಾಗಿ ಧನ್ಯವಾದಗಳು. ■


ವಿಶೇಷ ಸೂಚನೆ

ಮುಂದಿನ ಗುರುವಾರ ಗೌರಿ ಹಬ್ಬವಾದ್ದರಿಂದ ನಮ್ಮ ಪತ್ರಿಕೆ ಬುಧವಾರವೇ ಮುದ್ರಣಗೊಂಡು ಬೆಂಗಳೂರು ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಗುರುವಾರ ಲಭ್ಯವಿರುತ್ತದೆ. ಹಾಗೆಯೇ ಇತರ ಪ್ರದೇಶಗಳಲ್ಲಿ ಶುಕ್ರವಾರ ಸಿಗುತ್ತದೆ.

ನಮ್ಮೆಲ್ಲ ಏಜೆಂಟರೂ ಮತ್ತು ಓದುಗರೂ ಸಹಕರಿಸಬೇಕೆಂದು ವಿನಂತಿ.

ಎಲ್ಲರಿಗೂ ಗೌರಿ ಮತ್ತು ಗಣೇಶ ಹಬ್ಬದ ಶುಭಾಶಯಗಳು.

■ ವ್ಯವಸ್ಥಾಪಕ




ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಲ್ಲಿ ಸಕ್ರಿಯರಾಗಿದ್ದ, ಸ್ನೇಹಜೀವಿಯಾಗಿದ್ದ, ಮಾನವೀಯತೆಯ
ಸಂಕೇತದಂತಿದ್ದ ನಮ್ಮೆಲ್ಲರ ಮಿತ್ರ ಯುವರಾಜ್ ಕಳೆದ ಭಾನುವಾರ, ಆಗಸ್ಟ್ 17ರಂದು, ತಮ್ಮ 42ನೆ
ವಯಸ್ಸಿನಲ್ಲಿ ಅನಾರೋಗ್ಯದಿಂದ ತೀರಿಕೊಂಡರು. ನಿಮ್ಮ ಈ ಪತ್ರಿಕೆಯ ಮಿತ್ರರಾಗಿದ್ದ ಯುವರಾಜ್ ಅವ
ವ್ಯಕ್ತಿತ್ವವನ್ನು ಮತ್ತು ಸಮಾಜಕ್ಕೆ ಅವರು ನೀಡಿದ್ದ ಕೊಡುಗೆಯನ್ನು ಪರಿಚಯಿಸುವ ಲೇಖನಗಳು ಇಲ್ಲಿವ

ಯುವರಾಜನ ನೆನಪಲ್ಲಿ...

ನಮ್ಮ ನಡುವಿನ ಕೆಲವರು ವಿಲಕ್ಷಣಸ್ಥರು! ಎಡವಟ್ಟರು! 'ಸಂಪ್ರದಾಯ'ದ ಹೆಸರಲ್ಲಿ ಬಗ್ಗಿಸಲು ನೋಡಿದಷ್ಟೂ ತೋಳೇರಿಸಿಕೊಂಡು ಹೋಗುವ 'ತಂಟೆಕೋರರು'! ದಿನನಿತ್ಯದ ಅನ್ಯಾಯಕ್ಕೆ ತಿರುಗಿ ಬೀಳುತ್ತಲೇ ಇರುವ ಸತತಕರ್ಮಿಗಳು. ನಿಮ್ಮ ಯಥಾಸ್ಥಿತಿವಾದದ ಹುಟ್ಟನ್ನು ಅಲ್ಲಾಡಿಸಲು ಪ್ರಯತ್ನ ಮಾಡುತ್ತಲೇ ಇರುವ ಆಶಾವಾದಿಗಳು. ಯಾವತ್ತೋ ಒಂದು ದಿನ ಸಾಮಾಜಿಕ ನ್ಯಾಯವೆಂಬುದು ನಮಗೆ ದಕ್ಕುತ್ತದೆ ಎಂದು ನಂಬಬಲ್ಲ ಕನಸಿಗರು. ವ್ಯವಸ್ಥೆಗೆ ಅವರನ್ನು ಸುಲಭವಾಗಿ ಒತ್ತರಿಸಲು ಆಗದಂತೆ ಸದಾ ಸೆಡ್ಡು ಹೊಡೆದು ನಿಲ್ಲುವವರು! ಇವರು ಸುಲಭವಾಗಿ ಬಾಯಿ ಮುಚ್ಚಿಸಲಾಗದ 'ತಲೆಹರಟೆ'ಗಳು! ಆದರೆ ಮನುಷ್ಯ ಜನಾಂಗ ಮುಂದಿಡುವ ಪ್ರತಿ ಹೆಜ್ಜೆಯ ಹಿಂದಿನ ಶ್ರಮವೆಲ್ಲಾ ನಿಸ್ಸಂದೇಹವಾಗಿ ಇಂಥ 'ಅಧಿಕಪ್ರಸಂಗಿ'ಗಳದ್ದೇ.

ಇದು ಆಪಲ್ ಕಂಪೆನಿಯ ಜಾಹೀರಾತು! ಆದರೂ ಅಲ್ಲಿ ಹೇಳಿರುವುದೆಲ್ಲಾ ಯುವರಾಜನನ್ನು ಚಿತ್ರಿಸುತ್ತದೆ ಅಂತನ್ನಿಸಿದರೆ ಅದು ನಿಜವೂ ಹೌದು.


ಶ್ರದ್ಧಾಂಜಲಿಯ ರೀತಿನೀತಿಗಳು ಮಾರುಕಟ್ಟೆಯ ಸರಕಾಗಿ 'ಈ' ಕಾರ್ಡುಗಳ ರೂಪದಲ್ಲಿ, ಫ್ಲೆಕ್ಸಿ ಬ್ಯಾನರುಗಳ ಗತ್ತಿನಲ್ಲಿ ('ಶ್ರೀಮಾನ್ —— ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ'!) ಮೆರೆಯುವ ಯುಗವಿದು. ಚಾಮರಾಜಪೇಟೆಯಲ್ಲಿ 'ಅವನು ಫ್ಲೆಕ್ಸಿ ಆಗಿಬಿಟ್ಟ ಸಾರ್!' ಎನ್ನುವುದು ದಿನನಿತ್ಯದ ಪರಿಭಾಷೆ ಎಂದು ಸ್ನೇಹಿತ ಶ್ರೀಧರಮೂರ್ತಿ ಹೇಳಿದ ನೆನಪು. ಸಾಂಸ್ಥಿಕತೆಯನ್ನು, ಜಡ್ಡುಬಿದ್ದ ರಚನೆಗಳನ್ನು, ವಿಧಿವಿಧಾನಗಳನ್ನು, ಆಚಾರ ಸಂಪ್ರದಾಯಗಳನ್ನು ಮತ್ತು ಮಾರುಕಟ್ಟೆಯನ್ನು ಯಾವತ್ತೂ ಗುಮಾನಿಯಿಂದಲೇ ನೋಡಿದ ಯುವರಾಜನಿಗೆ ನಮ್ಮ ಹಳಸಲು ಶ್ರದ್ಧಾಂಜಲಿಯ ಯಾವ ಹೊಸ ಒಗ್ಗರಣೆಯೂ ಬೇಕಿಲ್ಲ, ಬದುಕಿದ್ದಾಗ ಒತ್ತರಿಸುವ, ಸಾವಿನಂಚಿಗೆ ಸರಿದಾಗ 'ಭಾವಪೂರ್ಣ ಶ್ರದ್ಧಾಂಜಲಿ' ಅರ್ಪಿಸುವ ಮನುಷ್ಯರ ತೆವಲಿಗೆ ಯುವರಾಜನ ಕಣ್ಣುಗಳು ಕನ್ನಡಕದೊಳಗಿಂದ ನಗುವುದನ್ನು ಊಹಿಸಿಕೊಳ್ಳಬಹುದು. ಯಾರೂ ಬೇಕಾಗದ ಸ್ಥಿತಿಯನ್ನು ತಲುಪಿದಾಗಲೇ ಎಲ್ಲರೂ ದೌಡಾಯಿಸಿ ಬರುವ ಬದುಕಿನ ವಿಪರ್ಯಾಸ ಅವನಲ್ಲಿ ಇನ್ನಷ್ಟು ವಿಷಾದವನ್ನು ಹುಟ್ಟಿಸಬಹುದೇನೋ! ಅವನ ಈ ವಯಸ್ಸಿನಲ್ಲಿ ಅವನ ಸಾವನ್ನು ಅವನ ಸಮುದಾಯದ ಭಾಗವಾದ ನಾವು ನೋಡಬೇಕಾಯಿತಲ್ಲ ಎಂಬ ನಮ್ಮ ನೋವಿಗೆ ನಾವೇ ಮರುಗುತ್ತಾ ಆಡಬೇಕಾದ ಮಾತುಗಳಷ್ಟೇ ಉಳಿದಿರುವುದು. ಯಾಕೆಂದರೆ ನಾವು



ಮಗಳು ನೀಲಾ ಮತ್ತು ಯುವರಾಜ್

ನೋವನ್ನು ಅನುಭವಿಸುವ ರೀತಿ ನಮ್ಮ ಸಂಬಂಧಗಳನ್ನು ಬಿಚ್ಚಿಡುತ್ತದೆ. ಬದುಕಿನ ಹಾದಿಯಲ್ಲಿ ತನ್ಮಯತೆಯಿಂದ ಜೊತೆ ಸಾಗಿದವರು ಎಂದೂ 'ಥಟ್ಟನೆ' ಮಾಯವಾಗುವುದಿಲ್ಲ ನಿಜ. ಆದರೆ 'ಸದಾ ನಮ್ಮೊಂದಿಗಿರುತ್ತಾರೆ' ಎನ್ನುವುದು ಆರಾಣೆ ಹೀರೋನ ಡೈಲಾಗಿನಂತೆ ಕೇಳಿಸೀತು. ಪ್ರಾಮಾಣಿಕ ಸಂಬಂಧಗಳಲ್ಲಿ ಇಂಚಿಂಚಾಗಿ ಕಳೆದುಕೊಳ್ಳುವ ನೋವು ಅನಿವಾರ್ಯವಾಗಿಬಿಡುತ್ತದೆ. ಯುವರಾಜ ನಮ್ಮನ್ನೆಲ್ಲಾ ಕಾಡುವುದಂತೂ ನಿಜ.

ಶ್ರದ್ಧಾಂಜಲಿ ಒಂದು ರೀತಿಯ ಸಂಪ್ರದಾಯವಾಗಿಯೋ, ಕಾಟಾಚಾರವಾಗಿಯೋ ಆಗಿರುವಾಗ ಯುವರಾಜನಿಗೆ 'ಚೈತನ್ಯದ ಚಿಲುಮೆ, ಹೃದಯವಂತ' ಎಂದೆಲ್ಲಾ ಹೇಳಿಮುಗಿಸುವುದು ಅವನು ಸಮುದಾಯವೆಂದು ಭಾವಿಸಿದ ನಾವು ಅವನ ಮನೋಭಾವಕ್ಕೆ ಸಲ್ಲಿಸುವ ಅನಾಚಾರದಂತಿರುತ್ತದೆ. ಪ್ರಗತಿಪರ ಸಮುದಾಯಗಳಲ್ಲಿ ಇರಬಹುದಾದ ಮಡಿವಂತಿಕೆಯ ರೂಪಗಳನ್ನು ನಾವು ನಿರ್ವಚಿಸಿಕೊಳ್ಳದಿದ್ದರೆ, ನಮ್ಮನ್ನು ಬೆಚ್ಚಿಬೀಳಿಸಬಲ್ಲ ನಮ್ಮೊಳಗಿನ ಅದೃಶ್ಯ ಬ್ರಾಹ್ಮಣಿಕೆಯ ಭೂತಕ್ಕೆ ನಾವು ಇದಿರಾಗದಿದ್ದರೆ ನಮ್ಮದು ತೆರೆದ ಮನಸೆಂಬ ಭ್ರಮೆ ಇನ್ನಷ್ಟು ಬಲವಾಗುತ್ತದೆ. ಯಾಕೆಂದರೆ 'ಆತ್ಮಶೋಧನೆಗೆ' ಬೇಕಾದ ನೈತಿಕ ಬಲವಿರುವುದು ಪ್ರಗತಿಶೀಲತೆಯಲ್ಲಿ, ಬಹುತ್ವತೆಯಲ್ಲಿ, ಜೀವಪರತೆಯಲ್ಲಿ ನಂಬಿಕೆಯಿಟ್ಟವರಲ್ಲೇ ಹೊರತು ಸಂಪ್ರದಾಯದಲ್ಲಿ ಹೂತುಹೋದ ಸನಾತನಿಗಳಲ್ಲಿ, ಅಲ್ಲ, ನಮ್ಮ ಅಸಂಖ್ಯಾತ ಹರಟೆಗಳಲ್ಲಿ ನೆನಪಿಗೆ ಬರುವ ಯುವರಾಜನ ಕೆಲವು ಆಣಿಮುತ್ತುಗಳು ಇವು: ಸನಾತನಿಗಳು



ಪತ್ನಿ ಉಷಾ ಮತ್ತು ಮಗಳು ನೀಲಾ ಜೊತೆ

ಸತ್ತಿರುವುದರ ಬಗ್ಗೆ ಮಾತ್ರ ಪ್ರಗತಿಪರ ಧೋರಣೆ ತಳೆಯಬಲ್ಲ ಸೃಜನಶೀಲರು; ತನಗೆ ಏನೂ ನಷ್ಟವಾಗದಿರುವ ಪಕ್ಷದಲ್ಲಿ ಪ್ರತಿಯೊಬ್ಬ ಸನಾತನಿ ತಲೆಹಿಡುಕನೂ ಪ್ರಗತಿಪರನಂತೆ ಪೋಸು ಕೊಡುತ್ತಾನೆ.


ಈತನ ಬಗ್ಗೆ ಬರೆಯುವುದಾದರೂ ಏನನ್ನ? ಆತ ಮನಸಾರೆ ಹರಟುತ್ತಿದ್ದ ಆದರೆ ಮಾತಾಡುತ್ತಿರಲಿಲ್ಲ ಎಂದರೇ ಸೂಕ್ತವೇನೋ???! ಕೂಟ ನಡೆಯಲು, ಬಲ್ಲವರು ಸೇರಿ ಮಾತಾಡಲು, ರಂಗವನ್ನು ಸಜ್ಜುಗೊಳಿಸಿ, ಕರೆದು ತರುವವರನ್ನೆಲ್ಲಾ ಕರೆದು ತಂದು, ಒದಗಿಸಬೇಕಾದ್ದನ್ನೆಲ್ಲಾ ಒದಗಿಸಿ ಮೂಲೆಯಲ್ಲಿ ಕುಳಿತು ಆಡಿದ ಮಾತುಗಳನ್ನೆಲ್ಲಾ ಕನ್ನಡಕದ ಕಣ್ಣಿನಲ್ಲಿ ತುಂಬಿಕೊಂಡು ತುಳುಕಿಸುತ್ತಿದ್ದ. ಪ್ರಜಾಪ್ರಭುತ್ವ ಪ್ರಗತಿಪರವಾಗಿಲ್ಲದಿದ್ದರೆ ಅದು ಹೇಗೆ ಪ್ರಜೆಗಳ ಪರವಾಗಿರಲು ಸಾಧ್ಯ ಎಂಬ ಸರಳಸತ್ಯದಲ್ಲಿ ನಂಬಿಕೆಯಿಟ್ಟಿದ್ದ.

ಆತ ಹೃದಯವಂತ, ಯಾರೂ ಊಹಿಸಲಾಗದಷ್ಟು ಸಮುದಾಯದೊಳಗೆ ತನ್ನನ್ನು ಕರಗಿಸಿಕೊಂಡ ಸಮುದಾಯ ಜೀವಿ.

ಆತ ಮೂರ್ಖನೂ ಹೌದು, ಹುಂಬನೂ ಹೌದು, ಹಟಮಾರಿಯೂ ಹೌದು. ಜಗಳಗಂಟನಂತೂ ಹೌದೇ ಹೌದು. ಪ್ರಗತಿಪರರಲ್ಲಿ ಮಾತ್ರ ಇರುವ ಮಾನವ ಗುಣಗಳ ಮತ್ತು ಮಾನವೀಯತೆಯ ರೂಪವೇ ಅವನು.

ಆತನ ಔದಾರ್ಯಕ್ಕೆ ಮಗು ಮನಸ್ಸಿನ ಸರಳತೆ ಇತ್ತು, ಬೇಷರತ್ತಾಗಿ ಪ್ರೀತಿ ನೀಡುವ ನಾಯಿಯ ಶ್ರೀಮಂತಹೃದಯ ವಿತ್ತು, ಸಮುದಾಯದ ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ ಸಹನೆಯಿತ್ತು, ಕೋಮು ಸೌಹಾರ್ದದ ತತ್ವವನ್ನು ಎದೆಗವಚಿಕೊಂಡು ನಿರ್ವಂಚನೆಯಿಂದ ದುಡಿವ ಬದ್ಧತೆಯಿತ್ತು.

ಯುವರಾಜ ಮಾತಿನ ಜಾಣನಲ್ಲ, ತನ್ನಲ್ಲಿದ್ದ ಅಗಾಧ



ದೀಪು ಜೊತೆ ಯುವರಾಜ್

ವಾದ ರಾಜಕೀಯ ಪ್ರಜ್ಞೆಯನ್ನು ಪಟಪಟನೆ ಮಾತಿನಲ್ಲಿ ಮಂಡಿಸಲಾರದವನಾಗಿದ್ದ, ತನ್ನ ಪ್ರಿಂಟಿಂಗ್ ಕೆಲಸದಲ್ಲಿ, ಡಾಕ್ಯುಮೆಂಟರಿ ಫಿಲ್ಮ್ ಮೇಕಿಂಗ್‌ನಲ್ಲಿ, ಸಾಮಾಜಿಕ ಹೋರಾಟಗಳಲ್ಲಿ ಯಾವುದನ್ನು ಆಯ್ದುಕೊಳ್ಳುತ್ತಿದ್ದ ಎನ್ನುವುದೇ ಅವನ ಸಮಸ್ತವೂ ಆಗಿತ್ತು, ಮೂಲೆಯಲ್ಲಿ ಕೂತು ಅದ್ಭುತವಾಗಿ ಗ್ರಾಫಿಕ್ ಡಿಸೈನ್ ಮಾಡಬಲ್ಲವನಾಗಿದ್ದ ಸರಿ ರಾತ್ರಿಯವರೆಗೆ ಪ್ರಿಂಟಿಂಗ್ ಕೆಲಸದಲ್ಲಿ ಕಳೆದು ಹೋಗಬಲ್ಲವನಾಗಿದ್ದ. ಕೋಮು ಸೌಹಾರ್ದ, ಸುನಾಮಿ ಪರಿಹಾರಕಾರ್ಯ, ಅಂತರಲಿಂಗೀಯ ಮಂದಿಯ ಹಕ್ಕುಗಳು- ಅವನ ಸಾಮಾಜಿಕ ಕಾಳಜಿಯ ಹರವು ಒಮ್ಮೊಮ್ಮೆ ಅಚ್ಚರಿ ಹುಟ್ಟಿಸುವಷ್ಟು ದೊಡ್ಡದಿರುತ್ತಿತ್ತು. ಆತ ಹಣದ ಲಾಭ ತರುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದೇ ಕಮ್ಮಿ. ಅವನ ಕಾರು, ಕಾಲ, ಹಣ, ಶ್ರಮ ಎಲ್ಲವೂ ಎಲ್ಲರಿಗೂ ಸೇರಿದ್ದಂತೆ ಇತ್ತು, ಯಾವುದೋ ಸಮಾವೇಶದಲ್ಲಿ ಪಾಲುಗೊಳ್ಳಲು ಸಾಧ್ಯವಾದಷ್ಟೂ ಜನರನ್ನು ತುಂಬಿಕೊಂಡು ಗಂಟೆಗಟ್ಟಲೆ ಕಾರು ಓಡಿಸಿಕೊಂಡು ಹೋಗುತ್ತಿದ್ದವನ ಸಮುದಾಯಪ್ರೀತಿ ಅನನ್ಯವೆಂದು ಹೇಳಿ ಕಣ್ಣೀರು ಒರೆಸಿಕೊಂಡರೆ ನಮ್ಮಂತ ಸುಬ್ಬಾಶಾಸ್ತ್ರಿಗಳು ಮತ್ತೊಬ್ಬರಿರುವುದಿಲ್ಲ, ಯಾಕೆಂದರೆ ಅವನನ್ನು ಕಾಡುತ್ತಿದ್ದ ಸಮಸ್ಯೆಗಳಿಗೆ ನಾವೆಂದೂ ಸಮಾಧಾನ ನೀಡುವ ರೀತಿಯಲ್ಲಿ ಭಾಗಸ್ಥರಾಗಲಿಲ್ಲವೇನೋ. ಅವನಿಗೆ ಬಿಳಿಯಾನೆ 'ಪಟ್ಟ' ಕೊಟ್ಟು ಆಚೆ ಇಟ್ಟುಬಿಟ್ಟೆವೇನೋ! ಗಾಢವಾದ ಸಮುದಾಯಜೀವಿಯನ್ನು ಕ್ರಮೇಣ ಒಂಟಿತನ ಆವರಿಸಿಕೊಳ್ಳಲು ಬಿಟ್ಟೆವೋ ಏನೋ! ನಮ್ಮ ಅವಶ್ಯಕತೆಗೆ, ಅನುಕೂಲತೆಗೆ ಯಾವತ್ತೂ ಸ್ಪಂದಿಸಿದ ಅವನಲ್ಲಿ ನಮಗೆ ಬೇಕಾದ 'ಸುಧಾರಣೆ'ಯನ್ನು ಕಾಣದೆ ವಿಚಿತ್ರವಾದ ಬಹಿಷ್ಕಾರಕ್ಕೆ ಅವನನ್ನು ತುತ್ತಾಗಿಸಿದೆವೋ ಏನೋ! ನಾನೇನು ಬರೀ ಡ್ರೈವರ್ರಾ? ಎಂದು ಕೋಪಿಸಿಕೊಂಡವನ ನೋವನ್ನು ಸರಿಯಾಗಿ ಊಹಿಸಿಕೊಳ್ಳಲಿಲ್ಲವೋ ಏನೋ! 'ನಾನಿಷ್ಟು ಸಮೃದ್ಧವಾಗಿ ಕೊಡಬಲ್ಲವನು, ನಿಮ್ಮದೇನಿದು ಪುಟಗೋಸಿ ಚೌಕಾಸಿ?' ಎಂಬ ಅವನ ನೋವನ್ನು ಅರ್ಥ ಮಾಡಿಕೊಳ್ಳಲಾಗದ ದಾರಿದ್ರ್ಯ ನಮ್ಮದು. ಭೂಮಿ ಮಾಡುತ್ತೇನೆ ಎಂದು ತಲೆಗೆ ಹಚ್ಚಿಕೊಂಡ ವನನ್ನು ಅವನ ಪಾಡಿಗೆ ಬಿಟ್ಟು ಅವನ ಒಂಟಿತನವನ್ನು ಇನ್ನಷ್ಟು ಹೆಚ್ಚಿಸಿದೆವೋ ಏನೋ! ಮಾತಿನ ಚಮತ್ಕಾರ ಬಲ್ಲದವನ ಸರಳತೆಯನ್ನು, ತನ್ನ ರೀತಿಯಲ್ಲಿ ಸಮುದಾಯ… ಭಾಗವಾಗಿರಲು ಹಂಬಲಿಸಿ ದವನನ್ನು, 'ಸುಟ್ಟೆನ… ಮುಟ್ಟೆನು' ಎಂಬ ಉಡಾಫೆ ತೋರಿದರೂ ಪ್ರೀ… ಕರಗುತ್ತಿದ್ದ ಜಗಳಗಂಟನ ಸಮೃದ್ಧತೆಯನ್ನು ನಮ್ಮ ದ… ಬ್ರಾಹ್ಮಣೀಯ ಮನಸ್ಸುಗಳು ಸೀರಿಯಸ್ಸಾಗಿ ತೆಗೆದುಕೊ… ಒಂಟಿತನದಲ್ಲಿ ನವೆಯಲು ಬಿಟ್ಟೆವೋ ಏನೋ!

ಚೈನ್ನಾ ಲಯರ್ಡ್ ಎಂಬ ಲೇಖಕಿ ತನ್ನ Wh… Elephants ಎಂಬ ಆತ್ಮಕಥನದಲ್ಲಿ ಕುಡಿ… ಆತುಕೊಂಡಿದ್ದ ತನ್ನ ಅಮ್ಮನ ಬಗ್ಗೆ ಬರೆಯುತ್ತಾಳೆ:

"ಸುತ್ತಲಿನ ಜನ ಕೈ ಚೆಲ್ಲಿ ಕೂತಿದ್ದಂತೆ ಕಂಡ… ಹೊರಬರಬೇಕು ಎಂಬ ಆಸೆಯಾಗಲಿ ಅವಶ್ಯಕತೆಯಾ… ಇಲ್ಲದವರಿಗೆ ಹೇಗೆ ತಾನೆ ಸಹಾಯ ಮಾಡಲು ಸ… ಹೇಳಿ ಎಂಬ ಪಲಾಯನದ ಸುಳುಹಿತ್ತು ಅಲ್ಲಿ. … ಕ್ರಿಶ್ಚಿಯನ್ ಸಲಹೆಗಾರ್ತಿ ಅದನ್ನು 'ಬಿಳಿ ಆನೆ' … ಪರಿಕಲ್ಪನೆಯ ಮೂಲಕ ವಿವರಿಸಿದ್ದಳು. ಎಲ್ಲರಿ… ಕಾಣಿಸಬಲ್ಲ ಆದರೆ ಯಾರೂ ಅದರ ಜೊತೆ ಮುಖಾಮು… ಯಾಗಲು ಬಯಸದ ವಿಲಕ್ಷಣತೆ. ಕಾಣದಂತೆ ನಟಿಸಿ… ಸಾಕು, ಒಂದಲ್ಲ ಒಂದು ದಿನ ಬಿಳಿ ಆನೆ ತನ್ನಿಂ… ಮಾಯವಾಗುತ್ತದೆ ಎಂಬ ಹುಂಬ ಭರವಸೆ."

ಬಹುಶಃ ನಮ್ಮದೂ ಅದೇ ತ… ಹುಂಬತನವಾಯಿತೋ ಏನೋ.

ಯುವರಾಜನೆಂಬ ಹೆಸರು ಹೊತ್ತಿದ್ದು ಒ… ಕ್ರೂರವ್ಯಂಗ್ಯವಾಯಿತೆ?

ವ್ಯಂಗ್ಯವೆಂದಾಗ ನೆನಪಾಗುತ್ತಿದೆ. ಯುವರಾಜ… ಸಂಗಾತಿ ಉಷಾಳ ಮೊಬೈಲ್ ನಂಬರಿಗೆ ಪ್ರತ್ಯೇಕ… ಸಂಗೀತದ ಎಳೆಯೊಂದನ್ನು ಜೋಡಿಸಿದ್ದ 'ಜೊತೆಜೊತೆ… ಇರುವೆನು ಹೀಗೇ ಎಂದೂ' ಅದು ಶುರುವಾದಾ… ನಮ್ಮ ನಡುವೆ 'ವಾಹ್! ರೊಮ್ಯಾಂಟಿಕ್ ಮಗನೆ!' … ಖೊಳ್ಳನೆ ನಗುವೊಂದು ಹರಡುತ್ತಿತ್ತಲ್ಲ? ಆಶ… ಕೊಟ್ಟವನೆಲ್ಲಿ ಈಗ?

ಆಶ್ವಾಸನೆ ಕೊಟ್ಟಿದ್ದು ಉಷಾ ಎಂದಾದರೆ … ಆಕೆ ಬದ್ಧಳಾಗಿ ನಿಂತ ರೀತಿ ಅವರಿಬ್ಬರನ್ನು ಬಲ್ಲ ಯಾ… ಬೆರಗುಗೊಳಿಸುವಂತದ್ದು. ಉಷಾ ಸ್ನಾತಕೋತ್ತರ ಪದವಿ… ದಿಟ್ಟೆ, ಫೆಮಿನಿಷ್ಟೆ. ತೆರೆದ ಮನಸ್ಸಿನ ಹೋರಾಟಗಾ… ಪ್ರಪಾತಕ್ಕೆ ಬಿದ್ದಂತ ಮನಸ್ಥಿತಿಯಲ್ಲೂ ಸಾವರಿಸಿಕೊ… ಎದ್ದು ಬರಬಲ್ಲ, ಹೆಗಲಿಗೆ ಹೆಗಲು ಕೊಡಬಲ್ಲ ಜೊತೆಗಾ… ಹುರುಪು ಚಿಮ್ಮಿದಂತೆ ನಗಬಲ್ಲ ಉಷಾ ನ್ಯಾಯ… ವಿಮರ್ಶಿಸುವ, ತನಗನ್ನಿಸಿದ್ದನ್ನು ಹೇಳುವ, ಹೇಳಿ… ಬದ್ಧವಾಗಿ ನೆರವೇರಿಸಲು ಪ್ರಯತ್ನಿಸುವ ಪ್ರಾಮಾಣಿ… ತುಂಬ ಇಷ್ಟವಾಗುವ ಉಷಾಳ ಅಗಲವಾದ ಕಣ್ಣುಗ… ದೂರದಿಂದ ಊಹಿಸಿಕೊಂಡರೆ ನಮ್ಮೆಲ್ಲರದೂ ಆದ ಆ… ಕವನದ ಭಾವವೊಂದು ಗಾಢವಾಗಿ ಸ್ಫುರಿಸಿದಂತೆ ಅನ್ನಿಸ…

ನೀನೆಲ್ಲಿ ಈಗ: ಹೆಗಲಿಗೆ ಹೆಗಲು ಕೊಟ್ಟವನು
ಹಾಯಿಯನ್ನುರುಟುರುಟು ಊದಿದವನು,
ದಾರಿಯುದ್ದಕ್ಕು ರಹದಾರಿ ಗಿಟ್ಟಿಸಿ ದಿಳ್ಳಿ
ದ್ವೀಪಾಂತರಕ್ಕೆ ಕೈ ಕೊಟ್ಟ ಸಖನು?


■ ಹರಿಕನಾ…



ಪ್ರೀತಿಯ ಬುಗ್ಗೆಯಾಗಿದ್ದ ಮಿತ್ರ ಯುವರಾಜ್

ಯುವರಾಜ್ ಎಂಬ ಅರಾಜಕ ಆದರೆ ಅಷ್ಟೇ ... ಸಂವೇದನೆಯ ವ್ಯಕ್ತಿಯನ್ನು ನಾನು ಮೊದಲು ...ಡಿದ್ದು 2003ರಲ್ಲಿ ಚಿಕ್ಕಮಗಳೂರಿನ ಬಾಬಾ ...ನ್‌ಗಿರಿಯ ಬೆಟ್ಟದ ಮೇಲೆ. ಬಾಬಾಬುಡನ್‌ಗಿರಿಯಲ್ಲಿನ ...ದ ಸ್ಥಿತಿಯನ್ನು ಅರಿಯಲು ಹೋಗಿದ್ದ ನಮ್ಮ ತಂಡದ ...ಚಲನಗಳನ್ನು ಅವತ್ತು ಯುವರಾಜ್ ಮತ್ತು ಆತನ ... ವಿಜಯ್‌ಕುಮಾರ್ ಇಬ್ಬರೂ ತಮ್ಮ ವೀಡಿಯೋ ...ಮರಾಗಳಲ್ಲಿ ಸೆರೆಹಿಡಿಯುತ್ತಿದ್ದರು. ಅವರ ಬಗ್ಗೆ ...ಕ್ಷಣ ನನಗೆ ಅನುಮಾನ ಬಂದು "ಅವರಿಬ್ಬರು ...ರು?" ಎಂದು ಯಾರನ್ನೋ ಕೇಳಿದ್ದೆ. "ಅವರು ಈ ... ಆಗಾಗ್ಗೆ ಬರುತ್ತಿರುತ್ತಾರೆ. ಇಲ್ಲಿ ಸಂಘಪರಿವಾರದವರು ...ಡುತ್ತಿರುವ ಕೋಮುವಾದೀಕರಣವನ್ನೆಲ್ಲ ತಮ್ಮ ...ಮರಾಗಳಲ್ಲಿ ರೆಕಾರ್ಡ್ ಮಾಡಿಕೊಂಡು ಡಾಕ್ಯುಮೆಂಟರಿ ...ಮಾ ಮಾಡುತ್ತಿದ್ದಾರೆ" ಎಂಬ ಉತ್ತರ ಬಂದಿತ್ತು. ...ಲೆ ಅವರಿಬ್ಬರ ಪರಿಚಯವಾಯಿತು. ಅವರಿಬ್ಬರು ...ಲ್ಲರಿಗಿಂತ ಮುಂಚಿತವಾಗಿಯೇ ಬಾಬಾಬುಡನ್‌ಗಿರಿ ... ಎಲ್ಲ ವರ್ಗ ಮತ್ತು ಕೋಮುಗಳ ಶ್ರದ್ಧಾ ಕೇಂದ್ರವಾಗಿ ...ಸಿಕೊಳ್ಳುವಲ್ಲಿ ತಮಗೆ ಸಾಧ್ಯವಾದದ್ದನ್ನು ಮಾಡಲು ...ರಂಭಿಸಿದ್ದರು. ಅವತ್ತು ಯುವರಾಜನೊಂದಿಗೆ ...ರಂಭವಾದ ಒಡನಾಟ ಮತ್ತು ಸ್ನೇಹ ಕಳೆದ ವಾರ ... ಸಾವಿನೊಂದಿಗೆ ಇಷ್ಟು ಬೇಗ ಅಂತ್ಯಗೊಳ್ಳುತ್ತದೆ ...ದು ಯಾರೂ ಊಹಿಸಿರಲಿಲ್ಲ.

...ಮ್ಮ ಈ ಪತ್ರಿಕೆಯ ಹುಟ್ಟಿನಲ್ಲೂ ನೀವು ಇಲ್ಲಿಯತನಕ ...ಯುದಿದ್ದ ಯುವರಾಜನ ಪಾಲು ಇದೆ ಎಂದರೆ



...ಗೆ ಅಚ್ಚರಿಯಾಗಬಹುದು. ಅದು ಹೇಗಾಯಿತು ...ನರೆ ಅನಿರೀಕ್ಷಿತವಾಗಿ ಈ ಪತ್ರಿಕೆಯನ್ನು ...ರಂಭಿಸಬೇಕಾಗಿದ್ದರಿಂದ ಆರ್ಥಿಕ ಬಿಕ್ಕಟ್ಟು ಎದುರಾಗಿತ್ತು. ...ಎ 3' ಸೈಜಿನ ಹಾಳೆಯಲ್ಲಿ ಪ್ರಿಂಟ್ ಔಟ್ ತೆಗೆಯುವ ...ಟರ್ ಖರೀದಿಸಲು ಬೇಕಿದ್ದ 70,000 ರೂಪಾಯಿಗಳು ... ಬಳಿ ಇರಲಿಲ್ಲ. ಆದರೆ ಅಂತಹ ಪ್ರಿಂಟರ್ ...ವರಾಜನ ಪ್ರೆಸ್‌ನಲ್ಲಿತ್ತು. ಆಗ ಯುವರಾಜ್ ಪ್ರತಿ ...ವಾರ ಆ ಪ್ರಿಂಟರ್‌ಅನ್ನು ತನ್ನ ಕಾರ್‌ನಲ್ಲಿಟ್ಟುಕೊಂಡು ... ಕಚೇರಿಗೆ ತಲುಪಿಸುತ್ತಿದ್ದ; ಹಾಗೆಯೇ ಪತ್ರಿಕೆ ಅಚ್ಚಿಗೆ ...ದನಂತರ ಭಾನುವಾರ ರಾತ್ರಿ ಬಂದು ಅದನ್ನು ತನ್ನ ...ಗೆ ವಾಪಸ್ ತೆಗೆದುಕೊಂಡು ಹೋಗುತ್ತಿದ್ದ. ಇದು ...ನಾಲ್ಕು ತಿಂಗಳುಗಳ ಕಾಲ ನಡೆಯಿತು. ಯುವರಾಜ್ ...ಕೂ "ಪ್ರಿಂಟರ್ ನಿಮಗೆ ತಾನೆ ಬೇಕಾಗಿರುವುದು, ...ಿ ನೀವೇ ಅದನ್ನು ತೆಗೆದುಕೊಂಡುಹೋಗಿ" ಎಂದು ...ಲೇ ಇಲ್ಲ. ತನಗೆ ಎಷ್ಟೇ ತೊಂದರೆಯಾದರೂ ಪತ್ರಿಕೆಗೆ ...ವ ರೀತಿಯ ತೊಂದರೆಯೂ ಆಗಬಾರದೆಂಬ ಕಾಳಜಿ ...ವರಾಜನದ್ದಾಗಿತ್ತು.

...ನಮ್ಮ ಲಂಕೇಶ್ ಪ್ರಕಾಶನದ ಪ್ರಾರಂಭದಲ್ಲೂ ...ವರಾಜನ ಪಾತ್ರವಿದೆ. ಆಗ ಕುವೆಂಪು ವಿಶ್ವವಿದ್ಯಾಲಯವು ... 'ಗುಣಮುಖ' ನಾಟಕವನ್ನು ಪಠ್ಯವಾಗಿ ಆಯ್ಕೆಮಾಡಿ ...ದ ಸಾವಿರಾರು ಪ್ರತಿಗಳನ್ನು ಬೇಗನೆ ಪ್ರಕಟಿಸಿ ಶಿವಮೊಗ್ಗ ... ಸುತ್ತಮುತ್ತಲಿನ ಅಂಗಡಿಗಳಿಗೆ ತಲುಪಿಸಬೇಕಿತ್ತು. ... ಪ್ರಕಾಶನ ನನಗೆ ಹೊಸದಾಗಿದ್ದರೂ ಪ್ರೆಸ್ ಹೊಂದಿದ್ದ ... ಹೊತ್ತಿಗಾಗಲೇ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದ ...ವರಾಜನಿಗೆ ಅದು ಹೊಸದಾಗಿರಲಿಲ್ಲ. ಆತನೇ ...ರಾತ್ರಿ ಎಂದು ನೋಡದೆ 'ಗುಣಮುಖ'ದ ...ರು ಪ್ರತಿಗಳನ್ನು ತನ್ನ ಪ್ರೆಸ್‌ನಲ್ಲಿ ಮುದ್ರಿಸಿ ಸರಿಯಾದ ...ಕ್ಕೆ ಅವುಗಳನ್ನು ನನಗೆ ಕೊಟ್ಟು ನೆರವಾಗಿದ್ದ.

...ಯುವರಾಜ್ ನಮ್ಮ ಪತ್ರಿಕೆಯ ಹತ್ತಾರು ಕಾರ್ಯಕ್ರಮ... ಭಾಗಿಯಾಗಿದ್ದ. ಆದರೆ ಎಂದೂ ವೇದಿಕೆಯನ್ನೇರಿ... ಬದಲಾಗಿ ತೆರೆಮರೆಯಲ್ಲಿದ್ದು ಎಲ್ಲ ರೀತಿಯ ಸಹಾಯ ಮಾಡುತ್ತಿದ್ದ. ಆಹ್ವಾನಿತರನ್ನು ಏರ್‌ಪೋರ್ಟ್‌ನಿಂದ ಕರೆದುಕೊಂಡು ಬರುವುದು, ಗೆಸ್ಟ್‌ಗಳನ್ನು ತಮ್ಮ ಮನೆಗೆ ತಲುಪಿಸುವುದು, ಪುಸ್ತಕಗಳನ್ನು ಜೋಡಿಸುವುದು, ಇತ್ಯಾದಿಗಳೆಲ್ಲವನ್ನೂ ಆತ ಸದ್ದುಗದ್ದಲವಿಲ್ಲದೆ ಮಾಡುತ್ತಿದ್ದ.

ಇನ್ನು ಬಾಬಾಬುಡನ್‌ಗಿರಿಯ ಸೌಹಾರ್ದ ಪರಂಪರೆಯನ್ನು ಉಳಿಸಿಕೊಳ್ಳುವ ನಮ್ಮ ಹೋರಾಟದಲ್ಲಿ ಸಕ್ರಿಯನಾಗಿದ್ದ ಯುವರಾಜ್ ನಮ್ಮನ್ನೆಲ್ಲ ಚಿಕ್ಕಮಗಳೂರಿಗೆ ತನ್ನ ಮಾರುತಿ ವ್ಯಾನ್‌ನಲ್ಲಿ ಕರೆದುಕೊಂಡುಹೋದದ್ದು ಹತ್ತಾರು ಬಾರಿ. ಬೆಂಗಳೂರಿನಿಂದ ಚಿಕ್ಕಮಗಳೂರನ್ನು ಮೂರು ಗಂಟೆಗಳಲ್ಲಿ ತಲುಪುತ್ತಿದ್ದ ಆತನ ಡ್ರೈವಿಂಗ್ ವೇಗ ಹಲವೊಮ್ಮೆ ಟೀಕೆಯನ್ನೂ, ಕೆಲವೊಮ್ಮೆ ಮೆಚ್ಚುಗೆಯನ್ನೂ ನಮ್ಮೆಲ್ಲರಿಂದ ಪಡೆಯುತ್ತಿತ್ತು.

ಹೀಗಿದ್ದಾಗ, ಒಂದು ರಾತ್ರಿ ನನಗೆ ಇದ್ದಕ್ಕಿದ್ದಂತೆ ಎದೆನೋವು ಶುರುವಾಗಿ ಉಸಿರಾಡುವುದೇ ಕಷ್ಟವಾಯಿತು. ತಕ್ಷಣವೇ ನಾನು ಶಿವಸುಂದರ್ ಅವರಿಗೆ ಫೋನ್ ಮಾಡಿದೆ. ಆಗ ಅವರು ಯುವರಾಜ್ ಮತ್ತು ಇತರರೊಂದಿಗೆ ಚಿಕ್ಕಮಗಳೂರಿನಿಂದ ಹಿಂದಿರುಗುತ್ತಿದ್ದು ಪೀಣ್ಯ ಬಳಿ ಬರುತ್ತಿದ್ದರು. ಕೂಡಲೇ ಎಲ್ಲರೂ ನನ್ನ ಮನೆಗೆ ಬರುತ್ತೇವೆಂದೂ, ನಾನು ಕಾಯಬೇಕೆಂದೂ ಹೇಳಿದರು. ಆದರೆ ನನಗೆ ಆತಂಕ; ಅಷ್ಟು ಹೊತ್ತಿಗೆ ನಾನು 'ಗೊಟಕ್' ಎಂದರೆ ಅಂತ. ನಾನೇ ನನ್ನ ಕಾರ್ ಡ್ರೈವ್ ಮಾಡಿಕೊಂಡು ಮನೆಯ ಹತ್ತಿರವಿದ್ದ ಆಸ್ಪತ್ರೆಗೆ ಹೋದೆ. ಅಲ್ಲಿ ನನ್ನನ್ನು ಇನ್ನೂ ಚೆಕ್‌ಅಪ್ ಮಾಡುವಷ್ಟರಲ್ಲಿ ಯುವರಾಜ್ ಮತ್ತು ಇತರರು ಹಾಜರ್! ಅಷ್ಟು ಬೇಗ ಯುವರಾಜ್ ಕಾರ್ ಓಡಿಸಿಕೊಂಡು ನಾನಿದ್ದಲ್ಲಿಗೆ ದೌಡಾಯಿಸಿದ್ದ (ಅದು ಹಾರ್ಟ್ ಅಟ್ಯಾಕ್ ಆಗಿರದೆ ಅಸಿಡಿಟಿ ಅಟ್ಯಾಕ್ ಆಗಿತ್ತು!)

ಮೂರ್ನಾಲ್ಕು ಬೈಕ್ ಅಪಘಾತಗಳಲ್ಲಿ ಯುವರಾಜನ ಒಂದು ಕಾಲು ನಾಲ್ಕೈದು ಕಡೆ ಮುರಿದಿದ್ದರಿಂದ ಅದು ಇನ್ನೊಂದು ಕಾಲಿಗಿಂತ ಸ್ವಲ್ಪ ಮೋಟವಾಗಿತ್ತು, ಹಲವೊಮ್ಮೆ ಆ ಕಾಲಿನ ಮೇಲಿನ ಗಾಯಗಳು ಸ್ರವಿಸುತ್ತಿದ್ದವು. ಆದರೆ ಯುವರಾಜ್ ಅದರಿಂದ ಏನೂ ಸಮಸ್ಯೆ ಇಲ್ಲವೆಂಬಂತೆ ವರ್ತಿಸುತ್ತಿದ್ದ. ಒಮ್ಮೆ ಶಾಂತಿಗಾಗಿ ನಾಗರಿಕರ ವೇದಿಕೆಯ ತಂಡ ನಕ್ಸಲರನ್ನು ಭೇಟಿಯಾಗಲು ಕಾಡಿಗೆ ಹೋದಾಗ ಯುವರಾಜನೂ ನಮ್ಮೊಂದಿಗೆ ಬಂದಿದ್ದ. ಅವತ್ತು ನಮ್ಮೊಂದಿಗೆ ಇದ್ದ ಕೆಲವರು ನಮ್ಮಿಬ್ಬರ ದೇಹಗಳಲ್ಲಿ ಕಿಂಚಿತ್ತೂ ಶಕ್ತಿಯಿಲ್ಲ, ನಾವು ಸರಿಯಾಗಿ ಉಣ್ಣಬೇಕು ಎಂದೆಲ್ಲ ಭಾಷಣ ಬಿಗಿದಿದ್ದರು. ಆದರೆ ನಾನು ಮತ್ತು ಯುವರಾಜ್ ಎಲ್ಲರಿಗಿಂತ ವೇಗವಾಗಿ ಕಾಡಿನಲ್ಲಿ ನಡೆದುಹೋದದ್ದು, ಕಾಡಿನಲ್ಲಿ ಹರಿಯುತ್ತಿದ್ದ ಒಂದು ಝರಿಯ ಮಧ್ಯೆ ಇದ್ದ ಬಂಡೆಯ ಮೇಲೆ ನಾವಿಬ್ಬರು ಕುಳಿತು ಇತರರಿಗೆ ಕಾಯುತ್ತಾ ಹರಟೆ ಕೊಚ್ಚಿದ್ದು ಇನ್ನೂ ನೆನಪಿದೆ.

ನಾವು ಕಾಡಿಗೆ ಹೋದದ್ದು ಪೊಲೀಸ್ ಇಲಾಖೆಯಲ್ಲಿದ್ದ ಯುವರಾಜನ ಓರ್ವ ಸಂಬಂಧಿಗೆ ಗೊತ್ತಾಗಿ ಯುವರಾಜನ ಅಪ್ಪ ಅಮ್ಮನಿಗೆ "ಹುಷಾರಾಗಿರಿ, ನಿಮ್ಮ ಮಗ ನಕ್ಸಲ್ ಆಗುತ್ತಾನೆ" ಎಂದೆಲ್ಲ ಹೆದರಿಸಿದ್ದರು. ಆಗ ಆತನ ಪೋಷಕರು ಕೆಲವು ದಿನಗಳ ಕಾಲ ಯುವರಾಜನ ಚಲನಗಳ ಮೇಲೆ ನಿಷೇಧ ಹೇರಿದ್ದರು. ಇದಾದ ಸ್ವಲ್ಪ ದಿನಗಳ



ನಂತರ ಯುವರಾಜನ ಪ್ರೆಸ್ ಇದ್ದ ಏರಿಯಾದಲ್ಲಿ ಪೊಲೀಸರು ಸಿಗ್ನಲ್ ಬಳಿ ಭಿಕ್ಷೆ ಬೇಡುತ್ತಿದ್ದ ಹಲವಾರು ಹಿಜಡಾಗಳನ್ನು ಅರೆಸ್ಟ್ ಮಾಡಿದ್ದರು. ಇದು ಗೊತ್ತಾಗಿದ್ದೇ ತಡ ಯುವರಾಜ್ ಪೊಲೀಸ್ ಠಾಣೆಗೆ ಹೋಗಿ "ಅವರನ್ನೆಲ್ಲ ಯಾಕೆ ಬಂಧಿಸಿದ್ದೀರಿ? ಅವರು ಮಾಡಿರುವ ಅಪರಾಧ ಏನು?" ಎಂದೆಲ್ಲ ದಬಾಯಿಸಿದ್ದ. ಆಗ ಅಲ್ಲೇ ಇದ್ದ ಆತನ ಸಂಬಂಧಿ "ಓಹೋ, ಹೋದ ವಾರ ನಕ್ಸಲರ ಜೊತೆ ಇದ್ದೆ, ಇವತ್ತು ಹಿಜಡಾಗಳ ಪರ ಬಂದಿದ್ದೀಯಾ?" ಎಂದು ಕೆಣಕಿದ್ದ. ಆಗ ಯುವರಾಜ್ "ನಾನು ಅನ್ಯಾಯದ ವಿರುದ್ಧ ಇದ್ದೀನಿ. ಏನು ಮಾಡ್ತೀರ?" ಎಂದು ಸವಾಲು ಹಾಕಿದ್ದ.

ಮೊನ್ನೆ ಮಲ್ಲಿಗೆ ನನಗೆ ಗೊತ್ತಿರದಿದ್ದ ಒಂದು ಪ್ರಕರಣವನ್ನು ನೆನಪಿಸಿಕೊಂಡಳು. ಒಂದು ದಿನ ಚಿಕ್ಕಮಗಳೂರಿನಲ್ಲಿ ನಾನು ಹಸಿವು ಎಂದಿದ್ದನಂತೆ. ಕೂಡಲೇ ಯುವರಾಜ್ ನನಗೆ ತಿನ್ನಲು ಏನನ್ನಾದರೂ ಹುಡುಕಿ ಹೊರಟನಂತೆ. ಬಹಳ ಕಷ್ಟಪಟ್ಟು ಆತ ನನಗೆ ಊಟ ತಂದಿದ್ದನಂತೆ. ಆದರೆ ಅಷ್ಟು ಹೊತ್ತಿಗೆ ನಾನು ವೇದಿಕೆಯನ್ನೇರಿದ್ದರಿಂದ ಅದನ್ನು ನನಗೆ ಕೊಡಲಾರದೆ ಅಸಹಾಯಕನಾಗಿದ್ದನಂತೆ. ನಾನು ತಿಂದಿರದಿದ್ದರೇನಂತೆ, ನನಗಿಂತಲೂ ಹೆಚ್ಚು ಹಸಿವನ್ನು ಅನುಭವಿಸುತ್ತಿದ್ದ, ಹತ್ತಿರದಲ್ಲೇ ಇದ್ದ ಬಡ ಮಕ್ಕಳಿಗೆ ನನಗಾಗಿ ಆತ ತಂದಿದ್ದ ಊಟವನ್ನು ಕೊಟ್ಟು ಯುವರಾಜ್ ಅದರಲ್ಲೇ ನೆಮ್ಮದಿ ಕಂಡಿದ್ದನಂತೆ.

ಸಾಕಷ್ಟು ಶ್ರೀಮಂತ ಕುಟುಂಬದಿಂದ ಬಂದಿದ್ದ ಯುವರಾಜ್ ಎಂದೂ ಹಣಕ್ಕಾಗಿ ದುಡಿದವನಲ್ಲ; ಇತರರ ಮುಂದೆ ಕೈಚಾಚಿದವನಲ್ಲ. ಆತನ ಪ್ರಗತಿಪರ, ಮಹಿಳಾಪರ ವ್ಯಕ್ತಿತ್ವವನ್ನೇ ಇಷ್ಟ ಪಟ್ಟು ಆತನ ಕೈ ಹಿಡಿದಾಕೆ ಉಷಾ. ಯುವರಾಜನ ಒಂದು ಚಟವನ್ನು ಸಹಿಸಿಕೊಳ್ಳುತ್ತಲೇ "ಯುವರಾಜ್ ಅಪರಂಜಿ" ಎಂದೇ ಆತನನ್ನು ಉಷಾ ಪ್ರೀತಿಸುತ್ತಿದ್ದದ್ದು ಯುವರಾಜನಲ್ಲಿನ ಸೂಕ್ಷ್ಮ ವ್ಯಕ್ತಿತ್ವಕ್ಕೆ ಸಾಕ್ಷಿ.

ಇದೇ ಯುವರಾಜ್ ಎರಡು ತಿಂಗಳುಗಳ ಹಿಂದೆ ನಮ್ಮ ಆಫೀಸಿಗೆ ಬಂದಿದ್ದ. ಅವತ್ತು ಆತನಲ್ಲಿ ಆತ್ಮಸ್ಥೈರ್ಯ ಚಿಮ್ಮುತ್ತಿದ್ದರೂ ಅವನ ದೇಹ ಬಳಲಿದಂತೆ ಕಾಣಿಸುತ್ತಿತ್ತು. ಅಷ್ಟು ಹೊತ್ತಿಗಾಗಲೇ ಅನಾರೋಗ್ಯದಿಂದಾಗಿ ತನ್ನ ದೇಹದಲ್ಲಿ 'ಸ್ಟೆನ್ಟ್'ಗಳನ್ನು ಅಳವಡಿಸಿಕೊಂಡಿದ್ದ ಯುವರಾಜನ ಬಗ್ಗೆ ನನಗೆ ಆತಂಕವಾಗಿತ್ತು. "ನಿನ್ನ ಆರೋಗ್ಯ ನೋಡಿಕೊಳ್ಳೋ ಮಾರಾಯಾ" ಎಂದೆ. "ಡಾಕ್ಟರ್‌ಗಳು ಎಂತೆಂತಹದ್ದೋ ಔಷಧಿಗಳನ್ನು ಕೊಟ್ಟಿದ್ದಾರೆ. ಅವುಗಳಿಂದಲೇ ಸಮಸ್ಯೆ ಆಗುತ್ತಿದೆ" ಎಂದೆಲ್ಲ ಯುವರಾಜ್ ಸಬೂಬು ಕೊಟ್ಟಿದ್ದ. "ಔಷಧಿಗಳ ಸಮಸ್ಯೆ ಅಲ್ಲ, ಇದು ನಿನ್ನ ಚಟದ ಸಮಸ್ಯೆ" ಎಂದರೂ ಆತ ಕೇಳಿಸಿಕೊಳ್ಳಲಿಲ್ಲ.

ಒಂದು ವಾರದ ಹಿಂದೆ ಯುವರಾಜ್ ತನ್ನ ಆರೋಗ್ಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕೇರಳಕ್ಕೆ ಹೋದ. ಆದರೆ ಅಷ್ಟು ಹೊತ್ತಿಗಾಗಲೇ ಆತನ ದೇಹ ಕೈಕೊಡಲಾರಂಭಿಸಿತ್ತು. ಅವನ ದೇಹಗೊಳಗಿನ ಅಂಗಾಂಗಗಳು ರಕ್ತವನ್ನು ಸ್ರವಿಸಲಾರಂಭಿಸಿದ್ದವು. ಕೇರಳಕ್ಕೆ ಹೋದಕೂಡಲೇ ಕೋಮಾ ಸ್ಥಿತಿಗೆ ಜಾರಿದ ಯುವರಾಜ್ ಮತ್ತೆ ಪ್ರಜ್ಞಾವಸ್ಥೆನಾಗಲಿಲ್ಲ. ತನ್ನ ಜೀವನದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಿ ಜಯಿಸಿದ್ದ ಯುವರಾಜ್ ಈ ಬಿಕ್ಕಟ್ಟನ್ನೂ ನಿಭಾಯಿಸಿ ಹೊರಬರಲೆಂಬ ನಮ್ಮೆಲ್ಲರ ಆಶಯವನ್ನು ಭಾನುವಾರ ಸಂಜೆ ನಿರಾಶೆಗೊಳಿಸಿದ.

ತನ್ನ ಒಂದು ಚಟದ ಮಿತಿಯ ಹೊರತಾಗಿಯೂ ಸ್ತ್ರೀ ಸಮಾನತೆಗೆ, ಕೋಮು ಸೌಹಾರ್ದಕ್ಕೆ, ಲಿಂಗ ತಾರತಮ್ಯದ ವಿರುದ್ಧದ ಹೋರಾಟಕ್ಕೆ ತನ್ನೆಲ್ಲ ಸಮಯ, ಶ್ರಮ ಮತ್ತು ಕಾಳಜಿಯನ್ನು ತನ್ನ ಜೀವಿತದಲ್ಲಿ ಮುಡುಪಾಗಿಟ್ಟ ಯುವರಾಜ್ ನಿಜವಾಗಲೂ 'ಅಪರಂಜಿ' ವ್ಯಕ್ತಿತ್ವವನ್ನು ಹೊಂದಿದ್ದ, ಪ್ರೀತಿಯ ಬುಗ್ಗೆಯಾಗಿದ್ದ ಮಿತ್ರ.


ಯುವರಾಜ್ ದೈಹಿಕವಾಗಿ ಇವತ್ತು ನಮ್ಮೊಂದಿಗಿಲ್ಲ ಎಂಬ ಸತ್ಯವನ್ನೇ ಅರಗಿಸಿಕೊಳ್ಳಲು ಮನಸ್ಸು ಒಪ್ಪುತ್ತಿಲ್ಲ.

ಯುವರಾಜ್ ನಮ್ಮೆಲ್ಲರೊಂದಿಗೆ ಇವತ್ತು ಇಲ್ಲದಿರಬಹುದು, ಆದರೆ ಈ ನಮ್ಮ ಮಿತ್ರ ನಮ್ಮೆಲ್ಲರ ಹೋರಾಟಗಳಲ್ಲಿ, ಸಮಾನತೆಯ ಆಶಯದಲ್ಲಿ ಸದಾ ಭಾಗಿಯಾಗಿರುತ್ತಾನೆ ಎಂಬ ಅಂಶವೇ ಯುವರಾಜನನ್ನು ನಮ್ಮ ಹೃದಯಗಳಲ್ಲಿ ಜೀವಂತವಾಗಿರಿಸುತ್ತದೆ.

ನಮ್ಮೊಂದಿಗೆ ತನ್ನ ಅಲ್ಪಾವಧಿ ಜೀವನದ ಹೆಚ್ಚಿನ ಸಮಯವನ್ನು ಕಳೆದು ಅಕಾಲಿಕವಾಗಿ ನಿರ್ಗಮಿಸಿದ ಯುವರಾಜ್ ನಮ್ಮ ಆಶಯಗಳಲ್ಲಿ ಸದಾ 'ಯುವ ರಾಜ'ನಾಗೇ ಉಳಿದಿರುತ್ತಾನೆ...

■ ಗೌರಿ

ಭಟ್ಕಳ: ಮರಳು ಮಾಫಿಯಾಕ್ಕೆ ಎಮ್ಮೆಲ್ಲೆ ಮಂಕಾಳ ವೈದ್ಯನೇ ದೊರೆ!


ಮಂಕಾಳ ವೈದ್ಯ

ಕೆಡಲ ತಡಿಯ ಭಟ್ಕಳದಲ್ಲಿ ಸಮುದ್ರದ ಅಬ್ಬರ ಕ್ಕಿಂತಲೂ ಜೋರಾಗಿದೆ ಶಾಸಕ ಮಂಕಾಳ ವೈದ್ಯನ ಅಟ್ಟಹಾಸ-ಆರ್ಭಟ! ಬಹುಸಂಖ್ಯಾತ ದೀವರ (ಈಡಿಗ) ಕ್ಷೇತ್ರವೆಂದೇ ಪರಿಗಣಿಸಲ್ಪಟ್ಟವರ ಈ ಭಟ್ಕಳದಲ್ಲಿ ಮೀನುಗಾರ ಸಂಕುಲದ ಮಂಕಾಳ ಪಕ್ಷೇತರನಾಗಿ ಗೆದ್ದಾಗ ಮಂದಿ ಮೂಗಿನ ಮೇಲೆ ಬೆರಳಿಟ್ಟಿದ್ದರು. ದೀವರ ಏಕಸಾಮ್ಯದ "ಆಟ"ದಿಂದ ರೋಸತ್ತುಹೋಗಿದ್ದ ಇಡೀ ಭಟ್ಕಳ-ಹೊನ್ನಾವರ ಕ್ಷೇತ್ರದ ಮಂದಿ ಮಂಕಾಳು "ಎಂಥವ"ನೆಂದು ಗೊತ್ತಿದ್ದೂ ಆರಿಸಿದ್ದು ಬದಲಾವಣೆ ಬಯಸಿಯಾಗಿತ್ತು. ಮಂಕಾಳು ಬದಲಾಗಬಹುದು; ಜತೆಗೆ ಕ್ಷೇತ್ರದ ಪರಂಪರಾಗತ ಜಾತಿ ಪಾಲಿ"ಟ್ರಿ"ಕ್ಸ್ ನಿಲ್ಲಬಹುದೆಂದು ಜನ ನಿರೀಕ್ಷಿಸಿದ್ದರು. ಆದರೆ ಉಂಡಾಡಿ ಪುಂಡನಂಥ ಮಂಕಾಳನ ಪೂರ್ವಾಶ್ರಮದ ಖತರ್‌ನಾಕ್ ವರಸೆಗೆಲ್ಲ ಸಾಣೆ ಹಿಡಿದಂತಾಯ್ತು!

ಶಾಸಕ ಮಂಕಾಳ್‌ನ ನಿತ್ಯ ನೂತನ ಬಾರಾ ಭಾನಗಡಿ ಕಂಡು ಕಂಗಾಲಾಗಿ ಹೋಗಿದ್ದಾರೆ ಭಟ್ಕಳಿಗರೀಗ! ಶಾಸಕನಾಗುತ್ತಲೇ ಸೇವಾ ದುರಂಧರನಂತೆ ಪೋಸಿನ ಮೇಲೆ ಪೋಸು ಕೊಡತೊಡಗಿದ ಮಂಕಾಳ ಒಳಗೊಳಗೇ ಪೊಗದಸ್ತಾದ ಸರ್ಕಾರಿ ಇಲಾಖೆಗಳಿಂದ ಹಫ್ತಾ-ಮಾಮೂಲಿ-ಮಂತ್ಲಿ ವ್ಯವಸ್ಥಿತವಾಗಿ ಹರಿದು ಬರುವಂತೆ ಸೆಟ್‌ಅಪ್ ಮಾಡಿಕೊಳ್ಳುವುದರಲ್ಲೇ ಬಿಜಿಯಾಗಿಬಿಟ್ಟ! ಎಮ್ಮೆಲ್ಲೇ ಸಾಹೇಬನಾಗಿ ಒಂದೂವರೆ ವರ್ಷ ಕಳೆದಿರುವ ಈತನ ಸಾಧನೆಯೆಂದರೆ, ತನ್ನ ದಾರಿಗೆ ಅಡ್ಡ ಬರುವವರಿಗೆ ಭುಜಬಲ ಪರಾಕ್ರಮ ತೋರಿಸಿದ್ದು ಮತ್ತು ಅಕ್ರಮ ಆಮದನಿ ಜಮೆಗೊಳಿಸಿದ್ದು ಎರಡೇ ಎರಡು!! ದೀವರ ಎದುರುಹಾಕಿಕೊಂಡು "ಆಡಳಿತ" ಶುರು ಹಚ್ಚಿಕೊಂಡಿದ್ದ ಮಂಕಾಳ್‌ಗೆ ಜಿಲ್ಲಾ ಮಂತ್ರಿ ಆರ್‌ವಿಡಿ ಕೃಪಾಕಟಾಕ್ಷವೂ ಸಿಕ್ಕಿತು. ಮಂತ್ರಿ ಬಲದಿಂದ ಈ ಗೋಲ್‌ಮಾಲ್ ಶಾಸಕನ ಮಸ್ತಿಗೆಲ್ಲ ಡಬ್ಬಲ್ ಪವರ್ ಬಂದುಬಿಟ್ಟಿತು.

ದೀವರೆಲ್ಲ ಸೇರಿ ತನ್ನ ಮಗನನ್ನು ಪಾರ್ಲಿಮೆಂಟ್ ಇಲೆಕ್ಷನ್‌ನಲ್ಲಿ ಸೋಲಿಸಿದ್ದಾರೆಂಬ ಸಿಟ್ಟಿನಲ್ಲಿರುವ ಆರ್‌ವಿಡಿಗೆ ನಾಮಧಾರಿ ನಾಯಕರ ಮೇಲಿನ ಮುಯ್ಯಿ ತೀರಿಸಿಕೊಳ್ಳಲು ಶಾಸಕ ಮಂಕಾಳು ಬೇಕಾಗಿತ್ತು. ದೇಶಪಾಂಡೆ ಗಣಿತದಲ್ಲಿ ಸೇಡಿದ್ದರೆ, ಮಂಕಾಳ್‌ನ ದೂ(ದು)ರಾಲೋಚನೆಯೇ ಬೇರೆಯಾಗಿತ್ತು! ಸರ್ವಶಕ್ತ ಸಚಿವ ಆರ್‌ವಿಡಿ ಬೆಂಬಲ ಈತ ತನ್ನ ಧನದಾಹದ ದಗಾಕೋರ ದಂಧೆಗಳ ಸಾಮ್ರಾಜ್ಯ ವಿಸ್ತರಣೆಗೆ ಯೋಜನಾಬದ್ಧವಾಗಿ ಬಳಸಿಕೊಳ್ಳತೊಡಗಿದ. ವರ್ಗಾವರ್ಗಿ ಬಿಸ್ನೆಸ್‌ನಲ್ಲಿ ಜಿಲ್ಲೆಯ ಯಾವ ಎಮ್ಮೆಲ್ಲೆಯೂ ಮಾಡದಷ್ಟು ಕಮಾಯಿ ಮಾಡಿದ ಮಂಕಾಳ್ ತನ್ನ ಆಸೆ ಈಡೇರಿಸದ ಅಧಿಕಾರಿ-ಅಭಿಯಂತರ-ಆರಕ್ಷಕರನ್ನೆಲ್ಲ ಕೈತೊಳೆದು ಬೆನ್ನಟ್ಟಿ ಕಾಡಿದ. ಹೊನ್ನಾವರದ ನ್ಯಾಷನಲ್ ಹೈವೆಯ ಪಳಗಿದ ಕಳ್ಳ ಇಂಜಿನಿಯರ್ ನಾಗರಾಜ ನಾಯ್ಕ ಜಾತಿ-ದುಡ್ಡಿನ ಸೊಕ್ಕಿಂದ ತನ್ನನ್ನು ಶಾಸಕನೆಂದೂ "ನದರಿಸಿದೇ" ಒಂದೇ ಸಮನೆ ಸ್ವಾಹಾ ಮಾಡುತ್ತಿದ್ದಾಗ ಕೆರಳಿದ ಮಂಕಾಳ್ ಮಟ-ಮಟ ಮಧ್ಯಾಹ್ನ ಆತನನ್ನು ನಡು ಹೈವೆಯಲ್ಲೇ ವಿಚಾರಿಸಿಕೊಂಡಿದ್ದು ಮಜಾ ಆಗಿತ್ತು.

ಕೋಟ್ಯಂತರ ರೂಪಾಯಿ ಕಾಮಗಾರಿ ಕಳಪೆಯಾಗಿದೆ, ಅಂದಾಜು ಪತ್ರಿಕೆಯಂತೆ ನಡೆದಿಲ್ಲ ಎಂದೆಲ್ಲ ಬೈದು ಆ ನಾ(ಲಾ)ಯ್ಕನ ಕೈಲೇ ಟೇಪು ಹಿಡಿಸಿ ರಸ್ತೆ ಅಳೆದ ಮಂಕಾಳು ನ್ಯಾಷನಲ್ ಹೈವೇಲಿ ಕಳ್ಳರಿದ್ದಾರೆಂದು ಬೊಬ್ಬೆ ಹೊಡೆದದ್ದೇ ಹೊಡೆದದ್ದು. ಅಧಿಕಾರಸ್ಥರ ಸಂಪ್ರೀತಗೊಳಿಸುವ ಕಲೆ ಕರಗತ ಮಾಡಿಕೊಂಡಿರುವ ನಾಯ್ಕ ಶಾಸಕನ ಜರೂರತ್ತೇನೆಂದು ಅರ್ಥಮಾಡಿಕೊಂಡ! ಕೋಟಿ-ಕೋಟಿ ಖರ್ಚು ತೋರಿಸಿದ್ದ ನ್ಯಾಷನಲ್ ಹೈವೆ ಇಂಜಿನಿಯರ್‌ಗಳು ಪೈಸೆ-ಪೈಸೆ ಲೆಕ್ಕಾಚಾರ ಮಾಡಿ ಪರ್ಸೆಂಟೇಜ್ ಶಾಸಕನಿಗೆ ಅರ್ಪಿಸಿದರು. ಈಗ ಈ ಕಳಪೆ-ಹುಸಿ ಕಾಮಗಾರಿ ಅಗದಿ ಬರೋಬ್ಬರಿ ಎಂದೆನಿಸಿದೆ ಮಂಕಾಳುಗೆ!!


ಶಿರಾಲಿ ಚೆಕ್‌ಪೋಸ್ಟ್...


ಮೊನ್ನೆ ಸ್ವಾತಂತ್ರ್ಯೋತ್ಸವ ದಿನದಂದೇ ಮತ್ತೊಂದು ದಾಂಧಲೆ ಮಾಡಿಕೊಂಡು ಸಾಕ್ಷ್ಯಾಧಾರ ಸಮೇತ ಸಿಕ್ಕಿಬಿದ್ದಿದ್ದಾನೆ ಈ ಅಡ್ನಾಡಿ ಶಾಸಕ ಮಂಕಾಳು. ಎಲ್ಲೋ ಝುಂಡಾ ಹಾರಿಸಿ ತನ್ನ ಭಟ್ಕಳದ ಅಡ್ಡೆಯತ್ತ ಹೊರಟಿದ್ದ ಈತನಿಗೆ ಶಿರಾಲಿಯ ಪೊಲೀಸ್ ಚೆಕ್‌ಪೋಸ್ಟ್ ಕಂಡಿದ್ದೇ ಪಿತ್ಥ ನೆತ್ತೇಗಿರಿದೆ. ತಕ್ಷಣ ಕಾರು ನಿಲ್ಲಿಸಿದ ರೌಡಿ ಎಮ್ಮೆಲ್ಲೆ ಸೀದಾ ಚೆಕ್‌ಪೋಸ್ಟ್‌ಗೆ ನುಗ್ಗಿದ್ದಾನೆ. ಅಲ್ಲಿದ್ದ ಪೇದೆಗಳಿಗೆ ಬಾಯಿಗೆ ಬಂದಂತೆ ಬೈದು ಮೋಕಳಿಕ್ ಆಗಿದ್ದಾನೆ. "ನನ್ನ ಮರಳು ಲಾರಿಗಳನ್ನೇ ಹಿಡಿದು ನಿಲ್ಲಿಸುವಷ್ಟು ಸೊಕ್ಕೇನಲೇ ನಿಮಗೆ... ಇನ್ಮೇಲೆ ನನ್ನ ಲಾರಿ ಬಿಡದಿದ್ರೆ ಈ ಚೆಕ್‌ಪೋಸ್ಟನ್ನೇ ಒಡೆದು ಹಾಕ್ತೇನೆ... ತಿಳಿತಾ..." ಎಂದಬ್ಬರಿಸಿದ್ದಾನೆ ಉದ್ಧಟ ಎಮ್ಮೆಲ್ಲೆ!!

ಮಂಕಾಳು ಮೈಮೇಲೆ ಅಕ್ರಮ ಮರಳುಗಾರಿಕೆ ಭೂತ ಬಂದಿದ್ದು ಕ್ಷಣಾರ್ಧದಲ್ಲಿ ಎಲ್ಲೆಡೆ ಸುದ್ದಿಯಾಗಿದೆ. ಆಗ ಗಡಿಬಿಡಿಗೆ ಬಿದ್ದ ನಿರ್ಲಜ್ಜ ಮಂಕಾಳು ತನ್ನ "ಇನ್‌ಸ್ಪೆಕ್ಷನ್" ಸಮರ್ಥಿಸಿಕೊಳ್ಳಲು ತುಂಡುಗುಪ್ಪಳ ಹೊಡೆದಿದ್ದಾನೆ. "ನನ್ನ ಹೆಸರೇಳಿ ಚೆಕ್‌ಪೋಸ್ಟ್‌ನಲ್ಲಿ ಸುಲಿಗೆ ಮಾಡ್ತಿದ್ರು... ಅದ್ಕೆ ಅಲ್ಲಿಗೆ ಹೋಗಿದ್ದೆ. ಹಿಂಗೆಲ್ಲ ಮಾಡಬೇಡ್ರಿ ಅಂತಾ ಪೊಲೀಸ್ರಿಗೆ ವಾರ್ನಿಂಗ್ ಕೊಟ್ಟು ಬಂದಿದ್ದೇನೆ..." ಎಂದೆಲ್ಲ ಹಲುಬಿದ್ದಾನೆ. ಆದರೆ ಮಂಕಾಳು ಮಾಮ ಅಕ್ರಮ ಮರಳು ಲಾರಿಗಳ ತಡೆಯದಂತೆ ಪೊಲೀಸರಿಗೆ ಬೆದರಿಸಲೆಂದೇ ಶಿರಾಲಿ ಚೆಕ್‌ಪೋಸ್ಟ್‌ಗೆ "ದಾಳಿ" ಮಾಡಿದ್ದನೆಂದು ಆತನ ನಡೆ-ನುಡಿಯೇ ಸಾಬೀತುಪಡಿಸಿಬಿಟ್ಟಿದೆ!

ಶಾಸಕ ಮಂಕಾಳು ಪೊಲೀಸ್ ಮೇಲೆ ಹರಿಹಾಯುತ್ತಿದ್ದದ್ದು ಮತ್ತು ಕಂಗಾಲಾದ ಪೇದೆಗಳು ಶಾಸಕ ಸಾಹೇಬರಿಗೆ ಮೆತ್ತಗೆ ಸಮಜಾಯಿಷಿ ಕೊಡುತ್ತಿದ್ದುದನ್ನು ದಾರಿ ಹೋಕನೊಬ್ಬ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದ. ಇದು ಪೆದ್ದು ಮಂಕಾಳುಗೆ ಗೊತ್ತಾಗಲೇ ಇಲ್ಲ. ಆ ಆಗಂತುಕ ಶಾಸಕ-ಪೊಲೀಸ್ ಪೇದೆಗಳ "ಸಮರ-ಸರಸ" ಶೂಟ್ ಮಾಡಿದ್ದಲ್ಲದೆ ವಾಟ್ಸಪ್‌ಗೆ ಅಪ್‌ಲೋಡ್ ಸಹ ಮಾಡಿ ಪುಣ್ಯ ಕಟ್ಟಿಕೊಂಡಿದ್ದ! ಈ ಆಡಿಯೋ-ವಿಡಿಯೋ ಕಂಡವರಿಗೆ ಶಾಸಕ ಮಂಕಾಳು ಶಿರಾಲಿ ಚೆಕ್‌ಪೋಸ್ಟ್‌ಗೆ ಆಕ್ರೋಶದಿಂದ ಹೋಗಿದ್ದೇಕೆ? ಅಲ್ಲಾತ ಯಾರ ಪರ ವಾದಿಸಲೆಂದು ಹೋಗಿದ್ದ? ಶಾಸಕರ ಅಸಲೀ ಅವತಾರ ಯಾವುದು? ಇದೆಲ್ಲ ನಿಸ್ಸಂಶಯವಾಗಿ ಖಾತ್ರಿಯಾಗುತ್ತದೆ!

ಹೌದು; ಹುಂಬ ಶಾಸಕ ಮಂಕಾಳು ಚೆಕ್‌ಪೋಸ್ಟ್‌ಗೆ ಹೋಗಿದ್ದೇ ಮರಳು ಮಾಫಿಯಾದ ದಂಧೆ ನಿರಾತಂ[ಕ] ಮಾಡಲೆಂದು! ಹೊನ್ನಾವರದ ಜೀವನದಿ ಶರಾವತಿಯ ಒಡಲು ಬಗೆದು ಅಕ್ರಮವಾಗಿ ಮರಳು ಎತ್ತಿ ಮಾರುತ್ತಿರು[ವ] ಮರಳು ದಂಧೆಯ ಮಾಫಿಯಾಕ್ಕೆ ಶಾಸಕ ಮಂಕಾಳ ವೈದ್ಯನೇ ಮಾತಾ-ಪಿತ!! ಪ್ರತಿದಿನ ಲಕ್ಷಾಂತರ ರೂಪಾಯಿ ಮರಳು ಅವ್ಯವಹಾರ ಹೊನ್ನಾವರದ ಬಿಕ್ಕಸಿನ ತಾರಿ-ಕೆಳಗಿನ ಪಾಳ್ಯ, ಫರಿಯಹಾದಲ್ಲಿ ನಡೆಯುತ್ತಿದೆ. ಹೀಗ[ೆ] ಕಾನೂನುಬಾಹಿರವಾಗಿ ಮರಳುಗಾರಿಕೆ ನಡೆಸುವವರ[ಲ್ಲಿ] ಶಾಸಕ-ಮಂಕಾಳುನೂ ಒಬ್ಬ. ಈತನ ಸಹೋದರ[ನ] ಹೆಸರಲ್ಲಿರುವ ಲಾರಿಗಳಲ್ಲಿ ಪ್ರತಿದಿನ ಭಟ್ಕಳದತ್ತ ಟನ್‌ಗಟ್ಟ[ಲೆ] ಮರಳು ಹೋಗುತ್ತದೆ. ಜೊತೆಗೆ ಶಾಸಕನಿಗೆ ಬೇಕಾದವರು ಈ ದಂಧೆಯಲ್ಲಿ ನಿರತರಾಗಿದ್ದಾರೆ. ಮಂಕಾಳುನ ಬೇನಾಮಿ ಮರಳುಗಾರಿಕೆ ಶಾಸಕತ್ವದ ಮಹಿಮೆಯಿಂದ ಮಜಬೂತಾ[ಗಿ] ನಡೆಯುತ್ತಿದೆ.

ಸುದ್ದಿ-ಗದ್ದಲವಿಲ್ಲದೆ ಸಾಂಗೋಪಾಂಗವಾಗಿ ನಡೆಯುತ್ತಿ[ದ್ದ] ಎಮ್ಮೆಲ್ಲೆ ಮಂಕಾಳ್‌ನ ಮರಳು ಕಳ್ಳ ಸಾಗಾಣಿಕೆ ವ್ಯವಹಾರ ಸ್ಫೋಟಕ ತಿರುವು ಬಂದಿದ್ದು ಭಟ್ಕಳದ ಡಿವೈಎಸ್[ಪಿ] ಮುತ್ತುರಾಜ್ ಎಂಬ ಬಾಯಿಬಡುಕನ ಮನಿ ಮಸಲತ್ತಿನಿಂದ. ಈ ಮುತ್ತುರಾಜ್ ತಾನೂ ಏಕೆ ಅಕ್ರಮ ಮರಳುಗಾರಿಕೆಯ[ಲ್ಲಿ] ಕೈಯಾಡಿಸಿ ಕಾಸು ಮಾಡಬಾರದೆಂದು ಒಂದು ಸ್ಕೆಚ್ ಹಾಕಿದ. ಶಿರಾಲಿ ಪೊಲೀಸ್ ನಾಕಾದಲ್ಲಿ ಡ್ಯೂಟಿ ಮಾಡು[ವ] ಪೊಲೀಸ್-ಎಸ್‌ಐ-ಸಿಪಿಐಗಳಿಗೆಲ್ಲ ರಹಸ್ಯ ಫರ್ಮಾನ್ ಹೊರಡಿಸಿದ. ಅಕ್ರಮ ಮರಳು ಲಾರಿಗಳಿಂದ ತಲಾ 10[-] 15 ಸಾವಿರ "ದಂಡ" ವಸೂಲಿ ಮಾಡುವಂತೆ ಆದೇಶಿಸಿದ. ಇದರಲ್ಲಿ ಲಕ್ಷಾಂತರ ರೂಪಾಯಿ ಜಮೆಯಾಗುತ್ತಿತ್ತು. ಯಾರಾದರೂ ಪ್ರಶ್ನಿಸಿದರೆ "..... ಆ ಎಮ್ಮೆಲ್ಲೆ ಮಂಕಾಳು[ಗೆ] ಪಾಲು ಕೊಡ್ಬೇಕ್ರಿ... ಸುಮ್ನೆ ದುಡ್ಡು ಕೊಟ್ಟು ಹೋಗ್ರಿ..." ಎಂದು ಹೇಳುವ ಕಂಠಪಾಠವೂ ಕೈಕೆಳಗಿನ ಪೊಲೀಸರಿ[ಗೆ] ಮುತ್ತುರಾಜ್ ಮಾಡಿಸಿದ್ದ!


DYSP ಮುತ್ತುರಾಜ್

ನಾವು ಬದುಕಿನ ಪಾಠ ಕಲಿಸುತ್ತೇವೆ ಸಾರ್

ರಫೀಫ ಜಿಯದಹ್, ದೇಶಭ್ರಷ್ಟಳಾದ ಪ್ಯಾಲಸ್ತೈನಿ ಯುವತಿ. ಕೆನಡಾದಲ್ಲಿ ನೆಲೆಸಿ, ಪ್ಯಾಲಸ್ತೈನಿಯರ ತಾಯ್ನಾಡಿನ ಹಕ್ಕಿಗಾಗಿ ಹೋರಾಟ ಸಂಘಟಿಸುತ್ತಿರುವ ರಫೀಫ, 'ವಾಚನಾ ಕಾವ್ಯ' ಕಲೆ (Performance Poetry)ಯನ್ನು ಕರಗತ ಮಾಡಿಕೊಂಡು, ನಮ್ಮ ಅಂತರಂಗಗಳನ್ನು ಬಡಿದೆಬ್ಬಿಸುವ ಕಾವ್ಯವಾಚನ ಮಾಡುತ್ತಾಳೆ. ಅವಳ ಒಂದು 'ಆಡುಗಾವ್ಯ' ಇಲ್ಲಿವೆ.

"ಇಂದು ಟೀವಿಯಲ್ಲಿ ನನ್ನ ಮೈಯನ್ನು
ಕೊಚ್ಚಿ ಕೊಚ್ಚಿ ತುಂಡು ಮಾಡಲಾಗಿದೆ,
ಕೊಚ್ಚಿ ಕೊಚ್ಚಿ ತುಂಡು ಮಾಡಲಾಗಿದೆ,
ತುಂಡು ಮಾತುಗಳಲ್ಲಿ ಹೆಣಗಳ ರಾಶಿ ಒಟ್ಟಲಾಗಿದೆ.
ಟೀವಿಯಲ್ಲಿ ನನ್ನ ಮೈಯನ್ನು ಕೊಚ್ಚಿ
ತುಂಡು ಮಾಡಿ, ತುಂಡು ಮಾತುಗಳಲ್ಲಿ
ಸಮತೂಕ ಹೆಣೆಯಲು ಅಂಕಿ-ಸಂಖ್ಯೆಗಳನ್ನು ತುಂಬಲಾಗಿದೆ.

ನಾನು ನನ್ನ ಇಂಗ್ಲಿಷನ್ನು ಹುರಿಮಾಡಿಕೊಂಡೆ,
ವಿಶ್ವ ಮಂಡಳಿಯ ನ್ಯಾಯವನ್ನು ಉರು ಹಚ್ಚಿಕೊಂಡೆ
ಇಷ್ಟಾದರೂ ಅವನು ಕೇಳುತ್ತಾನೆ, ಮಿಸ್ ಝಿಯದಹ್,
ನೀವು ನಿಮ್ಮ ಮಕ್ಕಳಿಗೆ ಹಗೆಯ
ಪಾಠ ಕಲಿಸೋದು ನಿಲ್ಲಿಸಿದರೆ
ಎಲ್ಲಾ ತಂತಾನೆ ನಿಲ್ಲುತ್ತೇ ಅನಿಸೋಲ್ವೆ?

ಅರೆಗಳಿಗೆ ನೀರವ
ಅಂತರಂಗಕ್ಕಿಳಿದು ಜಾಲಾಡುತ್ತೇನೆ ಎಲ್ಲುಂಟು
ಸಂಯಮ ಚಿತ್ತ, ಎಲ್ಲಿರುತ್ತದೆ ಶಾಂತ ವಚನ
ಗಾಝಾ ಪಟ್ಟಣದ ಮೇಲೆ ಬಾಂಬು ಮಳೆಗರೆಯುತ್ತಿರುವಾಗ
ಸಾವಧಾನ ಈಗಷ್ಟೇ ಜಾರಿಕೊಂಡಿದೆ.
ಅರೆಗಳಿಗೆ ನೀರವ. ಮಂದಹಾಸ.
ನಾವು ಬದುಕಿನ ಪಾಠ ಕಲಿಸುತ್ತೇವೆ ಸಾರ್
ರಫೀಫ, ಮಂದಹಾಸ ಮರಿಬೇಡ.
ಅರೆಗಳಿಗೆ ನೀರವ
ನಾವು ಬದುಕಿನ ಪಾಠ ಕಲಿಸುತ್ತೇವೆ ಸಾರ್
ನಾವು ಪ್ಯಾಲಸ್ತೀನಿಯರು,
ಅವರು ಆಕಾಶದ ಕೊನೆಯಂಚಿನವರೆಗಿನ
ನಮ್ಮ ನೆಲವನ್ನು ಆಕ್ರಮಿಸಿಕೊಂಡಿರುವಾಗಲೂ
ನಾವು ಬದುಕಿನ ಪಾಠ ಕಲಿಸುತ್ತೇವೆ
ದಿಗಂತದಾಚೆಗೂ ಅವರು ವಸತಿ ಪ್ರದೇಶಗಳನ್ನು ಕಟ್ಟಿ
ಮತಭೇದದ ಅಡ್ಡಗೋಡೆ ನೆಟ್ಟ ನಂತರವೂ
ನಾವು ಬದುಕಿನ ಪಾಠ ಕಲಿಸುತ್ತೇವೆ.
ನಾವು ಬದುಕಿನ ಪಾಠ ಕಲಿಸುತ್ತೇವೆ ಸಾರ್.

ಟೀವಿಯಲ್ಲಿ ನನ್ನ ಮೈಯನ್ನು ಕೊಚ್ಚಿ ತುಂಡು ಮಾಡಲಾಗಿದೆ,
ತುಂಡು ಮಾತುಗಳ ಚೌಕಟ್ಟಲ್ಲಿ ಇಡಲಾಗಿದೆ.

ನೋಡು ಒಂದು ಮನಕರಗುವ ಕಥೆ ಹೇಳಬಾರದೆ,
ರಾಜಕೀಯ ಎಲ್ಲಾ ಯಾಕಮ್ಮ,
ನೀನು ಮತ್ತು ನಿಮ್ಮ ಜನರ ಬಗ್ಗೆ ಲೋಕಕ್ಕೆ
ತಿಳಿಸೋದು ಬೇಡವೇ,
ಒಂದು ಮನಕರಗುವ ಕಥೆ ಹೇಳು
'ಮತಭೇದ', 'ಆಕ್ರಮಣ' ಇಂಥ ಮಾತೆಲ್ಲ ಯಾಕಮ್ಮ
ಇಲ್ಲಿ ರಾಜಕೀಯ ಸಲ್ಲದು ಕಣಮ್ಮ.


ವರದಿಗಾರ ನಾನು, ನನಗೆ ಆಸರೆಯಾಗು,
ರಾಜಕೀಯದ ಸುಳಿವಿನಿತೂ ಇರದ ಕತೆಯೊಂದ ನಿನಗೆ
ಹೊಸೆದು ಕೊಡುವೆ
ಟೀವಿಯಲ್ಲಿ ನನ್ನ ಮೈಯನ್ನು ಕೊಚ್ಚಿ ತುಂಡು ಮಾಡಲಾಗಿದೆ.

ಗಾಝಾ ಪಟ್ಟಣದಲ್ಲಿ ಮದ್ದಿಗಾಗಿ ಹಪಹಪಿಸುವ ಹೆಂಗಸಿನ
ಕಥೆ ಹೇಳಬಾರದೇ?
ನಿನ್ನ ಕಥೆಯನ್ನೇ ಯಾಕೆ ಹೇಳಬಾರದು?
ಸೂರ್ಯನಿಗೆ ಗ್ರಹಣ ಹಿಡಿಸುವಷ್ಟು
ರಾಶಿ ಮುರಿದ ಮೂಳೆಗಳ ಕಥೆ ನಿನ್ನ ಬಳಿ ಇಲ್ಲವೆ?
ಸಾವಿರದಿನ್ನೂರು ಪದಗಳ ಮಿತಿ ಮೀರದಂತೆ
ನಾಮಾಂಕಿತ ಸಹಿತವಾಗಿ ಸತ್ತವರ ಪಟ್ಟಿ ಕೊಡು.

ಟೀವಿಯಲ್ಲಿ ನನ್ನ ಮೈಯನ್ನು ಕೊಚ್ಚಿ ತುಂಡು ಮಾಡಲಾಗಿ[ದೆ]
ತುಂಡು ಮಾತುಗಳ ಚೌಕಟ್ಟಲ್ಲಿ ಇಡಲಾಗಿದೆ.

ಭಯೋತ್ಪಾದಕರ ನೆತ್ತರ ಬಗ್ಗೆ ಮರುಕವಿಲ್ಲದವರನ್ನು
ಕೊಂಚ ಅಲ್ಲಾಡಿಸು
ಅವರಿಗೂ ದುಃಖವಾಗಿದೆ ಕಣಮ್ಮ
ಸತ್ತ ಜಾನುವಾರುಗಳ ಕಂಡು ಅವರಿಗೂ ದುಃಖವಾಗಿ[ದೆ]
ಹೀಗಾಗಿ, ನಾನು ಅವರಿಗೆ ವಿಶ್ವಮಂಡಳಿಯ
ನಿರ್ಣಯಗಳನ್ನೂ, ಅಂಕಿ ಸಂಖ್ಯೆಗಳನ್ನೂ ಉಣಿಸುತ್ತೇ[ನೆ]
ನಾವೂ ಖಂಡಿಸುತ್ತೇವೆ, ನಾವೂ ಖೇದ ವ್ಯಕ್ತಪಡಿಸುತ್ತೇ[ವೆ]
ಮತ್ತು ನಿರಾಕರಿಸುತ್ತೇವೆ.
ಆಕ್ರಮಣಕಾರರು ಮತ್ತು ಆಕ್ರಮಿತರು: ಸಮಬಲದವರೇನ[ು]
ನೂರು ಮಂದಿ ಸತ್ತಿದ್ದಾರೆ, ಇನ್ನೂರು ಮಂದಿ ಸತ್ತಿದ್ದಾ[ರೆ]
ಸಾವಿರಾರು ಜನ ಸತ್ತಿದ್ದಾರೆ.

ಯುದ್ಧಾಪರಾಧ, ರಾಶಿ ಕಗ್ಗೊಲೆಗಳ ನಡುವೆ,
ನಾನು ಪದಗಳನ್ನು ಕಕ್ಕುತ್ತೇನೆ, 'ರಮಣೀಯ'ವಲ್ಲದ,
'ಭಯೋತ್ಪಾದಕ'ವಲ್ಲದ ಮಂದಹಾಸದಲ್ಲಿ.
ಮತ್ತೆ ಮರುಎಣಿಕೆ, ಸತ್ತವರು ನೂರು, ಸತ್ತವರು ಸಾ[ವಿರ]


ದೇಶಪಾಂಡೆ

ಾಹೇಬರ ಆಜ್ಞೆ ಪಾಲಿಸಿ ವಸೂಲಿ ಮಾಡುವ ಭರದಲ್ಲಿ ಿ ಚೆಕ್‌ಪೋಸ್ಟ್‌ನ ಪೇದೆಗಳು ಎಮ್ಮೆಲ್ಲೆ ಮಂಕಾಳುನ ಗಳನ್ನು ತಡೆದು ರಸ್ತೆ ಅಂಚಿಗೆ ನಿಲ್ಲಿಸಿದ್ದಾರೆ. ಇದು ವತಿ ನದಿಯಲ್ಲಿನ ಕಾನೂನುಬಾಹಿರ ಮರಳು ಮದ ಕಿಂಗ್‌ಪಿನ್ ಶಾಸಕ ಮಂಕಾಳು ಎಂಬುದನ್ನು ಂಗ ಮಾಡಿತು. ಮರಳು ಲಾರಿಗಳು ಶಾಸಕರದೆಂದು ್ತದೇ ಪೇದೆಗಳು ತಡೆದು ನಿಲ್ಲಿಸಿದ್ದರು. ಶಾಸಕರದ್ದೆಂದು ು ಅವುಗಳನ್ನು ಬಿಡಬೇಕೆನ್ನುವಷ್ಟರಲ್ಲಿ ನಿಲ್ಲಿಸಿದ್ದ ಅಕ್ರಮ ಲಾರಿಗಳು ಶಾಸಕ ಮಂಕಾಳುದೆಂದು ಆತನ ಎದುರಾಳಿ ವ ದೀವರ ಲೀಡರುಗಳಿಗೆ ಗೊತ್ತಾಗಿ ಹೋಗಿತ್ತು. ಲಾರಿ ಬಿಡದಂತೆ ಪೊಲೀಸರಿಗೆ ಇವರೆಲ್ಲ ಒತ್ತಡ ದರು. ಡಿವೈಎಸ್‌ಪಿ ಮುತ್ತುರಾಜ್ ಇಕ್ಕಟ್ಟಿಗೆ ಬಿದ್ದರು. ಏನು ಮಾಡಿದರೂ ತನ್ನ ಲಾರಿ ಬಿಡದ ಪೊಲೀಸರ ಟ್ಟಿ" ಮಂಕಾಳು ವೈದ್ಯನ ತಲೆ ಕೆಡಿಸಿದೆ. "ನನ್ನ ಹಿಡಿಲಿಕ್ಕೆ ನೀವ್ಯಾರು.... ನನ್ನ ಲಾರಿ ಬಿಡದಿದ್ರೆ ಪೋಸ್ಟ್‌ನೇ ಒಡೆದು ಹಾಕ್ತೇನೆ...." ಎಂದಬ್ಬರಿಸುತ್ತ ಳು ಚೆಕ್‌ಪೋಸ್ಟ್‌ಗೆ ಹೋಗಿದ್ದಾನೆ. ಈ ಪ್ರಕರಣವೀಗ ಾಳುನ ಹಣಿಯಲು ವಿರೋಧಿಗಳು ಅಸ್ತ್ರ ಟಕೊಂಡಿದ್ದಾರೆ. ಎದುರಾಳಿಗಳ ಸೊಕ್ಕಡಗಿಸಲು ಾಳು ಕೂಡ ಟ್ರಿಕ್ಕು ಮಾಡಿದ್ದಾನೆ. ಒಂದೇ ಒಂದು ು ಮರಳು ಲಾರಿ ಶಿರಾಲಿ ಚೆಕ್‌ಪೋಸ್ಟ್ ಆಚೆ ಗದಂತೆ ನೋಡಿಕೊಳ್ಳಲು ಆತ ಪೊಲೀಸರಿಗೆ ಟ್ಟಿನ "ಧಮಕಿ" ಹಾಕಿದ್ದಾನೆ. ಮರಳಿನ ಕೊರತೆಯಿಂದ ದಲ್ಲಿ ಹಾಹಾಕಾರ ಏಳುವಂತೆ ಮಾಡುವ ತಂತ್ರ ಾಳದು. ಆಗ ಈ ತೊಂದರೆಗೆ ತನ್ನ ಎದುರಾಳಿಗಳೇ ಾವೆಂದು ಬಿಂಬಿಸಿ ಸಾರ್ವಜನಿಕವಾಗಿ ಹೀರೋ ಆಗಲು ಹವಣಿಸುತ್ತಿದ್ದಾನೆ. ಬಿಜೆಪಿ ಲೀಡರ್‌ಗಳು ಇಂಗು ಮಂಗನಂತಾಗಿದ್ದಾರೆ.

ನರೇ ಸಾರ್ವಜನಿಕ ಕಾಮಗಾರಿಗೆ, ವೈಯಕ್ತಿಕ ಗಳಿಗೆ ಮರಳು ಬೇಕೆಂದು ಬೊಬ್ಬೆ ಹಾಕುವುದು ಟ. ಆಗ ಮತ್ತೆ ಎಮ್ಮೆಲ್ಲೆ ಮಂಕಾಳು ವೈದ್ಯನ ು ಮರಳುಗಾರಿಕೆ ಸಲೀಸಾಗುತ್ತದೆ. ಒಟ್ಟನಲ್ಲಿ ನಂಬರ್ ದಂಧೆದಾರನ ಶಾಸಕತ್ವಕ್ಕೆ ಸಿಲುಕಿರುವ -ಹೊನ್ನಾವರ ಕ್ಷೇತ್ರಕ್ಕಿದು ಕೇಡುಗಾಲ ಎಂದೇ ಗ ಹಣೆ-ಹಣೆ ಚಚ್ಚಿಕೊಳ್ಳುತ್ತಿದ್ದಾರೆ; ಮಂಕಾಳುನನ್ನು ್ಲೆ ಮಾಡಿದವರಲ್ಲೀಗ ಪಾಪಪ್ರಜ್ಞೆ ಮೂಡಿದೆ!

■ ನಹುಷ

ದ್ದೀರಲ್ಲಿ? ಯಾರಿಗಾದರೂ ಕೇಳುತ್ತಿದೆಯ?
ರ ಬಳಿ ಕೂತು ಗೋಳಿಡಬೇಕೆಂದು
, ಆಸೆ ಗೊತ್ತಾ ನನಗೆ.

ಾಲಲ್ಲಿ ನಿರಾಶ್ರಿತ ಶಿಬಿರದ ಮೂಲೆಮೂಲೆ
ಡಬೇಕು, ಒಂದೊಂದು ಮಗುವನ್ನು ಎತ್ತಿಕೊಂಡು,
ಕಿವಿಗಪ್ಪಳಿಸುತ್ತಿದ್ದಂತೆ ಇನ್ನೆಂದೂ ಬಾಂಬುಗಳ ಶಬ್ದ
ಗಳಿಗೆ ಕೇಳದಂತೆ ಕಿವಿ ಮುಚ್ಚಬೇಕು- ಅಂತ
ಮಾಗುತ್ತೆ ಗೊತ್ತಾ,

ಯಲ್ಲಿ ನನ್ನ ಮೈಯನ್ನು ಕೊಚ್ಚಿ ತುಂಡು ಮಾಡಲಾಗಿದೆ,
ು ಮಾತುಗಳ ಚೌಕಟ್ಟಲ್ಲಿ ಇಡಲಾಗಿದೆ.

ಹೇಳಿಯೇಬಿಡುತ್ತೇನೆ ಕೇಳಿ, ನಿಮ್ಮ ವಿಶ್ವಮಂಡಳಿಯ
ಿ ತೀರ್ಪುಗಳು ಕಗ್ಗೊಲೆಗಳ ತಡೆದಿಲ್ಲ
ನ ತುಂಡು ಮಾತೂ, ನನ್ನ ಬಾಯಿಂದ ಹೊರಡುವ
ವುದೇ ಮಾತ ತುಂಡೂ,
ಚೆಂದವಿರಲಿ ನಾನಾಡುವ ಇಂಗ್ಲಿಷ್, ಯಾವ ಮಾತ
ು, ಯಾವುದೇ ಯಾವುದೇ ಮಾತಿನ ತುಂಡೂ
ಗೆ ಮರುಜೀವ ನೀಡದು
ನ ತುಂಡಿಗೆ. ಆ ಶಕ್ತಿ ಇಲ್ಲ,
ಬದುಕನ್ನು ಕಲಿಸುತ್ತೇವೆ, ಸಾರ್.

ಬದುಕನ್ನು ಕಲಿಸುತ್ತೇವೆ, ಸಾರ್.
ಶ್ವಾಸಿಸ್ತೀಸಿಯುದು ಪ್ರತಿ ಮುಂಜಾವಿನಲ್ಲೆದ್ದು
ಜಗತ್ತಿಗೆ
ಳುಲಿವೊ ಹಾಕ ಕಲಿಸುತ್ತೇವೆ, ಸಾರ್.

"ಡಾ. ಮೈತ್ರಿಗೆ ನೀವು ಹೆದರಿ ಓಡಬಾರದಿತ್ತು ಸಾರ್!"

ಥುತ್ತೇರಿ

▸ ಯಾಹೂ

ಮೋದಿಯ ಲದ್ದಿ ವಾಸನೆಗೆ ಮಲೆತು ಹೋಗಿರುವ ಕೆಲ ಮಾಧ್ಯಮದವರು ದಿನೇಶ್ ಅಮೀನ್ ಮಟ್ಟು ಎಸೆದ ಮಾತಿನಿಂದ ಎಚ್ಚೆತ್ತು "ಮೋದಿ ಮತ್ತು ನಮ್ಮ ನಡುವಿನ ಪ್ಯಾಕೇಜಿನ ವಿಷಯದಲ್ಲಿ ಮಟ್ಟು ರಾಜಕಾರಣಿಯಂತೆ ಮಾತನಾಡಬಾರದು" ಎಂದು ಪಬ್ಲಿಕ್ಕಾಗಿಯೇ ತಕರಾರು ತೆಗೆದರಂತಲ್ಲಾ, ಅನಾದಿಕಾಲದಿಂದಲೂ ಪುರೋಹಿತರಿಗೂ ಪ್ಯಾಕೇಜಿಗೂ ಅವಿನಾಸಂಬಂಧ. ಅದು ಮದುವೆ, ತಿಥಿ, ಯಜ್ಞ ಹೋಮದಿಂದ ಹಿಡಿದು ಮಾಧ್ಯಮದಲ್ಲಿ ಮೂತಿ ತೋರುವವರೆಗೂ ವ್ಯಾಪಿಸಿರುವುದು ದಿನೇಶ್ ಅಮೀನ್ ಮಟ್ಟುಗೂ ಗೊತ್ತಿರುವಂತಿದೆ. ಹೀಗೆ ಗೊತ್ತಿರುವಂತಹ ವಿಷಯವನ್ನು ಪ್ಯಾಕೇಜಿನ ಫಲಾನುಭವಿಗಳಿಗೆ ನೇರಾನೇರ ಹೇಳಬೇಕಾದರೆ, ತಾವು ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರನ ಭಾಷೆಯಲ್ಲಿ ಹೇಳಬೇಕಿತ್ತು. ಅದು ಬಿಟ್ಟು ಮುಖ್ಯಮಂತ್ರಿಯಂತೆಯೇ ಹೇಳಬಾರದು. ಇದೆಲ್ಲಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯ "ಮಾಧ್ಯಮದವರು ಇದ್ದರೆಷ್ಟು, ಇಲ್ಲದಿದ್ದರೆಷ್ಟು. ಅವರ ಕೆಲಸ ಅವರು ಮಾಡಲಿ, ನಮ್ಮ ಕೆಲಸ ನಾವು ಮಾಡಿಕೊಂಡು ಹೋಗೋಣ" ಎಂಬ ತೀರ್ಮಾನ ತೆಗೆದುಕೊಂಡಂತೆ ಎಲ್ಲೆಂದರಲ್ಲಿ ಗೊರಕೆ ಹೊಡೆಯುವುದಲ್ಲದೆ, ಈವರೆಗೆ ಮಾಧ್ಯಮದವರಿಗೆ ಕೊಡಬೇಕಾದ ಗೌರವವನ್ನು ಕೊಟ್ಟಿಲ್ಲವಂತಲ್ಲಾ. "ಹೀಗೆ ಗೌರವ ಕೊಡದವನ ಮುಖವನ್ನ ಗಂಟೆಗಟ್ಟಲೆ ತೋರಿಸಲು ಸಾಧ್ಯವೆ" ಎಂದು ಮಾಧ್ಯಮದ ಮೂರ್ಖರು ಮರುಪ್ರಶ್ನೆ ಹಾಕುತ್ತಿರುವುದು ಸಮಂಜಸವಾಗಿದೆಯಂತಲ್ಲಾ, ಥೂತ್ತೇರಿ!

* * *

ದಿನೇಶ್ ಅಮೀನ್ ಮಟ್ಟು ಮಾತಿಗೆ ಸಿಟ್ಟು ಮಾಡಿಕೊಂಡಿರುವ ಪರಿಶುದ್ಧ ಮಾಧ್ಯಮದವರ ಯಾಚನೆಗೆ ಸಂಬಂಧಿಸಿದಂತೆ ಬೃಹತ್ತಾದ ಸಾಕ್ಷಿಗಳೇ ನಮ್ಮಲ್ಲಿ ಸಂಗ್ರಹಗೊಂಡಿದೆ. ಅವುಗಳಲ್ಲಿ ಮಲೆನಾಡ ಕಡೆಯ ಮಾಧ್ಯಮದವನೊಬ್ಬ ರಾಜಕಾರಣಿಯೊಬ್ಬನಿಗೆ ಬರೆದಿರುವ ಪತ್ರದ ಸಾರಾಂಶ- ಅಲ್ಲ ಯಥಾವತ್ ಪತ್ರವೇ- ಪ್ರಕಟಿಸಲು ಸೂಕ್ತವಾಗಿದೆಯಲ್ಲಾ. ಪ್ರಜ್ಞಾವಂತರು ಓದಿ ಮುಗ್ಧ ಓದುಗರಿಗೂ ಓದಿಸಲು ವಿನಂತಿ.

"ನಮ್ಮೆಲ್ಲರ ನಾಯಕರೆ, ತಂದೆಯವರಂತೆಯೇ ಬಹುಬೇಗ ರಾಜಕೀಯಾಕಾಶದಲ್ಲಿ ಬೆಳಗುತ್ತಿರುವ ನಿಮಗೆ ಉಜ್ವಲ ಭವಿಷ್ಯವಿದೆ. ನಿಮ್ಮ ತಂದೆಯವರು ನನ್ನ ಮೇಲೆ ಕೃಪಾದೃಷ್ಟಿ ಬೀರಿದ್ದರಿಂದ ಸ್ವಂತ ಮನೆ ಕಟ್ಟಿಕೊಂಡಿದ್ದೇನೆ. ಇದೀಗ ನಿಮ್ಮ ಸುವರ್ಣಯುಗ ಆರಂಭವಾಗಿದೆ. ಆದ್ದರಿಂದ ನಿಮ್ಮನ್ನೆ ನಚ್ಚಿ ಮೇಲ್ಮಹಡಿಗೆ ಕೈಹಾಕಿದ್ದೇನೆ. ನಿಮಗೇ ತಿಳಿದಿರುವಂತೆ ಮರಳು, ಸಿಮೆಂಟು, ಕಬ್ಬಿಣದ ರೇಟು ಕೇಳಿ ದಂಗುಬಡಿದು ಹೋಗಿದ್ದೇನೆ. ಆದರೇನು, ನೀವಿರುವವರೆಗೂ ನಾನು ಹೆದರುವ ಅಗತ್ಯವಿಲ್ಲ. ತಮ್ಮ ಆಶೀರ್ವಾದವೊಂದಿದ್ದರೆ ಸಾಕು ಇದೇ ದಸರಾ ವೇಳೆಗೆ ಮೇಲ್ಮಹಡಿ ಗೃಹಪ್ರವೇಶ ನಡೆದೇ ನಡೆಯುತ್ತದೆ. ನಮ್ಮ ಶ್ರೀಮತಿಯವರು ನಿಮ್ಮನ್ನು ಯಾವಾಗಲೂ ನೆನೆಸುತ್ತಾಳೆ. ಮೇಲ್ಮಹಡಿ ಗೃಹ ಪ್ರವೇಶಕ್ಕೆ ನೀವು ಬರಲೇಬೇಕು. ಇಂತು ನಿಮ್ಮ ಅಭಿಮಾನಿ."

ಥೂ, ಥೂ, ಥೂತ್ತೇರಿ!!

* * *

ಒಂದು ಕಾಲದಲ್ಲಿ ಕಾಂಗ್ರೆಸ್ಸನ್ನು ದ್ವೇಷ ಮಾಡುತ್ತಿದ್ದವರೆಲ್ಲಾ ಕ್ರಮೇಣ ಏನಾದರೂ ಮಾಡಿ ಆ ಪಾರ್ಟಿ ಉಳಿಸಿಕೊಳ್ಳುವಂತೆ ಮಾತು ಬದಲಾಯಿಸಿದ್ದನ್ನು ನೋಡಿದ ಕಾಂಗ್ರೆಸ್ನವರೇ 'ಇದೇನು ಈ ಪರಿಯ ಬದಲಾವಣೆ' ಎಂದು ಅಚ್ಚರಿಗೊಂಡಿದ್ದು ಈಗ ಇತಿಹಾಸ. ಹಾಗೆಯೇ ಜೆಡಿಎಸ್‌ನ ತಾರಾತಿಗಡಿ ರಾಜಕಾರಣ ನೋಡಿ ಬೇಸರಗೊಂಡವರೆಲ್ಲಾ ಈಗ ಅದರ ಅವನತಿ ಹೆಚ್ಚಿಗೆ ಹೆದರಿ ಜೆಡಿಎಸ್‌ನಂತಹ ಒಂದು ಪುಂಡು ಪಾರ್ಟಿ ಕರ್ನಾಟಕದಲ್ಲಿ ಇರಲೇಬೇಕೆಂದು ಮಾತನಾಡುತ್ತಿದ್ದಾರಲ್ಲಾ, ಆ ಪಾರ್ಟಿಯ ಅವನತಿಗೆ ಕಾರಣಕರ್ತರಾದ ಕುಮಾರಸ್ವಾಮಿಗಳನ್ನು ಮಾತನಾಡಿಸಿ ಅವರ ಸಮಸ್ಯೆಗಳೇನೆಂದು ಕೇಳಬೇಕೆನಿಸಿತಲ್ಲಾ, ಆ ಕೂಡಲೆ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಕ್ಯಂಬಾಲೊ ಪಂಬ್ಯಾಲೊ ಯಂಗವ್ರುಲಾ ನಿನ್ ಕನಸ್‌ಗಳು..."

"ಹಲೋ ಯಾರ್ರೀ?"

"ನಮಸ್ಕಾರ ಸಾ. ನಾನು ಯಾಹು."

"ಏನ್ರಿ ಯಾಹು?"

"ಬಿಡುವಾಗಿದ್ರೆ ಒಂದೆರಡು ಮಾತಾಡಬೇಕು ಸಾರ್."

"ಅದೇನೇಳ್ರಿ."

"ಇದ್ಯಾಕ್ ಸಾರ್ ಪಾರ್ಟಿ ಕತೆ ಹಿಂಗೆ ಮಾಡಿದ್ರಿ?"

"ನಾನೇನು ಮಾಡಿದ್ನಿ?"


"ಕುಮಾರಣ್ಣ ಮತ್ತು ಸಲಹತ್ತು ಮಂದಿ ಕಳ್ಳರು ಅನ್ನಂಗೆ ಮಾಡಿಬುಟ್ರು ಅಂತ ಆಡಿಕಳಂಗಾಯ್ತು ಸಾರ್."

"ಯಾರ್ರಿ ಅಂಗಂದೋರು?"

"ನಿಮ್ಮ ಪಾರ್ಟಿ ಶಾಸಕರ ಅಂಗಂದ್ರು ಸಾರ್."

"ಯಾರಂದವ್ರು ಅನ್ನದು ನನಿಗೂ ಗೊತ್ತಾಗ್ಯದೆ. ಸೂಕ್ತವಾದ ಸಂದರ್ಭ ಬಂದಾಗ ನಾನು ಹೇಳಬೇಕಾದಂತ ಪರಿಸ್ಥಿತಿ ಬಂದೇ ಬರ್ತದೆ."

"ಅಲ್ಲ ಸಾರ್, ಎಮ್ಮೆಲ್ಸಿ ಸೀಟಿಗೆ ತಲಾ ಒಂದು ಕೋಟಿ ಕೊಡಬೇಕಾಗ್ಯದೆ ಅಂದ್ರೆ ನಿಮ್ಮ ಶಾಸಕರ ಕತೆ ಏನು?"



"ಅದಾಗ್ಲೆ ಹಳೆ ಮ್ಯಾಟ್ರು ಕಂಡ್ರಿ. ಹೊಸದೇನಾರ ಇದ್ರೇಳಿ."

"ಕೆಪಿಎಸ್ಸಿ ಕಳ್ಳರ ಪರ ಹೋದರಲ್ಲಾ ನಿಮ್ಮ ಕತೆ ಏನು?"

"ಕತೆ ಏನೂ ಇಲ್ಲ, ಕೋರ್ಟಿಗೋಗಿ ಗೆಲ್ತೀವಿ. ಆಗ ಈ ಕುಮಾರಸ್ವಾಮಿ ಹೋರಾಟ ಅಂದ್ರೆ ಏನು ಅಂತ, ಸರಕಾರ ಲಘುವಾಗಿ ಪರಿಗಣಿಸಿದ್ರೆ ಏನಾಯ್ತದೆ ಅಂತ ಗೊತ್ತಾಯ್ತದೆ."

"ಈ ಪ್ರಕರಣದಲ್ಲಿ ನಿಮ್ಮ ಕಡೆಯವರು ಎಷ್ಟು ಜನ ಇದ್ರು ಸಾರ್?"

"ನಮ್ಮ ಕಡೆ ಅಂದ್ರೆ?"

"ಅಂದ್ರೆ ನಿಮ್ಮ ಶಿಫಾರಸ್ಸಿನಿಂದ ಪಾಸಾದೋರು ಸಾರ್."

"ಭಾಳ ಜನ ಇದ್ರು ಕಂಡ್ರೀ. 1998ರಲ್ಲಿ ಆಯ್ಕೆಯಾದೋರು, 2011ರಲ್ಲಿ ಆಯ್ಕೆಯಾದೋರು ಯಲ್ಲಾರ್ನು ಲೆಕ್ಕ ಹಾಕಿದ್ರೆ ಒಂದು ಸರಕಾರಿ ಯಂತ್ರದಲ್ಲಿ ನಮ್ಮವರೇ ಇರಂಗಾಗದು. ಈ ಸರಕಾರದ ತೀರ್ಮಾನದಿಂದ ಅಮಾಯಕರಿಗೆ ಅನ್ಯಾಯ ಆಗಿದೆ."

"ದುಡ್ಡು ಕೊಟ್ಟು ಕೆಲಸ ಪಡಿಯಕ್ಕಾಗದೋರು ನಿಜಕ್ಕೂ ಅಮಾಯಕರೆ ಸಾರ್. ಪಾಪ ಎಲ್ಲೆಲ್ಲಿ ಸಾಲ ತಂದಿದ್ರೊ, ಜಮೀನು, ಒಡವೆ ಮಾರಿದ್ರೊ. ಅಂತೂ ಪಾಳಾಗೋದ್ರು ಸಾರ್."

"ಸರಕಾರಕ್ಕೆ ಮಾನವೀಯತೆ ಇರಬೇಕಿತ್ತು ಕಂಡ್ರೀ. ಆಗಿದ್ದಾಗೋಯ್ತು, ಯಾರೂ ಸಾಚಾ ಅಲ್ಲ ಅಂತ ಯೋಚನೆ ಮಾಡತಕ್ಕಂತ ವಿವೇಚನೆನೇ ಕಳಕೊಂಡಿದೆ ಈ ಸರಕಾರ. ಅದ್ಕೆ ನಾನು ನೊಂದಿರತಕ್ಕಂತ ಅಭ್ಯರ್ಥಿಗಳ ಪರ ಹೋರಾಟಕ್ಕೆ ಇಳದಿದ್ದು."

"ಸಾರ್, ಇನ್ನೊಂದು ವಿಷಯ. ದುಡ್ಡು ಕೊಟ್ಟು ಪಾಸಾಗಿ ಕೆಲಸ ಕಳಕಂಡೋರ ಪರ ಹೋರಾಡಿದ್ರೊ? ಅಥವಾ ಚೆನ್ನಾಗಿ ಬರದ್ರು ಅನ್ಯಾಯಕ್ಕೆ ಒಳಗಾದೋರ ಪರ ಹೋರಾಡಿದ್ರೊ ಹೇಳಿ ಸಾರ್?"

"ಒಟ್ಟು ಅನ್ಯಾಯಕ್ಕೆ ಒಳಗಾದೋರ ಪರ ಹೋರಾಡಿದೆ ಕಂಡ್ರಿ."

"ಡಾ. ಮೈತ್ರಿ ಅನ್ನೋರಿಗೂ ಅನ್ಯಾಯವಾಗಿತ್ತಲ್ಲವೆ ಸಾರ್?"

"ಅವ್ರುರಿಗ್ಯಂತ ಅನ್ಯಾಯರೀ? ಅವ್ರಪ್ಪ ರಾಮನಗರದಲ್ಲಿ ಎ.ಸಿ. ಆಗಿದಾನೆ. ಎಷ್ಟು ಕೋಟಿ ಹೊಡದವನೆ ಗೊತ್ತ? ಮೈತ್ರಿ ಅದರಲ್ಲೇ ಜೀವನ ಮಾಡಬಹುದು. ಬಡ ಅಭ್ಯರ್ಥಿಗಳ ಕತೆ ಹೇಳಿ."

"ಆ ಮೈತ್ರಿ ಟೀವಿಲಿ ಕಾಣಿಸಿಕೊಂಡ ಕೂಡ್ಲೆ ನೀವು ನಿರ್ಗಮಿಸಬಾರದಿತ್ತು ಸಾರ್. ನೀವೊಬ್ಬ ಮಾಜಿ ಮುಖ್ಯ ಮಂತ್ರಿ ಸತ್ಯಗಳನ್ನ ಎದುರಿಸಬೇಕು."

"ರೀ ಸತ್ಯನಷ್ಟೇ ಅಲ್ಲ, ಸುಳ್ಳರನ್ನೂ ಎದಿರಸತಕ್ಕಂತ ಶಕ್ತಿ ಅದೆ. ನಮ್ಮ ಬಗ್ಗೆ ಹಗುರವಾಗಿ ಮಾತಾಡೋರ ಜೊತೆ ಏನ್ರಿ ಚರ್ಚೆ?"

"ಅಲ್ಲ ಸಾರ್, ಏನಮ್ಮ ಮೈತ್ರಿ ಚೆನ್ನಾಗಿದ್ದಿಯಾ ಅಂದ್ರೆ ಅದರ ಕತೆನೆ ಬೇರೆ ಆಗದು. ಅಂಥಾ ರಾಧಿಕನ್ನ ಕಟ್ಕಗೊಂಡು ಅನಿತಕ್ಕನ್ನೆ ಸಮಾಧಾನ ಮಾಡಿ ನಿಭಾಯಿಸಿದ ನೀವು ಮೈತ್ರಿಗೆ ಹೆದರಿ ಓಡಿದ್ದು ಸರಿಯಲ್ಲ ಸಾರ್."

"ಓಡಲಿಲ್ಲ ಕಂಡ್ರಿ, ನಿಧಾನಕ್ಕೆ ಹೋದೆ. ಆ ಟೀವಿ ಚಾನಲ್‌ನೋರು ಏನು ಅಂತ ಗೊತ್ತಿತ್ತು. ಅವುರಿಗೆ ಬುದ್ಧಿ ಕಲಿಸಬೇಕು ಅಂದ್ರೆ ಅವುರನ್ನ ಹತ್ರ ಸೇರಸಬಾರ್ದು ಅಂತ ತೀರ್ಮಾನ ಮಾಡಿದ್ದಿ."

"ಸಾರ್, ಒಂದಿಷ್ಟು ಜನ ಒಳ್ಳೆ ಸಲಹೆಗಾರರನ್ನ ಇಟ್ಕೊಳ್ಳಿ ನೀವು. ಯಾಕೋ ನಿಮ್ಮ ಸ್ವಂತ ತೀರ್ಮಾನಗಳು ಒಂದೂ ಸರಿಯಿಲ್ಲ."


"ನನ್ನ ಸ್ವಂತ ತೀರ್ಮಾನಗಳು ಯಾವತ್ತಿಗೂ ಸರಿ ಕಂಡ್ರಿ. ಆದ್ರೆ ಹಿರಿಯೋರ ಮಾತ ಕೇಳಿ ಅವರ ಅಭಿಪ್ರಾಯಕ್ಕೆ ಬೆಲೆ ಕೊಟ್ಟು ಇವತ್ತಿನ ದಿನ ನಾವು ಭಾರಿ ಪರಿತಪ್ತ ಸ್ತಾಯಿದ್ದಿವಿ."

"ಅದೇ ಸಾರ್ ನಾನೇಳಿದ್ದು, ನಿಮ್ಮದೇ ಪಾರ್ಟಿಯ ನಾಣಯ್ಯ, ಹೊರಟ್ಟಿ, ದತ್ತ ಇಂತವುರ ಮಾತ ಕೇಳಿದ್ರೆ ಹಿರಿಯೋರ ಮಾತ ತಿರಸ್ಕರಿಸಬಹುದು. ಅದು ಬುಟ್ಟು ರೆಡ್ಡಿ, ರಾಮುಲು ಜೊತೆ ಓಡಾಡಿದವರು ಮತ್ತೆ ಜೈಲಲ್ಲಿದ್ದ ರೆಡ್ಡಿನ ಹೋಗಿ ಭೇಟಿಯಾಗಿ ಬಂದೋರ ಜೊತೆ ನೀವು ಗುರುತಿಸಿಕೊಂಡ್ರೆ, ಜೆಡಿಎಸ್ ರಾಮುಲು ಪಾರ್ಟಿ ತರನೇ ಆಯ್ತದೆ ಸಾರ್."

"ನೀವ್ಯಾಕೆ ನಮ್ಮ ಸಲಹೆಗಾರರಾಗಿ ಬರಬಾರ್ದು?"

"ಥೂತ್ತೇರಿ!!"

ಸ್ಪಷ್ಟೀಕರಣ



ಕಳೆದ ಸಂಚಿಕೆಯ ಕೊಪ್ಪಳದ ವರದಿಯಲ್ಲಿ ಪ್ರಕಟವಾಗಿರುವ ಬಸವರಾಜ್ ಫೋಟೋ ಕೆಳಗೆ 'ಆರೋಪಿ ರಾಮಣ್ಣ' ಎಂದು ಮುದ್ರಿತವಾಗಿತ್ತು. ಆದರೆ ಇವರು ಆರೋಪಿ ರಾಮಣ್ಣ ಆಗಿರದೇ (ಹನುಮಮ್ಮಳ ಕುಟುಂಬವನ್ನು ಬೆದರಿಸಿ ಹಣ ಪಡೆದ) ಕನಕಗಿರಿ ಪೊಲೀಸ್ ಠಾಣೆಯ ಮುಖ್ಯ ಪೇದೆ ಆಗಿದ್ದಾರೆ. ಕಣ್ತಪ್ಪಿನಿಂದ ಆಗಿರುವ ಈ ಪ್ರಮಾದಕ್ಕೆ ವಿಷಾದಿಸುತ್ತೇವೆ.

-ಸಂ.

'ಹಿಂದೂತ್ವ' ನಮ್ಮ ರಾಷ್ಟ್ರೀಯ ಅನನ್ಯತೆಯೇ?

1980ರ ದಶಕದಿಂದ ದೇಶದಲ್ಲಿ ಗುರುತು ಅಥವಾ ಸ್ವರೂಪ ಆಧಾರಿತ ರಾಜಕಾರಣ ಮುಂಚೂಣಿಗೆ ಬರಲಾ ರಂಭಿಸಿತು. ಶಾಹ್ ಬಾನೊ ಪ್ರಕರಣ, ರಾಮ ಮಂದಿರ ಬಿಕ್ಕಟ್ಟು ಮತ್ತು ರಥಯಾತ್ರೆಗಳಂತವು ಗುರುತು ಸಂಬಂಧಿತ ವಿಷಯಗಳನ್ನು ಮುಂಚೂಣಿಗೆ ತಂದವು. ಈ ಬಗೆಯ ರಾಜಕಾರಣದ ಪ್ರಪ್ರಥಮ ಬಹುದೊಡ್ಡ ಆಘಾತವೆಂದರೆ ಬಾಬ್ರಿ ಮಸೀದಿಯ ಧ್ವಂಸ! ಅದರ ಸುತ್ತಲೇ ನಾವೆಲ್ಲ ಹಿಂದೂ ರಾಷ್ಟ್ರಿಗರು ಎಂಬ ಕಲ್ಪನೆಯನ್ನು ಬಲು ಗಂಭೀರ ರೀತಿಯಲ್ಲಿ ಪ್ರವರ್ಧಮಾನಕ್ಕೆ ತರಲಾಯಿತು. ಜೊತೆಗೆ 'ನಾವೆಲ್ಲರೂ ಹಿಂದೂಗಳು' ಎಂಬ ಮತ್ತೊಂದು ಮಿಥ್ಯಕ್ಕೂ ಅಸ್ತಿತ್ವ ನೀಡಲಾಯಿತು. ಮೋದಿ-ಬಿಜೆಪಿಯು ಸಂಸತ್ತಿನಲ್ಲಿ ಸರಳ ಬಹುಮತಗೊಳಿಸಿದ ನಂತರದಲ್ಲಿ ಈ ಸೂತ್ರವನ್ನು ಬಹಳ ದೃಢವಾಗಿ ಪ್ರತಿಪಾದಿಸಲಾಗುತ್ತಿದೆ. 1990ರ ಆಸುಪಾಸಿನಲ್ಲಿ, ಅಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಮುರಳಿ ಮನೋಹರ ಜೋಶಿ 'ನಾವೆಲ್ಲಾ ಹಿಂದೂಗಳು, ಮುಸ್ಲಿಮರು ಅಹಮದೀಯ ಹಿಂದೂಗಳು, ಕ್ರಿಶ್ಚಿಯನ್ನರು ಕ್ರಿಶ್ಚಿ ಹಿಂದೂಗಳು ಮತ್ತು ಅದೇರೀತಿ ಜೈನರು-ಸಿಖ್ಖರು- ಬೌದ್ಧರು ಸಹಾ ಹಿಂದೂಗಳೇ' ಎಂಬ ಹೇಳಿಕೆಯನ್ನು ಹರಿಬಿಟ್ಟಿದ್ದ. ಸಿಖ್ಖರು, ಜೈನರು ಮತ್ತು ಬೌದ್ಧರು ಹಿಂದೂ ಪಂಥಗಳೇ ಎನ್ನುವುದು ಆರ್‌ಎಸ್‌ಎಸ್ ಮಹಾಮರುಷರ ಅಂಬೋಣ. ಒಮ್ಮೆ, ಆರ್‌ಎಸ್‌ಎಸ್‌ನ ಮುಂಚಿನ ಸರಸಂಘಚಾಲಕ, ಕೆ.ಸುದರ್ಶನ್ 'ನಾವು ಭಾವಿಸಿರುವಂತೆ ಸಿಖ್ ಒಂದು ಧರ್ಮವಲ್ಲ, ಬದಲಾಗಿ ಹಿಂದೂ ಧರ್ಮದ ಒಂದು ಪಂಥ' ಎಂದು ನೇರವಾಗಿ ಹೇಳಿಕೆ ನೀಡಿದ್ದ. ಆಗ ಪಂಜಾಬ್‌ನಲ್ಲಿ ಆತನ ಹೇಳಿಕೆ ವಿರುದ್ಧ ಬೃಹತ್ ಆಕ್ರೋಶ ವ್ಯಕ್ತವಾಗಿತ್ತು, ಪ್ರತಿಭಟನೆಗಳೂ ನಡೆದಿದ್ದವು.

ಮೋದಿಯ ಮುಂಚೂಣಿಯಲ್ಲಿ, ಎಲ್ಲಾ ಭಾರತೀಯರು ತಮ್ಮನ್ನು ತಾವು ಹಿಂದೂಗಳೆಂದು ಗುರುತಿಸಿಕೊಳ್ಳಬೇಕೆಂಬ ಪ್ರತಿಪಾದನೆಯನ್ನು ಬೇರೂರಿಸಲು ಆರ್‌ಎಸ್‌ಎಸ್ ತನ್ನೆಲ್ಲಾ ತಂತ್ರಗಳನ್ನು ಹೇರುತ್ತಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ, 'ಬಗ್ಗಲು ಹೇಳಿದರೆ ತೆವಳಿಯೇ ಬಿಡು' ಎನ್ನುವ ಮಾತಿನಂತೆ ಇತ್ತೀಚಿಗೆ ಗೋವಾದ ಉಪಮುಖ್ಯಮಂತ್ರಿ, ಬಿಜೆಪಿಯ ಫ್ರಾನ್ಸಿಸ್ ಡಿ'ಸೋಜಾ 'ಕ್ರಿಶ್ಚಿಯನ್ನರೆಲ್ಲ ಕ್ರಿಶ್ಚಿಯನ್ ಹಿಂದೂಗಳು' ಎಂಬ ಹೇಳಿಕೆ ನೀಡಿದ್ದು, ಆರ್‌ಎಸ್‌ಎಸ್‌ನ ಅಧಿಪತಿ ಮೋಹನ್ ಭಾಗವತ್ ಒಂದು ಹೆಜ್ಜೆ ಮುಂದೆಹೋಗಿ 'ಇಡೀ ಪ್ರಪಂಚವೇ ಭಾರತೀಯರನ್ನು ಹಿಂದೂಗಳೆಂದು ಗುರುತಿಸುತ್ತದೆ, ಆದ್ದರಿಂದ ಭಾರತ ಒಂದು ಹಿಂದೂರಾಷ್ಟ್ರ. ಇದು ತುಂಬಾ ಸರಳವಾದ ಸಂಗತಿ. ಇಂಗ್ಲೆಂಡ್ ವಾಸಿಗರನ್ನು ಇಂಗ್ಲಿಷಿಗರು ಎನ್ನಬಹುದಾದರೆ, ಜರ್ಮನಿ ವಾಸಿಗರನ್ನು ಜರ್ಮನ್ನರು ಎನ್ನಬಹುದಾದರೆ, ಯುಎಸ್ಎ ವಾಸಿಗಳನ್ನು ಅಮೆರಿಕನ್ನರು ಎನ್ನಬಹುದಾದರೆ; ಹಿಂದೂಸ್ಥಾನದಲ್ಲಿ ವಾಸಿಸುವ ಪ್ರತಿಯೊಬ್ಬರೂ ಹಿಂದೂಗಳೇ' ಎಂಬುದಾಗಿ ಹೇಳಿದ್ದ. ಪರಸ್ಪರ ವಿಭಿನ್ನವಾದ ಹಿಂದೂ ಮತ್ತು ಹಿಂದೂತ್ವಗಳನ್ನು ಬೆರೆಸಿದ ಆತ 'ಎಲ್ಲಾ ಭಾರತೀಯರ ಸಾಂಸ್ಕೃತಿಕ ಅನನ್ಯತೆ ಎಂದರೆ ಹಿಂದೂತ್ವವೇ ಆಗಿದೆ ಮತ್ತು ದೇಶದ ಪ್ರಸ್ತುತ ನಾಗರಿಕರು ಇಂತಹ ಮಹಾನ್ ಸಂಸತಿಯ ವಂಶಜರು' ಎಂಬುದಾಗಿಯೂ ವ್ಯಾಖ್ಯಾನಿಸಿದ್ದ. ಗೋವಾದ ಸಹಕಾರ ಸಚಿವ ದೀಪಕ್ ಧಾವಲೀಕರ್ (ಬಿಜೆಪಿ) ಸದನದಲ್ಲೇ ಹೇಳಿದ 'ಪ್ರಧಾನಮಂತ್ರಿ ಮೋದಿಯ ನೇತೃತ್ವದಲ್ಲಿ ಭಾರತವು ಹಿಂದೂ ರಾಷ್ಟ್ರವಾಗುವ ಹಾದಿಯಲ್ಲಿ ಮುನ್ನಡೆಯುತ್ತಿದೆ' ಎನ್ನುವ ಮಾತು ಈ ಎಲ್ಲಾ ರಾಜಕೀಯ ಅಜೆಂಡಾಗಳನ್ನು ಒಟ್ಟಿಗೇ ಸಮರ್ಥಿಸಿಕೊಳ್ಳುವಂತಿದೆ.


ಹಿಂದೂ, ಹಿಂದೂತ್ವ, ಹಿಂದೂರಾಷ್ಟ್ರಗಳೆಂಬ ಈ ಎಲ್ಲಾ ಅಸಂಬದ್ಧ ಪ್ರಲಾಪಗಳು ಉದ್ದೇಶಪೂರ್ವಕವಾದವು ಮತ್ತು ರಾಜಕೀಯ ಅಜೆಂಡಾದ ಒಂದು ಭಾಗವೂ ಹೌದು. ಈ ಮೂರು ಪದಗಳನ್ನು ಐತಿಹಾಸಿಕ ದೃಷ್ಟಿಕೋನದಿಂದ ನೋಡಬೇಕಿದೆ. ಆದರೆ ಹಿಂದೂ ಎಂದು ಪ್ರತಿಪಾದಿಸಿಕೊಳ್ಳುವ ಅಂಶವನ್ನು ಮಾತ್ರ ಇವತ್ತಿನ ಸಂದರ್ಭದಲ್ಲಿಟ್ಟು ತೂಗಬೇಕಿದೆ. ಹಿಂದೂ ಎಂಬ ಪದದ ವಿಕಾಸದ ಹಿಂದೆ ಸುದೀರ್ಘ ಇತಿಹಾಸವಿದೆ. ಕಾಲಕ್ರಮೇಣ ಅದರ ಬಳಕೆಯಲ್ಲಿ ಮಾರ್ಪಾಟಾಯಿತು. ಅದು ರಾಜಕೀಯ ಸ್ವಾರ್ಥ ಸಾಧನೆಗೋಸ್ಕರ ಬಳಸಲ್ಪಡುತ್ತಿದೆ; ರಾಜಕೀಯ ಹೊಂದಾಣಿಕೆಯೇ ಹಿಂದೂತ್ವ ಮತ್ತು ಅಂತಹ ಹಿಂದೂತ್ವದ ರಾಜಕೀಯ ಉದ್ದೇಶವೇ ಹಿಂದೂರಾಷ್ಟ್ರ. ಈ ಎಲ್ಲಾ ಪದಸಮುಚ್ಚಯಗಳನ್ನು ವ್ಯವಸ್ಥಿತವಾಗಿ ಹೊಂದಿಸಿಕೊಟ್ಟದ್ದು ಸಂಘ ಪರಿವಾರ, ಅದೂ ತಾನು ಭ್ರಮಿಸಿರುವ 'ರಾಷ್ಟ್ರೀಯತೆ'ಯ ಭಾಗವಾಗಿ.


ಕುತೂಹಲಕಾರಿ ಅಂಶವೆಂದರೆ, ಎಂಟನೇ ಶತಮಾನ ದವರೆಗೂ ಹಿಂದೂ ಶಾಸನಗಳೆಂದು ಕರೆಯಲಾಗುವ ಯಾವ ಶಾಸನದಲ್ಲೂ 'ಹಿಂದೂ' ಎಂಬ ಪದದ ಉಲ್ಲೇಖವೇ ಕಾಣಸಿಗುವುದಿಲ್ಲ, ಅರಬ್ಬರು ಮತ್ತು ಮಧ್ಯಪ್ರಾಚ್ಯ ಮುಸ್ಲಿಮರು ಇತ್ತ ಕಡೆ ಧಾವಿಸಿದ ಸಂದರ್ಭದಲ್ಲಿ ಇದು ಅಸ್ತಿತ್ವಕ್ಕೆ ಬಂದಿತು. ಅವರು ಸಿಂಧೂ ನದಿಯ ಪೂರ್ವಭಾಗಕ್ಕಿರುವ ಭೂಭಾಗವನ್ನು ಹಿಂದೂ ಎಂದು ಕರೆದರು. ಆ ರೀತಿಯಲ್ಲಿ 'ಹಿಂದೂ' ಎಂಬ ಪದ ಭೌಗೋಳಿಕ ಪರ್ಗವಾಗಿ ಚಲಾವಣೆಗೆ ಬಂದಿತು. ಹಾಗಾಗಿಯೇ, ಇವತ್ತಿಗೂ ವಿಶ್ವದ ಕೆಲ ಭಾಗಗಳಲ್ಲಿ, ಮುಖ್ಯವಾಗಿ ಪಶ್ಚಿಮ ಏಷ್ಯಾದಲ್ಲಿ, ಭಾರತವನ್ನು ಹಿಂದೂಸ್ಥಾನ ಎಂತಲೇ ಉಲ್ಲೇಖಿಸಲಾಗುತ್ತಿದೆ. ಇಡೀ ಪ್ರಪಂಚವೇ ನಮ್ಮನ್ನು ಹಿಂದೂಸ್ಥಾನ ಎಂದು ಗುರುತಿಸುತ್ತದೆ ಎಂದೇಳುವ ಮೂಲಕ ಮಿಸ್ಟರ್ ಭಾಗವತ್ ದೊಡ್ಡ ಸುಳ್ಳೊಂದನ್ನು ಹೇಳಿದ್ದಾರೆ. ಅಸಲಿಗೆ, ಹಿಂದೂಸ್ಥಾನ ಎಂಬ ಪದ ಪ್ರಚಲಿತದಲ್ಲಿರೋದು ಸೌದಿ ಅರೇಬಿಯಾ ಮತ್ತು ಪಶ್ಚಿಮ ಏಷ್ಯಾದಲ್ಲಿ ಮಾತ್ರ. ಇವತ್ತಿಗೂ ಸೌದಿಯಲ್ಲಿ ಹಜ್ ಯಾತ್ರೆಗೆ ಹೊರಡುವ ಮುಸ್ಲಿಮರನ್ನು 'ಹಿಂದಿ' ಎಂದು ಕರೆಯಲಾಗುತ್ತದೆ ಮತ್ತು ಸೌದಿ ಅರೇಬಿಯಾದಲ್ಲಿ ಅಂಕಗಣಿತ ಕಲಿಯುವ ವಿದ್ಯಾರ್ಥಿಗಳನ್ನು ಅವರ ಭಾಷೆಯಲ್ಲಿ 'ಹಿಂಡ್ಸಾ' (ಹಿಂದ್ ನಿಂದ ಬಂದಂತಹುದು) ಎಂದು ಕರೆಯುತ್ತಾರೆ.

ಬಹಳ ನಂತರದಲ್ಲಿ, ಈ ಭಾಗದಲ್ಲಿನ ಧಾರ್ಮಿಕ ಸಂಪ್ರದಾಯಗಳನ್ನು 'ಹಿಂದೂ ಧರ್ಮ' ಎಂದು ಕರೆಯಲು ಮೊದಲ್ಗೊಂಡಿತು. ಇಲ್ಲಿ ಹಿಂದೂ ಸಂಸ್ಕೃತಿ ವ್ಯಾಪಕವಾಗಿ ಬೇರುಬಿಟ್ಟಿತ್ತು ಎಂಬ ಕಲ್ಪನೆ, ಒಂದು ಶುದ್ಧ ಸೈದ್ಧಾಂತಿಕ ಸೃಷ್ಟಿ ಅಷ್ಟೆ. ಸಿಂಧೂ ನಾಗರಿಕತೆ ಬೇರೆ ನಾಗರಿಕತೆಗಳಿಗಿಂತ ಭಿನ್ನವಾದ, ತನ್ನದೇ ಆದ ಲಕ್ಷಣಗಳನ್ನು ಹೊಂದಿತ್ತು, ಆರ್ಯನ್ನರು ಮೊದಮೊದಲು ಗ್ರಾಮೀಣ ಅಲೆಮಾರಿ ಸಮಾಜವಾಗಿದ್ದು, ನಂತರವೇ ವ್ಯವಸ್ಥಿತ ದುಡಿಮೆ ಮತ್ತು ಸಾಮ್ರಾಜ್ಯ ರಚನೆಯತ್ತಲೂ ಕೈಚಾಚಿದ್ದು. ಮೂಲ ಆದಿವಾಸಿಗಳು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿದ್ದರು. ಆದ್ದರಿಂದ ಏಕರೂಪ ಸಂಸ್ಕೃತಿಯ ಅಸ್ತಿತ್ವವೇ ಒಂದು ಬಹುದೊಡ್ಡ ಮಿಥ್ಯ. ವಲಸೆ ಮತ್ತು ಚಲನಶೀಲತೆಯ ಪರಿಣಾಮವಾಗಿ ಉಂಟಾಗುವ ಪರಸ್ಪರ ಸಂವಹನದ ಮೂಲಕ ಒಂದು ಸಂಸ್ಕೃತಿ ವಿಕಾಸ ಹೊಂದುತ್ತದೆ ಎಂಬುದು ನಮಗೆಲ್ಲಾ ತಿಳಿದಂತಹ ಸಂಗತಿ.

19ನೇ ಶತಮಾನದ ಅಂತ್ಯದಲ್ಲಿ ಹಿಂದೂತ್ವ ಎಂಬ ಪದ, ಆಗತಾನೇ







ಹುಟ್ಟಿಕೊಳ್ಳುತ್ತಿದ್ದ ರಾಷ್ಟ್ರೀಯ ಚಳವಳಿಗೆ ಪ್ರತಿಯಾಗಿ ರೂಪುಗೊಂಡ ಕೋಮುವಾದಿ ರಾಜಕಾರಣದೊಂದಿಗೆ ಪ್ರಸ್ತುತತೆಗೆ ಬಂತು. 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದಾಗ ಹಿಂದೂ ಊಳಿಗಮಾನ್ಯ ಮತ್ತು ಮುಸ್ಲಿಂ ಊಳಿಗಮಾನ್ಯ ಎರಡೂ ವರ್ಗಗಳು ಅದನ್ನು ವಿರೋಧಿಸಿದ್ದವು ಮತ್ತು ತಮ್ಮದೇ ಆದ ಕೋಮುವಾದಿ ಸಿದ್ಧಾಂತಕ್ಕೆ ಅಂಟಿಕೂತವು. ಇಂತಹ ಹಿಂದೂ ಕೋಮುವಾದಿ ವಾಹಿನಿಯಿಂದ ಬಂದ ಗುಂಪನ್ನು ಹಿಂದೂತ್ವ ಎಂದು ಅಸ್ಪಷ್ಟವಾಗಿ ಕರೆಯಲಾಯಿತು. ಇದನ್ನು ಮುಂಚೂಣಿಗೆ ತಂದದ್ದು 1924ರಲ್ಲಿ, ಸಾವರ್ಕರ್. ಸಾವರ್ಕರ್, ಈ ಭೂಮಿಯನ್ನು ಯಾರು ತಮ್ಮ ಪವಿತ್ರಭೂಮಿ ಮತ್ತು ಮಾತೃಭೂಮಿ ಎಂದು ಒಪ್ಪಿಕೊಳ್ಳುತ್ತಾರೊ ಅವರು ಮಾತ್ರ ಹಿಂದೂಗಳು ಎಂದು ವ್ಯಾಖ್ಯಾನಿಸಿದ್ದುಂಟು. ಆ ವ್ಯಾಖ್ಯಾನೆಯಲ್ಲಿ ಕ್ರಿಶ್ಚಿಯನ್ನರನ್ನು ಮತ್ತು ಮುಸ್ಲಿಮರನ್ನು ಹೊರಗಿಡಲಾಗಿದ್ದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ಆತನ ಪ್ರಕಾರ ಹಿಂದೂತ್ವ ಎಂದರೆ, ಪರಿಪೂರ್ಣ ಹಿಂದೂತ್ವ, ಸಾಮಾನ್ಯ ಜನಾಂಗ (ಆರ್ಯನ್ನರು), ಸಂಸ್ಕೃತಿ (ಬ್ರಾಹ್ಮಣ) ಮತ್ತು ಸಿಂಧೂ ನದಿಯಿಂದ ದಕ್ಷಿಣದ ಸಮುದ್ರಗಳವರೆಗೆ ವಿಸ್ತರಿಸಿರುವ ಭೂಭಾಗ. ಹಿಂದೂರಾಷ್ಟ್ರ ನಿರ್ಮಾಣದ ಕಲ್ಪನೆಯನ್ನು ಹಿಂದೂತ್ವ ಸಿದ್ಧಾಂತದ ಗುರಿಯಾಗಿಸಿದ್ದೂ ಆತನೇ. 1925ರಿಂದ ಆರ್‌ಎಸ್‌ಎಸ್ ಈ ಹಿಂದೂರಾಷ್ಟ್ರ ಗುರಿಯನ್ನು ಕೈಗೆತ್ತಿಕೊಂಡಿತು. ಹಿಂದೂರಾಷ್ಟ್ರ ನಿರ್ಮಾಣದ ಕಲ್ಪನೆಯೇ, ಜಾತ್ಯತೀತ ಪ್ರಜಾತಾಂತ್ರಿಕ ಭಾರತ ನಿರ್ಮಾಣದ ಗುರಿ ಹೊಂದಿದ್ದ ಭಾರತೀಯ ಸ್ವಾತಂತ್ರ್ಯ ಚಳವಳಿಯ ಗುರಿಗೆ ತದ್ವಿರುದ್ಧವಾಗಿತ್ತು.

ಇಲ್ಲಿ ವಾಸಿಸುವ ಎಲ್ಲಾ ಜನರಿಗೆ ಹಿಂದೂತ್ವ ಸಾಮಾನ್ಯ ಜೀವನಶೈ... ಆಗಿರುವುದರಿಂದ, ನಾವೆಲ್ಲರೂ ನಮ್ಮನ್ನು ನಾವು ಹಿಂದೂಗಳು ಎಂ... ಕರೆದುಕೊಳ್ಳಬೇಕೆಂಬ ಪ್ರತಿಪಾದನೆಗಳೂ ಇವೆ. ಪಂಚಿಸುವ ಬಲು ಜಾಣ್ಮೆ... ನಡೆ ಇದು. ಇದೇರೀತಿ ಹಲವಾರು ಮುಸ್ಲಿಂ ಕೋಮುವಾದಿಗಳೂ 'ಇಸ... ನಮ್ಮ ಜೀವನಶೈಲಿ' ಎಂದು ಪ್ರತಿಪಾದಿಸಿದ್ದರು. ಧರ್ಮ ಮಾತ್ರವೇ 'ಜೀವನಶೈ... ಅಲ್ಲ; ಜೀವನ ಶೈಲಿ ಎನ್ನುವುದು ವಿಶಾಲ ವ್ಯಾಪ್ತಿ ಹೊಂದಿದ್ದು, ಸಾಮ... ಸಾಧ್ಯವೇ ಇರದ ಭಾಷೆ, ಸ್ಥಳೀಯ ಪ್ರಾದೇಶಿಕ ಸಾಂಸ್ಕೃತಿಕ ಸೂಕ್ಷ್ಮ ವ್ಯತ್ಯಯಗಳ... ಅದು ಒಳಗೊಂಡಿರುತ್ತದೆ. ಧರ್ಮ ಎನ್ನುವುದು ಏಕಾಭಿಪ್ರಾಯ... ಅಖಂಡತೆಯಲ್ಲ; ಜೀವನಶೈಲಿಯ ಒಂದು ಭಾಗವೇ ಹೊರತು ಮತ್ತೇನ... ಅಲ್ಲ. ರಾಜಕೀಯವಾಗಿ ಅಸ್ತಿತ್ವಕ್ಕೆ ಬಂದ, ನಮ್ಮೆಲ್ಲರನ್ನೊಳಗೊ... ಅನನ್ಯತೆಯನ್ನು ಏನೆಂದು ಗುರುತಿಸಬೇಕೆನ್ನುವುದು ಸಾಂವಿಧಾ... ಸದನಗಳಲ್ಲಿ ಗಹನವಾಗಿ ಚರ್ಚಿಸಲ್ಪಟ್ಟ ವಿಷಯವೂ ಆಗಿತ್ತು ಮ... ನಿರ್ಣಯಾತ್ಮಕವಾಗಿ ಈ ದೇಶವನ್ನು ಧಾರ್ಮಿಕ ತಟಸ್ಥ ಪದವ... 'ಇಂಡಿಯಾ, ಅಂದರೆ ಭಾರತ' ಎಂದು ಕರೆಯಲು ತೀರ್ಮಾನಿಸಲಾಗಿ... ಇವತ್ತು ಹಿಂದೂ ಒಂದು ಪ್ರಾದೇಶಿಕ- 'ರಾಷ್ಟ್ರೀಯತೆ' ಅನನ್ಯತೆಯ... ಉಳಿದಿಲ್ಲ; ಆಮೂಲಾಗ್ರವಾಗಿ ಧಾರ್ಮಿಕ ಅನನ್ಯತೆಯಾಗಿ ಬದಲಾಗಿ... ಎಲ್ಲರನ್ನೂ ಹಿಂದೂ ಎಂದು ಕರೆಯುವುದರ ಹಿಂದಿರುವ ಸೂ... ತಂತ್ರವೇನೆಂದರೆ ಮೊದಮೊದಲು ಭೌಗೋಳಿಕ ಅನನ್ಯತೆ, ಸಾಮ... ಪೂರ್ವಜರ ಬಗ್ಗೆ ಮಾತನಾಡುತ್ತಾ ನಂತರ, ನಾವೆಲ್ಲರ... ಹಿಂದೂಗಳಾಗಿರುವುದರಿಂದ ಹಿಂದೂ ಶಾಸನಗಳು, ಭಗವದ್ಗಿ... ಮನುಸ್ಮೃತಿಗಳು ನಮ್ಮೆಲ್ಲರ ರಾಷ್ಟ್ರೀಯ ಹೊತ್ತಿಗೆಗಳಾಗಬೇಕು, ಹ... ನಮ್ಮ ರಾಷ್ಟ್ರೀಯ ಪ್ರಾಣಿಯಾಗಬೇಕು; ನಾವೆಲ್ಲರೂ ರಾಮನ... ಪೂಜಿಸಬೇಕು ಇತ್ಯಾದಿತ್ಯಾದಿಗಳನ್ನು ಅನಿವಾರ್ಯವಾಗಿಸುವುದಾಗಿ...


ಇದೇನು ನಿರುಪದ್ರವಿ ಹಾದಿಯಲ್ಲ, ಆರಂಭದಲ್ಲಿ ನಾ... ಹಿಂದೂಗಳು, ಆದ್ದರಿಂದ ನಾವು ಹಿಂದೂರಾಷ್ಟ್ರಿಕರು ಮತ್ತು ಆನಂ... ಹಿಂದೂ ಪವಿತ್ರ ಶ್ರೀಗಳಿಂದ ಅಥವಾ ಸ್ವಯಂಘೋಷಿತ ಹಿಂದೂ... ರಕ್ಷಕರಿಂದ ಬರುವ ಆಣತಿಗಳನ್ನು ಪಾಲಿಸಬೇಕಾಗುತ್ತದೆ. ಹಿಂದ... ಒಂದು ಧಾರ್ಮಿಕ ಅನನ್ಯತೆ ಮತ್ತು ಇಂಡಿಯಾ ಎಂಬುದೇ ರಾಷ್ಟ್ರೀ... ಅನನ್ಯತೆ ಎಂಬುದನ್ನು ನಮ್ಮ ಸಂವಿಧಾನ ಸ್ಪಷ್ಟವಾಗಿ ಉಲ್ಲೇಖಿಸುತ್ತ... ಸ್ವಾತಂತ್ರ್ಯ ಚಳವಳಿಯಲ್ಲಿ ಕಿಂಚಿತ್ತೂ ಪಾತ್ರ ನಿರ್ವಹಿಸದ ಅಥವಾ ಭಾ... ಸಂವಿಧಾನದ ಮೇಲೆ ನಂಬಿಕೆಯನ್ನೂ ಹೊಂದಿರದ ಆರ್‌ಎಸ್‌... ಸ್ಪಷ್ಟವಾಗಿ, ನಮ್ಮ ಸಂವಿಧಾನದ ಆಶೋತ್ತರವಾದ ಭಾರತೀಯ ಅನನ್ಯ... ವಿರುದ್ಧವಾಗಿ ಹಿಂದೂ ಅನನ್ಯತೆಯನ್ನು ಹೇರಲು ಬಯಸುತ್ತಿದೆ.

ಆರ್‌ಎಸ್‌ಎಸ್ ತರಬೇತಿ ಶಿಬಿರವೊಂದರಲ್ಲಿ ನಡೆದ ಈ ಕೆಳ... ಚರ್ಚೆಯು ಮುಂದಿನ ದಿನಗಳಲ್ಲಿ ಏನಾಗಲಿದೆ ಎಂಬುದನ್ನು ಸ್ಪಷ್ಟವ... ತಿಳಿಸಿಕೊಡುತ್ತದೆ ಮತ್ತು ಸುದೀರ್ಘ ಕಾಲದಲ್ಲಿ ಆರ್‌ಎಸ್‌ಎಸ್ ಅಜೆಂಡಾ... ಬಗ್ಗೆ ಸುಳಿವನ್ನೂ ನೀಡುತ್ತದೆ. ಒಂದೆರಡು ದಶಮಾನಗಳ ಹಿಂ... ಆರ್‌ಎಸ್‌ಎಸ್ ಕಾರ್ಯಕರ್ತ ಜೋಶಿಯ ಹೇಳಿಕೆಯನ್ನು ಗಮನಿಸೋ... "ಪ್ರಶ್ನೋತ್ತರ ವೇಳೆಯಲ್ಲಿ ಒಬ್ಬ ಸ್ವಯಂಸೇವಕ, ದಕ್ಷಿಣ ಭಾರ... ಸಂಘ ಪರಿವಾರ ಕಾರ್ಯಕರ್ತರಿಗೆಲ್ಲಾ ಮುಖ್ಯಸ್ಥನಾಗಿದ್ದ ಯಾದವರ... ಜೋಶಿಯನ್ನು ಕೇಳುತ್ತಾನೆ-'ನಾವು ಹೇಳ್ತಿವಿ ಆರ್.ಎಸ್.ಎಸ್ ಒ... ಹಿಂದೂ ಸಂಘಟನೆ ಎಂದು. ಅಲ್ಲದೆ ನಾವೆಲ್ಲ ಹಿಂದೂರಾಷ್ಟ್ರಿಕ... ಭಾರತ ಹಿಂದೂಗಳಿಗೇ ಸೇರಿದ್ದು ಅಂತಲೂ ಹೇಳ್ತೀವಿ. ಅ... ಬಾಯಿಯಲ್ಲಿ, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಅವರ ನಂಬಿಕೆಯ... ಅನುಸರಿಸುವುದನ್ನು ನಾವು ಸ್ವಾಗತಿಸುತ್ತೇವೆ ಮತ್ತು ಈ ದೇಶವ... ಪ್ರೀತಿಸುವವರೆಗೂ ಅವರು ಇಲ್ಲಿಯೇ ವಾಸಿಸುವುದನ್ನೂ ಸ್ವಾಗತಿಸು... ಎಂದು ಕೂಡಾ ಉಚ್ಚರಿಸುತ್ತೇವೆ. ನಾವ್ಯಾಕೆ ಅವರಿಗೆ ಈ ರಿಯಾಯಿತಿಯ... ಕೊಡಬೇಕು? ನಾವು ಹಿಂದೂ ರಾಷ್ಟ್ರಿಕರು ಎಂದಾದಮೇಲೆ ಅವ... ಇಲ್ಲಿ ಜಾಗವಿಲ್ಲ ಎಂದೇಕೆ ಅವರಿಗೆ ಖಡಾಖಂಡಿತವಾಗಿ ಹೇಳುತ್ತಿ... ಜೋಶಿ ಉತ್ತರಿಸುತ್ತಾನೆ 'ನೀವು ಭಾರತದಲ್ಲೇ ನೆಲೆಸಬೇಕೆಂದರೆ ಹಿಂದೂ... ಮತಾಂತರಗೊಳ್ಳಿ ಎಂದು ಮುಸ್ಲಿಮರಿಗೆ ಮತ್ತು ಕ್ರಿಶ್ಚಿಯನ್ನರಿಗೆ ಸ್ಪಷ್ಟ... ಹೇಳುವಷ್ಟು ನಾವಿನ್ನೂ (ಆರ್‌ಎಸ್‌ಎಸ್ ಮತ್ತು ಹಿಂದೂ ಸಮ... ಸದೃಢರಾಗಿಲ್ಲ, ಆದರೆ ಹಿಂದೂ ಸಮಾಜ ಮತ್ತು ಆರ್‌ಎಸ್... ಸಾಕಷ್ಟು ಸದೃಢವಾದಾಗ- ನೀವು ಈ ದೇಶವನ್ನು ಪ್ರೀತಿಸುತ್ತಿದ್ದರೆ, ಇಲ್ಲಿ... ಇರಬೇಕು ಎಂದುಕೊಂಡಿದ್ದರೆ, ಹಲವು ತಲೆಮಾರುಗಳ ಮೊದಲು ನಾ... ಕೂಡಾ ಹಿಂದೂಗಳಾಗಿದ್ದವು ಎಂಬುದನ್ನು ಒಪ್ಪಿಕೊಳ್ಳಿ ಮತ್ತು ಹಿಂ... ಧರ್ಮಕ್ಕೆ ವಾಪಾಸಾಗಿ ಎಂದು ಅವರಿಗೆ ಖಂಡಿತ ಹೇಳುತ್ತೇವೆ." (htt... /www.caravanmagazine.in/reportage/r... 30hsthash.GmBGCZLQ.dpuf)

ಕಳೆದ ಒಂಬತ್ತು ದಶಕಗಳಿಂದ ಸಂಘ ಪರಿವಾರ ಬಯಸುತ್ತಿದ್ದೇನೆ... ಕೇಂದ್ರದಲ್ಲಿ ಮೋದಿ ಸರ್ಕಾರದಂತಹ ಒಂದು ಬಹುದೊಡ್ಡ ಅಧಿಕಾರ ಲಭ... ಎಂಬುದನ್ನು, ಆರ್‌ಎಸ್‌ಎಸ್‌ನ ಭಾಗವತ್ ಮತ್ತು ಅನುಯಾಯಿಗಳು ... ಚರ್ಚೆಗಳಲ್ಲಿ ಹೇಳುತ್ತಿರುವುದು ಮತ್ತು ಪ್ರತಿಪಾದಿಸುತ್ತಿರುವುದೆಲ್ಲಾ ಭಾರ... ಸಂವಿಧಾನದ ಮೌಲ್ಯಗಳನ್ನು ಸ್ಪಷ್ಟವಾಗಿ ಧಿಕ್ಕರಿಸುವಂತವು. ಹಾಗಾಗಿ ನಾ... ಎತ್ತ ಸಾಗುತ್ತಿದ್ದೇವೆ ಎಂಬುದರ ಕುರಿತು ಪ್ರತಿಯೊಬ್ಬ ಭಾರತೀಯ... ಜಾಗೃತನಾಗಬೇಕು ಮತ್ತು ಸ್ವಾತಂತ್ರ್ಯ ಚಳವಳಿ ಮೂಲಕ ಗಳಿಸಿ ಸಂವಿಧಾನ... ಸಂಗ್ರಹಿಸಿಟ್ಟ ಮೌಲ್ಯಗಳಿಗೆ ನಾವೆಲ್ಲಾ ಬದ್ಧರಾಗಿರಬೇಕು. ಜನಾಂದೋ... ಪ್ರೇರಿತ ಕಾರ್ಯಸೂಚಿಗಳ ಮೂಲಕ ಅದನ್ನು ರಕ್ಷಿಸಿ, ಸುರಕ್ಷಿತವಾಗಿ... ಅಗತ್ಯತೆ ಇದೆ.

● ರಾಮ್ ಪುನಿಯ...

ಕನ್ನಡಕ್ಕೆ: ಗಿರೀಶ್ ತಾಳಿ...



ಬುಸುಗುಡುವ ಅಪ್ಪ, ಬಸವಳಿದ ಮಗೆ

ಗಂಗಾವತಿ ಜೆಡಿಎಸ್ ಶಾಸಕ ಇಕ್ಬಾಲ್ ಅನ್ಸಾರಿ ...ಸ್‌ಸಿ ನೇಮಕಾತಿ ರದ್ದು ಮಾಡಿದ ಮುಖ್ಯಮಂತ್ರಿಗಳನ್ನು ...ರಂಗವಾಗಿ ಸಮರ್ಥಿಸಿಕೊಳ್ಳುತ್ತಾರೆ. ಜೆಡಿಎಸ್‌ನ ...ನ್ನೊಬ್ಬ ನಾಯಕ ಎಂ.ಸಿ. ನಾಣಯ್ಯ ಗೊತ್ತಿದ್ದೂ ...ರಸ್ವಾಮಿಯ ಕೆಪಿಎಸ್‌ಸಿ ಹೋರಾಟಕ್ಕೆ ಕ್ಯಾತೆ ತೆಗೆಯು... ದೇವೇಗೌಡರು ಅರಮನೆ ಮೈದಾನದಲ್ಲಿ ಸೋಮವಾರ ... ಕಾರ್ಯಕರ್ತರ ಸಭೆಗೆ ಜಮೀರ್, ಅನ್ಸಾರಿ, ಚಿಕ್ಕ...ಮ್ಮ, ಸಾ.ರಾ. ಮಹೇಶ್ ಗೈರಾಗುತ್ತಾರೆ. ವೈಎಸ್‌ವಿ ...ಗೆ ಕೆಪಿಎಸ್‌ಸಿ ಹೋರಾಟದ ಕುಮಾರಣ್ಣನ ನಿಲುವು ...ಇಲ್ಲ. ಪರಿಷತ್ ಉಪಸಭಾಪತಿ ಪುಟ್ಟಣ್ಣಗೆ ಜೆಡಿಎಸ್ ...ಮೇ ಜಿಗುಪ್ಸೆ. ಮಾಗಡಿ ಶಾಸಕ ಬಾಲಕೃಷ್ಣರ ಒಂದು ... ಪಕ್ಷದಿಂದಾಚೆಗೆ ಬಿದ್ದು ಯಾವುದೋ ಕಾಲವಾಗಿದೆ!

...ಇದೆಲ್ಲದರ ಪರಮಾವಧಿಯೆಂಬಂತೆ ಚಲುವಣ್ಣ ಮತ್ತು ...ೀರಣ್ಣ ಎಂಬಿಬ್ಬರು ದೊಣ್ಣೆ ನಾಯಕರು ಮುಖ್ಯ...ಗಳ ಕಾರನ್ನೇರಿ ಏನೇನೋ ಕುಶಲೋಪರಿ ನಡೆಸುತ್ತಾರೆ. ...ದೇವೇಗೌಡರದ್ದು ಏಕಾಂಗಿ ಗೊಣಗಾಟ. 'ಯಾರ್ಯಾರಿಗೆ ... ಬಗ್ಗೆ ನಿಷ್ಠೆಯಿಲ್ಲವೋ ಅವರು ಪಕ್ಷ ಬಿಡಲು ...ತ್ತರು. ಅವರಿಗಿಷ್ಟವಾದ ಪಕ್ಷಕ್ಕೆ ಹೋಗಬಹುದು. ...ಇಲ್ಲದೆ ರಾಜಕೀಯ ಸಾಧ್ಯವಿಲ್ಲ ಎಂದು ನಂಬಿದವರಿಗೆ ...ಲ್ಲಿ ಸ್ಥಾನವಿಲ್ಲ. ಆದರೆ ನಾನು ಮಾತ್ರ ಸುಮ್ಮನೆ ...ವವನಲ್ಲ. ನಾಳೆಯಿಂದಲೇ ಪಕ್ಷದ ಸಂಘಟನೆಗೆ ...ತ್ತೇನೆ. ಇನ್ನು ಮುಂದೆ ಹಾಸನವೇ ನನ್ನ ಕಾರ್ಯಕ್ಷೇತ್ರ. ...ಳೂರಿನಿಂದ ಹಾಸನಕ್ಕೆ ಸ್ಥಳಾಂತರವಾಗುತ್ತೇನೆ. ...ದ್ಯಂತ ಪ್ರವಾಸ ಕೈಗೊಂಡು ಪಕ್ಷ ಕಟ್ಟುತ್ತೇನೆ...!'

...ಈ ಇಳಿವಯಸ್ಸಿನಲ್ಲಿ ಇಷ್ಟೆಲ್ಲ ಅನಾರೋಗ್ಯದ ಮಧ್ಯೆ ...ಎಸ್ ಪಿತಾಮಹ ದೇವೇಗೌಡರು ಇಷ್ಟೊಂದು ...ಶೆಯಿಂದ ನಿರಾಶೆಯಿಂದ ಮಾತನಾಡುವ ಪರಿಯೇ ...ಎಸ್ ದುರ್ಗತಿಗೆ ಹಿಡಿದ ಕನ್ನಡಿಯಂತಿಲ್ಲವೇ?

...ಳೆದ ವಿಧಾನಸಭಾ ಚುನಾವಣೆಯ ನಂತರದ ...ಮಾನಗಳು, ಜೆಡಿಎಸ್‌ಗೆ ತಪ್ಪಿದ ವಿರೋಧಿ ನಾಯಕನ ...ಮಾನ, ಮತ್ತೆ ಬಿಜೆಪಿಯಲ್ಲಿ ಕೆಜೆಪಿ ವಿಲೀನಗೊಂಡಿದ್ದು, ...ದಿ ಅಲೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದದ್ದು, ...ಕಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ಸೋಲು, ... ಟಿಕೆಟ್ ಪಡೆದ ಅಧಿಕೃತ ಅಭ್ಯರ್ಥಿಗಳೇ ಕೈಕೊಟ್ಟು ...ತ್ತಿಯಾಗಿದ್ದು, ದೇವೇಗೌಡರ ಅನಾರೋಗ್ಯ, ಪಕ್ಷದ ...ರ ಅಶಿಸ್ತು, ನಾಯಕರ ಅಸಂತುಷ್ಟಿ, ಎಮ್ಮೆಲ್ಸಿ ಸೀಟು ...ಗೆ ಹೋಗಿ ಸಿಕ್ಕಿಬಿದ್ದಿದ್ದು, ಜೊತೆಗಿದ್ದ ಶಾಸಕರೇ ...ಬಂಡಾಯಕ್ಕಿಳಿದಿದ್ದು, ಅಂತಿಮವಾಗಿ ಉಪ ...ಚುನಾವಣೆಗೂ ಅಭ್ಯರ್ಥಿಗಳನ್ನು ಹಾಕಲಾಗದ ಅಸಹಾಯಕ ...ತಿ ಇತ್ಯಾದಿಗಳೆಲ್ಲವೂ ಜೆಡಿಎಸ್ ಅಧಃಪತನದ ...ಮೆಟ್ಟಿಲುಗಳಂತೆ ಸಂಭವಿಸುತ್ತಲೇ ಬಂದವು.

...ಇನ್ನೇನು ತನಗೆ ಮುಪ್ಪಾಯಿತು, ಮಗ ಕುಮಾರಸ್ವಾಮಿ ...ಮುಖ್ಯಮಂತ್ರಿಯಾಗಿದ್ದೂ ಆಯಿತು, ಪ್ರಧಾನಿ ಪಟ್ಟವನ್ನೇ ...ಹಿಡಿದ ಮೇಲೆ ಅದಕ್ಕಿಂತ ಬೇಕೆ? ಇನ್ನೇನಿದ್ದರೂ ...ಮಕ್ಕಳ ಕಾಲ. ಮಗ ಕುಮಾರಸ್ವಾಮಿ ತನ್ನ ಉತ್ತರಾಧಿ...ಯಾಗಿ ಮೆರೆಯುತ್ತಾರೆಂದೇ ದೇವೇಗೌಡರು ಲೆಕ್ಕ ...ಹಾಕಿದ್ದರು. ಬಿಜೆಪಿ ನೆಲಕಚ್ಚಿ, ಸಿದ್ದು ಮುಖ್ಯಮಂತ್ರಿಯಾಗಿ, ...ಎಸ್‌ಗೆ ಅಧಿಕೃತ ವಿರೋಧ ಪಕ್ಷದ ಸ್ಥಾನ ಪ್ರಾಪ್ತಿಯಾದ ...ಅಂತೂ ತಾನೇ ರಾಜಕೀಯ ಪರ್ಯಾಯವೆಂದೇ ಗೌಡರ ...ತೆಯಾಗಿತ್ತು, ಹೀಗೇ ಮುಂದುವರಿದರೆ ಜೆಡಿಎಸ್ ...ತ್ತಲ್ಲ ನಾಳೆ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ...ಕಿರಣವೊಂದು ಮನದೊಳಗೆ ಮೊಳಕೆಯೊಡೆದಿತ್ತು. ...ಆದರೆ ದಿನಕಳೆದಂತೆ ದೇವೇಗೌಡರ ನಿರೀಕ್ಷೆ...ಗಳೆಲ್ಲವೂ ಒಂದೊಂದಾಗಿ ನೆಲಕಚ್ಚತೊಡಗಿದವು.

ಅಪ್ಪನಿಗಿದ್ದ ದೂರದೃಷ್ಟಿ, ಹೋರಾಟದ ಛಲ, ಕಾರ್ಯತಂತ್ರ, ನೈಪುಣ್ಯಗಳ್ಯಾವುದು ಕುಮಾರಣ್ಣನಿಗೆ ಮೈಗೂಡಲೇ ಇಲ್ಲ. **Of course** ತಂದೆಯ ಹಳೇಕಾಲದ ಸಂಘಟನಾ ಶೈಲಿಗೆ ಮಗ ಕುಮಾರಸ್ವಾಮಿ ಮಣಿಯಬೇಕಾದ ಅಗತ್ಯವೂ ಇರಲಿಲ್ಲ. ಯುವ ಪೀಳಿಗೆಗೆ ತಕ್ಕಂತೆ ಆಧುನಿಕ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದ ಕುಮಾರಸ್ವಾಮಿಗೆ ತಂದೆಯ ಶೈಲಿ ಅನಿವಾರ್ಯವೆನಿಸಲೂ ಇಲ್ಲ.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೇರುತ್ತಿದ್ದಂತೆಯೇ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದ ಉತ್ತುಂಗವೂ ಮೇಳೈಸುತ್ತಿತ್ತು. ಇಂಥಾ ಪರಿಸ್ಥಿತಿಯಲ್ಲೇ ಜೆಡಿಎಸ್ ಶಾಸಕರ ದುರಾಸೆಯೂ ಕೆರಳಿತ್ತು. ಒಂದೋ ಅಧಿಕಾರವಿರಬೇಕು ಅಥವಾ ಸಂಪತ್ತಿನ ಬಲಬೇಕು. ಇವೆರಡೂ ಜೆಡಿಎಸ್ ಪಾಲಿಗೆ ದೂರದ ಮಾತಾಗಿ ಹೋಯಿತು. ಜೆಡಿಎಸ್ ಶಾಸಕರಲ್ಲೇ ಎರಡು ರೀತಿಯ ಶಾಸಕರ ಗುಂಪಿದೆ. ಒಂದು ಚಲುವರಾಯಸ್ವಾಮಿ, ಉಪಸಭಾಪತಿ ಪುಟ್ಟಣ್ಣ, ಜಮೀರ್, ಮಾಗಡಿ ಬಾಲಕೃಷ್ಣರಂಥ ಪಡ್ಡೆ ರಾಜಕಾರಣಿಗಳ ಗುಂಪು. ಇನ್ನೊಂದು ದೇವೇಗೌಡರಿಗೆ. ಪರಮನಿಷ್ಠರಾದ, ಗ್ರಾಮಾಂತರದ ಒಕ್ಕಲಿಗರ ಓಟುಗಳನ್ನೇ ಅವಲಂಬಿಸಿದ ರೈತಾಪಿ ಹಿನ್ನೆಲೆಯ ಹಳೇ ಮೈಸೂರಿನ ಒಕ್ಕಲಿಗ ಶಾಸಕರ ಗುಂಪು.

ಕುಣಿಗಲ್‌ನ ಡಿ. ನಾಗರಾಜಯ್ಯ, ಭದ್ರಾವತಿ ಅಪ್ಪಾಜಿ, ವೈಎಸ್‌ವಿ ದತ್ತ, ಗುಬ್ಬಿ ಶಾಸಕ ವಾಸು, ಶಿಡ್ಲಘಟ್ಟದ ರಾಜಣ್ಣ, ದೇವನಹಳ್ಳಿಯ ಪಿಳ್ಳ ಮುನಿಶಾಮಪ್ಪ, ನೆಲಮಂಗಲದ ಡಾ. ಶ್ರೀನಿವಾಸಮೂರ್ತಿ, ಮದ್ದೂರಿನ ಡಿ.ಸಿ. ತಮ್ಮಣ್ಣ, ಚನ್ನರಾಯಪಟ್ಟಣದ ಸಿ.ಎನ್. ಬಾಲಕೃಷ್ಣ, ಅರಸೀಕೆರೆಯ ಶಿವಲಿಂಗೇಗೌಡ, ಹಾಸನದ ಹೆಚ್.ಎಸ್. ಪ್ರಕಾಶ್, ಬೇಲೂರು ಶಾಸಕ ಕುಮಾರಸ್ವಾಮಿ, ಮೈಸೂರಿನ ಜಿ.ಟಿ. ದೇವೇಗೌಡ- ಇತ್ಯಾದಿ ದೇವೇಗೌಡರ ಪರಮ ನಿಷ್ಠ ಶಾಸಕರದ್ದೇ ಮತ್ತೊಂದು ವಿಶೇಷ ಗುಂಪಿದೆ.

ಹೀಗೆ ಕುಮಾರಸ್ವಾಮಿ, ಪಕ್ಷ, ಅಧಿಕಾರ, ಅವಕಾಶಗಳೆಲ್ಲವನ್ನೂ ಮೀರಿ ದೇವೇಗೌಡರ ಕಾರಣಕ್ಕೇ ಗೆದ್ದು ಶಾಸಕರಾಗಿ ಅದನ್ನೇ ರಾಜಕೀಯವೆಂದು ಭಾವಿಸಿಕೊಂಡ ಶಾಸಕರ್‍ಯಾರೂ ಅಧಿಕಾರವನ್ನೇ ನಂಬಿಕೊಂಡು ರಾಜಕೀಯಕ್ಕಿಳಿದವರಲ್ಲ. ಏಕೆಂದರೆ ಜನ ಅವರಿಗೆ ಓಟು ಹಾಕುವುದು ದೇವೇಗೌಡರ ಮುಖ ನೋಡಿಕೊಂಡೇ ಹೊರತು ಬೇರೆ ಕಾರಣಕ್ಕಲ್ಲ.

ಆದರೆ ದೇವೇಗೌಡರ ಹಂಗಿಲ್ಲದೆ ಕುಮಾರಣ್ಣನ ಸ್ನೇಹಕ್ಕೆ ಬಿದ್ದು ಜೆಡಿಎಸ್ ಬಾವುಟ ಹಿಡಿದವರ ಗುಂಪಿತ್ತಲ್ಲ ಅದು ಅಧಿಕಾರವಿಲ್ಲದೆ ಕೂರುವ ಜಾಯಮಾನದ್ದಲ್ಲ. ಅದೇನಾಯಿತೋ ಕುಮಾರಸ್ವಾಮಿಗೆ ಒಂದಲ್ಲ ಎರಡು ಆ್ಯಂಜಿಯೋಪ್ಲಾಸ್ಟಿ ಆಪರೇಷನ್ನುಗಳಾದವು. ಆಸಕ್ತಿ, ಅಭಿರುಚಿ, ಖಯಾಲಿಗಳದ್ದೇ ಪಟ್ಟಿ ಬೇರೆ. ಐದು ವರ್ಷಗಳ ಕಾಲ ಬಿಜೆಪಿ ಅಧಿಕಾರದಲ್ಲಿ ಬಳಲಿದವರು, ಆ ನಂತರ ಕಾಂಗ್ರೆಸ್ ಅಧಿಕಾರಕ್ಕೆ ಬಂತೆಂದು ಕಂಗಾಲಾದವರು, ಅಧಿಕಾರಬಾಕರು ಮಂತ್ರಿಗಿರಿಯ ಕನಸು ಹೊತ್ತ ಇಂಥವರಲ್ಲಿ ಒಂದಂತೂ ನಿಕ್ಕಿಯಾಗಿತ್ತು.

ಅದೇನೆಂದರೆ ಮುಂದಿನ ಬಾರಿಯೂ ಜೆಡಿಎಸ್‌ಗೆ ಅಧಿಕಾರ ಕಷ್ಟ ಮತ್ತು ಪರಿಸ್ಥಿತಿ ಹೀಗೇ ಮುಂದುವರಿಯಿತೆಂದರೆ ಹಣವಿಲ್ಲದೆ ರಾಜಕೀಯವೂ ನಷ್ಟ!

ಜಮೀರ್ ಮತ್ತು ಚಲುವರಾಯಸ್ವಾಮಿ ಕದ್ದೂ ಮುಚ್ಚಿ ಮುಖ್ಯಮಂತ್ರಿ ಸಿದ್ದು ಜೊತೆ ಕಣ್ಣಾಮುಚ್ಚಾಲೆಗಿಳಿದರು. ಕೊಪ್ಪಳಕ್ಕೆ ಲೋಕಸಭಾ ಅಭ್ಯರ್ಥಿ ಯಾರಾಗಬೇಕೆಂಬುದನ್ನು ನಿರ್ಧರಿಸುವ ಅಧಿಕಾರವನ್ನು ಗಂಗಾವತಿಯ ಇಕ್ಬಾಲ್ ಅನ್ಸಾರಿಗೆ ವಹಿಸಲಾಗಿತ್ತು. ಕಳೆದ ಬಾರಿಯೇ ಕಾಂಗ್ರೆಸ್ ಬಾಗಿಲು ಬಡಿದಿದ್ದ ಅನ್ಸಾರಿಗೆ ಒಳಗೊಳಗೆ ಕಾಂಗ್ರೆಸ್ ಜೊತೆ ಕೈಜೋಡಿಸುವ ಬಯಕೆ. ಜೆಡಿಎಸ್ ಏನಾದರೂ ಅಭ್ಯರ್ಥಿ ನಿಲ್ಲಿಸಿದರೆ ಬಿಜೆಪಿ ಗೆಲ್ಲುತ್ತದೆ ಎಂಬ ನೆಪವೊಡ್ಡಿದ ಅನ್ಸಾರಿ ಜೆಡಿಎಸ್ ಅಭ್ಯರ್ಥಿಯನ್ನೇ ಹಾಕಲಿಲ್ಲ. ಫಲವಾಗಿ ಗೆದ್ದದ್ದು ಮಾತ್ರ ಬಿಜೆಪಿಯೆ.

ಬೆಂಗಳೂರು ಗ್ರಾಮಾಂತರಕ್ಕೆಂದು ಜೆಡಿಎಸ್ ಅಭ್ಯರ್ಥಿಯಾಗಿ ಕುಮಾರಸ್ವಾಮಿಯೇ ನಿಂತು ಡಿಕೆಶಿಯನ್ನು ಎದುರಿಸಬೇಕೆಂಬುದು ಕಾರ್ಯಕರ್ತರ ಬಯಕೆಯಾಗಿತ್ತು. ಆದರೆ ಕುಮಾರಣ್ಣನಿಗೆ ಅದೆಂಥದೋ ಅಳುಕು. ಚಿಕ್ಕಬಳ್ಳಾಪುರದಲ್ಲೂ ಗೆಲ್ಲಲಿಲ್ಲ, ಡಿಕೆ ತಮ್ಮನ ಎದುರು ಜೆಡಿಎಸ್‌ನ ಪ್ರಭಾಕರ ರೆಡ್ಡಿಗೂ ಬರಕತ್ತಾಗಲಿಲ್ಲ. ಇತ್ತ ಜಮೀರ್ ಮತ್ತು ಚಲುವರಾಯಸ್ವಾಮಿ ಮುಖ್ಯಮಂತ್ರಿ ಸಿದ್ದು ಜೊತೆ ಇನ್ನಷ್ಟು ಆತ್ಮೀಯ ಸಂಬಂಧವಿಟ್ಟುಕೊಂಡರು. ತನ್ನ ಸ್ವಂತ ತಾಕತ್ತಿನ ಮೇಲೆಯೇ ಗೆದ್ದು ಎಮ್ಮೆಲ್ಸಿಯಾದ ಪುಟ್ಟಣ್ಣನಿಗೆ ತನ್ನನ್ನೇ ಉಪಸಭಾಪತಿ ಮಾಡುತ್ತಾರೆಂಬ ಬಲವಾದ ನಂಬಿಕೆಯಿತ್ತು. ಆದರೆ ಕುಮಾರಣ್ಣನಿಗೆ ಹೊರಟ್ಟಿಯನ್ನು ಉಪಸಭಾಪತಿ ಮಾಡುವ ಬಯಕೆ. ಒಂದು ಹಂತದಲ್ಲಿ ಪುಟ್ಟಣ್ಣನಿಗೂ ಕುಮಾರಣ್ಣನ ವಿರುದ್ಧ ಅಸಹನೆ ಭುಗಿಲೆದ್ದಿತ್ತು.

ಇತ್ತ ಮಾಗಡಿ ಶಾಸಕ ಬಾಲಕೃಷ್ಣಗೆ ದೇವೇಗೌಡರ ವಿರುದ್ಧವೇ ಮುನಿಸಿತ್ತು. ಲೋಕಸಭಾ ಚುನಾವಣೆಯಲ್ಲಿ ಬಹಿರಂಗವಾಗೇ ಡಿಕೆ ಜೊತೆ ಬಾಲಕೃಷ್ಣ ಕೈಜೋಡಿಸಿದ ಸುದ್ದಿ ಅಪ್ಪಮಕ್ಕಳ ಕಿವಿಗೆ ಬಿದ್ದಿತ್ತು. ಇಂಥ ಅಶಿಸ್ತು, ಅಸಹನೆಗಳನ್ನು ತಾತ್ಕಾಲಿಕವಾಗಿಯಾದರೂ ಸುಧಾರಿಸಬೇಕೆಂಬ ಆಸೆ ಹೊತ್ತ ಕುಮಾರಣ್ಣ ಜಾಲಿ ಟ್ರಿಪ್ಪಿನ ಕಾರ್ಯತಂತ್ರ ರೂಪಿಸಿದ್ದು. ದೂರದ ಶ್ರೀಲಂಕಾದ ರೆಸಾರ್ಟಿನಲ್ಲಿ ವಾರಪೂರ್ತಿ ಜೆಡಿಎಸ್ ಶಾಸಕರು ಪಾರ್ಟಿ ನಡೆಸಿದರು. ಮೊದಲೇ ಹಸಿದಿದ್ದ ಅವಕಾಶವಾದಿ ಶಾಸಕರು ಅಪ್ಪಮಕ್ಕಳ ವಿರುದ್ಧವೇ ಕಿಡಿಕಾರಿ ಬಿಟ್ಟರು. ಕೆಲವರಂತೂ ದೇವೇಗೌಡರ ವಿರುದ್ಧ ವಾಚಾಮಗೋಚರ ಟೀಕೆ ಶುರುವಿಟ್ಟರು.

ಕೇಂದ್ರದಲ್ಲಿ ಅಧಿಕಾರ ಹಿಡಿದ ಬಿಜೆಪಿ ಮತ್ತು ರಾಜ್ಯದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಹೊರತಾಗಿ ರಾಜಕಾರಣದ ಮೂರನೇ ಮಾರ್ಗವೇ ಇಲ್ಲ ಎಂಬ ಹತಾಶೆ ಅವಕಾಶವಾದಿಗಳದ್ದಾಗಿತ್ತು. ಏಕೆಂದರೆ ಜೆಡಿಎಸ್‌ನ ಸಮೀಕರಣವೇ ವಿಚಿತ್ರವಾಗಿತ್ತು. ದೇಶಪಾಂಡೆ, ಚಂದ್ರೇಗೌಡ, ಭೈರೇಗೌಡ, ನಾಗೇಗೌಡರಂಥವರು ಪಕ್ಷ ತೊರೆದು ಯಾವುದೋ ಕಾಲವಾಗಿತ್ತು. ಬಿ.ಎಲ್. ಶಂಕರ್, ಉಗ್ರಪ್ಪ, ರಮೇಶ್‌ಕುಮಾರ್ ಥರದವರು ಪಕ್ಷ ತೊರೆದು ಕಾಲಮಿಂಚಿತ್ತು. ಕೊನೆಯ ಕಂತಾಗಿ ಸಿದ್ದು, ಮಹದೇವಪ್ಪ, ಜಾರಕಿಹೊಳಿ, ಮಹದೇವಪ್ರಸಾದ್ ತಂಡವೂ ದೂರಾಗಿತ್ತು.

ಇಂಥವರೇ ಹೋದ ಮೇಲೆ ಉಳಿದವರಾದರೂ ಎಂಥವರು? ಇದೇ ಚಲುವ, ಜಮೀರ್, ಅನ್ಸಾರಿ, ಪುಟ್ಟಣ್ಣ, ಬಾಲಕೃಷ್ಣ...!

ಇವರೊಂದಿಗೆ ಎಮ್ಮೆಲ್ಸಿ ಪುಟ್ಟಣ್ಣ, ಬಸವಕಲ್ಯಾಣದ ಖೂಬಾ, ಕೆ.ಆರ್. ನಗರದ ಸಾ.ರಾ. ಮಹೇಶ್, ಪುಲಿಕೇಶಿನಗರದ ಅಖಂಡ ಶ್ರೀನಿವಾಸಮೂರ್ತಿ, ಚಿಕ್ಕನಾಯಕನಹಳ್ಳಿ ಸುರೇಶ್‌ಬಾಬು, ಹರಿಹರದ ಶಿವಶಂಕರ್, ನವಲಗುಂದದ ಕೋನರೆಡ್ಡಿ, ಲಿಂಗಸುಗೂರಿನ ಮಾನಪ್ಪ ವಜ್ಜಲ, ರಾಯಚೂರು ಶಿವರಾಜ್ ಪಾಟೀಲ್; ಇತ್ಯಾದಿ ಶಾಸಕರ ಹಿಂಡೊಂದು ಬೇಲಿ ಹಾರಲು ಸಜ್ಜಾಗಿ ಕೂತಿದೆ. ಈ ಪೈಕಿ ಕೆಲವರು ಬಿಜೆಪಿಗೂ ಇನ್ನೂ ಕೆಲವರು ಕಾಂಗ್ರೆಸ್ಸಿಗೂ ಹಾರಬಹುದು ಅಥವಾ ಮುಂಬರುವ ಚುನಾವಣೆತನಕ ಕಾಂಗ್ರೆಸ್‌ನ ಸಹಗುಂಪಾಗಿ ಲಾಭಕ್ಕೆ ಕೈಚಾಚಬಹುದು.

ಇದು ದೇವೇಗೌಡರ ಕಿವಿ ಮುಟ್ಟಿದೆ. ಮಗನನ್ನು ನಂಬಿ ಕೂತರೆ ಪರಿಸ್ಥಿತಿ ಮತ್ತಷ್ಟು ಕೆಡಬಹುದೆಂಬ ಅಳುಕು. ಹೀಗೆ ಬಿಟ್ಟರೆ ಅಳಿದುಳಿದ ಪಕ್ಷನಿಷ್ಠರೂ ಕೆಟ್ಟಾರೆಂಬ ಆತಂಕ. ವೃದ್ಧಾಪ್ಯದ ಅಸಹಾಯಕತೆ, ಅನಾರೋಗ್ಯದ ಬೇಗುದಿ ಯಾವುದನ್ನೂ ಲೆಕ್ಕಿಸದೆ ಅಖಾಡಕ್ಕಿಳಿದಿದ್ದಾರೆ. ತಾನಿನ್ನೂ ಗಟ್ಟಿಮುಟ್ಟು ಎಂದು ತೊಡೆ ತಟ್ಟುತ್ತಾರೆ. ರಾಜ್ಯ ಸುತ್ತಿ ಪಕ್ಷ ಕಟ್ಟುತ್ತೇನೆಂಬ ಛಲವಿದೆ. ಕೆಲ ಶಾಸಕರು ಹೋದರೇನಂತೆ ಜನ ತನ್ನ ಜೊತೆಗಿದ್ದಾರೆಂಬ ನಂಬಿಕೆಯಿದೆ. ಕಾರ್ಯಕರ್ತರು ತನ್ನ ಕೈಬಿಡಲಾರರೆಂಬ ನಿರೀಕ್ಷೆಯಿದೆ. ಆದರೆ ಕಾಲ ಮಾತ್ರ ಮಿಂಚಿಹೋಗಿದೆ!

ಏಕೆಂದರೆ ದೇವೇಗೌಡರದ್ದು ಹಿಂದಿನ ಆರೋಗ್ಯವಲ್ಲ, ಪಕ್ಷದ ಕಾರ್ಯಕರ್ತರ ಶಿಸ್ತು ಮೊದಲಿನಂತಿಲ್ಲ, ಕುಮಾರಣ್ಣನಿಗೆ ಹೋರಾಟ ರೂಪಿಸಿ ಗೊತ್ತಿಲ್ಲ, ರೇವಣ್ಣನಿಗೆ ಹಾಸನ ಬಿಟ್ಟು ಬದುಕು ತಿಳಿದಿಲ್ಲ, ಅನೀತಕ್ಕ ತಾನೇ ಬೇರೆ ಏನು ಮಾಡಿಯಾರು? ಮಗ ನಿಖಿಲ್‌ಗೌಡ ನಿಂತು ಮಾಡುವ ಭಾಷಣವೇ ಜೆಡಿಎಸ್‌ನ ಹತಾಶೆಯ ಹಾಡಿನಂತಿದೆ. ಕನ್ನಡ ನಾಡಿನ ಮಣ್ಣಿನ ಪಕ್ಷವೊಂದಕ್ಕೆ ಹೋರಾಡುವ ಛಲವೇ ಇದ್ದಂತಿಲ್ಲ.

● ರಾ.ಸೋಮನಾಥ್

ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಳ ದೊಡ್ಡ ಸವಾಲಾಗಿರುವ ಸಂತ್ರಸ್ತರ ಪುನರ್ವಸತಿ!

ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು 524.256 ...ಟರ್‌ಗೆ ಎತ್ತರಿಸಲು ಕೃಷ್ಣಾ ನ್ಯಾಯಾಧೀಕರಣ ...ಮಂಡಳಿಯು ಇತ್ತೀಚೆಗಷ್ಟೇ ಅಂತಿಮ ತೀರ್ಪು ನೀಡಿದೆ ...ದರೂ, ತೀರ್ಪಿನಿಂದ ರಾಜ್ಯ ಏಕಾಏಕಿ ಜಲಾಶಯದ ... ಎತ್ತರಿಸಲು ಸಾಧ್ಯವಿಲ್ಲ. ಮೊದಲು ಮುಳುಗಡೆ ...ಗುವ ಭೂಮಿಯನ್ನು ಕೇಂದ್ರ ಸರ್ಕಾರ ಜಾರಿಗೆ ...ರುವ ಹೊಸ ಭೂಸ್ವಾಧೀನ ಕಾಯ್ದೆ ಅನ್ವಯ ಸ್ವಾಧೀನಪ...ಡಿಸಿಕೊಳ್ಳಬೇಕಿದೆ ಮತ್ತು ಪರಿಹಾರ, ಪುನರ್ವಸತಿ ಕಲ್ಪಿಸ ...ಬೇಕಿದೆ. ಆ ಬಳಿಕವಷ್ಟೇ ಜಲಾಶಯದಲ್ಲಿ ನೀರನ್ನು ಸಂಗ್ರಹಿಸ...ಬಹುದಾಗುತ್ತದೆ. ಇದಕ್ಕೆ ಸಾವಿರಾರು ಕೋಟಿ ಹಣದ ...ಅಗತ್ಯವಿದೆ. ಮುಳುಗಡೆಯಾಗುವ ಭೂಮಿಯ ಸ್ವಾಧೀನ ...ಮತ್ತು ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವುದು ಸರ್ಕಾರಕ್ಕೆ ...ದೊಡ್ಡ ಸವಾಲಾಗಲಿದೆ.

22 ಗ್ರಾಮ ಮುಳುಗಡೆ

...ಅಣೆಕಟ್ಟೆ ಎತ್ತರ ಹೆಚ್ಚಿಸುವುದರಿಂದ ಬಾಗಲಕೋಟೆ ...ಮತ್ತು ವಿಜಾಪುರ ಜಿಲ್ಲೆಯ 22 ಗ್ರಾಮಗಳು ಸಂಪೂರ್ಣ ...ಮುಳುಗಡೆಯಾಗಲಿವೆ. 21,290 ಕುಟುಂಬಗಳ 78,187 ...ಜನ ಸಂತ್ರಸ್ತರಾಗಲಿದ್ದಾರೆ. ಅಲ್ಲದೇ, ಅವಳಿ ಜಿಲ್ಲೆಯ 192 ...ಗ್ರಾಮಗಳು ಭಾಗಶಃ ಬಾಧಿತವಾಗಲಿವೆ. ಅವಳಿ ಜಿಲ್ಲೆಯ ...640 ಎಕರೆ ಭೂಮಿ ಮುಳುಗಡೆಯಾಗಲಿದೆ. ...ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ 4,315 ಎಕರೆ ...ಮತ್ತು ಕಾಲುವೆ ನಿರ್ಮಾಣಕ್ಕಾಗಿ 24,685 ಎಕರೆ ...ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ.

ಈಗಾಗಲೇ 'ಎ' ಸ್ಕೀಂನಲ್ಲಿ ಅವಳಿ ಜಿಲ್ಲೆಯ 176 ಗ್ರಾಮಗಳ 1.55 ಲಕ್ಷ ಎಕರೆ ಜಮೀನು ಮುಳುಗಡೆಯಾಗಿದ್ದರೂ ನೀರಾವರಿಯಿಂದ ವಂಚಿತವಾಗಿವೆ. 'ಎ' ಸ್ಕೀಂನಲ್ಲಿ ಮುಳುಗಡೆಯಾದ ಸಂತ್ರಸ್ತರಿಗೆ ಇದುವರೆಗೂ ಪೂರ್ಣ ಪ್ರಮಾಣದಲ್ಲಿ ಪುನರ್ವಸತಿ ಕಲ್ಪಿಸಲು ಸಾಧ್ಯವಾಗಿಲ್ಲ. ಮುಳುಗಡೆಯಾದ 176 ಗ್ರಾಮಗಳಲ್ಲಿ ಇದುವರೆಗೆ 124 ಗ್ರಾಮಗಳು ಮಾತ್ರ ಪೂರ್ಣ ಸ್ಥಳಾಂತರಗೊಂಡಿವೆ. 14 ಗ್ರಾಮಗಳು ಭಾಗಶಃ ಸ್ಥಳಾಂತರಗೊಂಡಿವೆ, ಇನ್ನೂ 38 ಗ್ರಾಮಗಳು ಸ್ಥಳಾಂತರವಾಗದೇ ಬಾಕಿ ಉಳಿದಿವೆ. ಮುಖ್ಯವಾಗಿ 'ಎ' ಸ್ಕೀಂನ 136 ಪುನರ್ವಸತಿ ಕೇಂದ್ರಗಳಲ್ಲಿ ಮೂಲಸೌಲಭ್ಯಗಳ ಕೊರತೆ ಸಂತ್ರಸ್ತರನ್ನು ತೀವ್ರವಾಗಿ ಕಾಡುತ್ತಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ವಿಭಾಗದಲ್ಲಿ ವಿವಿಧ ಹುದ್ದೆಗಳು ಖಾಲಿ ಇರುವುದು ಮತ್ತೊಂದು ದೊಡ್ಡ ಸಮಸ್ಯೆಯಾಗಿದೆ.

ಈಗ ಮತ್ತೆ ಆಲಮಟ್ಟಿ ಅಣೆಕಟ್ಟೆ ಎತ್ತರವನ್ನು ಹೆಚ್ಚಿಸುವುದರಿಂದ ಮುಳುಗಡೆಯಾಗುವ 22 ಗ್ರಾಮಗಳು ಮತ್ತು ಬಾಗಲಕೋಟೆ ನಗರದ ಸ್ಥಳಾಂತರಕ್ಕೆ ರಾಜ್ಯ ಸರ್ಕಾರ ತಕ್ಷಣವೇ ಪ್ರಕ್ರಿಯೆ ಆರಂಭಿಸಬೇಕಾಗಿದೆ. ಭೂಸ್ವಾಧೀನ, ಪುನರ್ವಸತಿ ಮತ್ತು ಪರಿಹಾರಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

ನಗರ ಸಮಸ್ಯೆ

ಆಲಮಟ್ಟಿ ಅಣೆಕಟ್ಟೆ ಎತ್ತರದಿಂದ ಬಾಗಲಕೋಟೆ ನಗರ ಮತ್ತಷ್ಟು ಮುಳುಗಡೆಯಾಗಲಿದೆ. ಹಳೆ ನಗರದ 3,525 ಕುಟುಂಬಗಳ (524 ಮೀಟರ್ ವರೆಗೆ) 12,400 ಜನರು ಸಂತ್ರಸ್ತರಾಗಲಿದ್ದಾರೆ.

524.256 ಮೀಟರ್‌ವರೆಗೆ ಜಲಾಶಯದಲ್ಲಿ ನೀರು ನಿಲ್ಲಿಸುವುದರಿಂದ ಬಾಧಿತವಾಗುವ ಬಾಗಲಕೋಟೆ ನಗರವನ್ನು 527 ಮೀಟರ್‌ವರೆಗೆ ಸಂಪೂರ್ಣ ಸ್ಥಳಾಂತರಿಸಬೇಕು ಎಂಬ ಬೇಡಿಕೆ ಮೊದಲಿನಿಂದಲೂ ಇದೆ. ಆದರೆ, ಈ ವಿಷಯದಲ್ಲಿ ಸಾಕಷ್ಟು ಗೊಂದಲ (524ರ ವರೆಗೆ ಸದ್ಯ ಸ್ಥಳಾಂತರ) ಉಂಟಾಗಿರುವುದರಿಂದ ಮತ್ತೊಂದು ಹೋರಾಟದ ಕೂಗು ಕೇಳಿಬರುತ್ತಿದೆ.

ಹಳೆನಗರ, ನವನಗರ ಮತ್ತು ವಿದ್ಯಾಗಿರಿ ಎಂದು ಮೂರು ಭಾಗದಲ್ಲಿ ಹಂಚಿಹೋಗಿರುವ ಬಾಗಲಕೋಟೆ ನಗರದಲ್ಲಿ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಈಗಾಗಲೇ ಕಾಯ್ದಿರಿಸಿರುವ 3,600 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ವಿಷಯದಲ್ಲೂ (ಕೇವಲ 1600 ಎಕರೆ ಮಾತ್ರ ಸ್ವಾಧೀನಪಡಿಸಿಕೊಳ್ಳುವ ವಿಷಯ) ಪರ-ವಿರೋಧ ಅಭಿಪ್ರಾಯ ವ್ಯಕ್ತವಾಗತೊಡಗಿದ್ದು, ಭವಿಷ್ಯದಲ್ಲಿ ಜಟಿಲಗೊಳ್ಳುವ ಸಾಧ್ಯತೆ ದಟ್ಟವಾಗಿದೆ. ಆಲಮಟ್ಟಿ ಅಣೆಕಟ್ಟೆಯಲ್ಲಿ ನೀರು ನಿಲ್ಲಿಸುವುದರಿಂದ ಬಾಧಿತವಾಗುವ 527 ಮೀಟರ್‌ವರೆಗಿನ ಬಾಗಲಕೋಟೆ ನಗರವನ್ನು ಸಂಪೂರ್ಣ ಸ್ಥಳಾಂತರ ಮಾಡಬೇಕು. ಈ ಸಂಬಂಧ ಈಗಾಗಲೇ ಕಾಯ್ದಿರಿಸಿರುವ 3,600 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು 4/1 ನೋಟಿಫಿಕೇಷನ್ ಹೊರಡಿಸಬೇಕಾಗಿದೆ.

ಜಲಾವೃತವಾಗುವ ಹಳ್ಳಿಗಳು

ಬಾಗಲಕೋಟೆ ತಾಲ್ಲೂಕಿನ ಅಂಕಲಗಿ, ಗದ್ದನಕೇರಿ, ಗೋವಿನಕೊಪ್ಪ ಹಿರೇಸಮಶಿ, ಯಡಹಳ್ಳಿ ಕೆ., ಸಂಗೊಂದಿ, ಉದಗಟ್ಟಿ, ಬೀಳಗಿ ತಾಲ್ಲೂಕಿನ ಆಲಗುಂದಿ, ಟಾವಲತ್ತಿ ಕೊಪ್ಪ ಎಸ್.ಕೆ., ಕಾತರಕಿ, ಕುಂದರಗಿ, ಜಮಖಂಡಿ ತಾಲ್ಲೂಕಿನ ಹಿರೇಪಡಸಲಗಿ, ಕುಂಬಾರಹಳ್ಳ, ಸನಾಳ ಹಾಗೂ ಮುಧೋಳ ತಾಲ್ಲೂಕಿನ ಬಂಟನೂರ, ಬುದ್ನಿ ಬಿ.ಕೆ., ಚಿಕ್ಕೂರ ಮತ್ತು ಮಾಚಕನೂರ, ವಿಜಾಪುರ ತಾಲ್ಲೂಕಿನ ಚಿಕ್ಕಗಲಗಲಿ ಮತ್ತು ಶಿರಬೂರ ಹಾಗೂ ಬಸವನಬಾಗೇವಾಡಿ ತಾಲ್ಲೂಕಿನ ವಂದಾಲ ಗ್ರಾಮಗಳು ಜಲಾವೃತವಾಗಲಿವೆ.

ಈ ಯೋಜನೆಯಿಂದ ಉದ್ಭವಿಸಬಹುದಾದ ಪ್ರಶ್ನೆಗಳನ್ನು ಬಗೆಹರಿಸಿಕೊಂಡೇ ಸರ್ಕಾರ ಮುಂದಿನ ಕ್ರಮಕ್ಕೆ ಮುಂದಾಗಬೇಕಿದೆ.

● ಕುಶಲ

ಸ್ಟಾರ್ + ಟೀವಿ = ಸರ್ವನಾಶ



ಬಿಗ್‌ಬಾಸ್‌ನಲ್ಲಿ ಸುದೀಪ್, ಗೋಲ್ಡನ್ ಸ್ಟಾರ್ ಗಣೇಶ್ ರಮೇಶ್‌ನ ವೀಕೆಂಡ್ ವಿತ್...

ಸುವರ್ಣ ವಾಹಿನಿಯಲ್ಲಿ ಕಿಚ್ಚ ಸುದೀಪ್ ಶುರುವಿಟ್ಟ 'ಬಿಗ್ ಬಾಸ್' ಸೀಜನ್-2 ಟೀವಿ ಪ್ರೇಕ್ಷಕರನ್ನು ಕುಟ್ಟಿಬ್ಬಿಸಿದೆಯಾ, ಟಿಆರ್‌ಪಿ ಬಾಚುತ್ತಿದೆಯಾ ಗೊತ್ತಿಲ್ಲ. ಆದರೆ ಗಾಂಧಿನಗರದ ನಿರ್ಮಾಪಕರ ಬುಡಕ್ಕೆ ಕೊಳ್ಳಿಯನ್ನಂತೂ ಇಟ್ಟಿದೆ!

ಪ್ರತಿದಿನ ರಾತ್ರಿ 8ಕ್ಕೆ ಪ್ರಸಾರವಾಗುವ ಬಿಗ್‌ಬಾಸ್‌ನ ಗುಣಮಟ್ಟ, ಅದರ ಪಾತ್ರಧಾರಿಗಳ ಅದ್ಭುತ ಕನ್ನಡ, ಸಾಮಾಜಿಕವಾಗಿ ಅದು ಮಾಡುವ ಪರಿಣಾಮ ಮತ್ತು ನಟ ಸುದೀಪ್ ಅದನ್ನು ನಡೆಸಿಕೊಡುವ ರೀತಿನೀತಿಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಿದ್ದ ಸಾಂಸ್ಕೃತಿಕ ರೂವಾರಿಗಳಿಗೆ ಬದಲಾಗಿ, ಬಡಪಾಯಿ ಸಿನಿಮಾ ಪ್ರೊಡ್ಯೂಸರ್‌ಗಳ ಪ್ರಲಾಪವೇ ಹೆಚ್ಚಾಗಿ ಮೊಳಗುವುದಕ್ಕೂ ಕಾರಣವಿದೆ. ಅದು ಕೇವಲ ನಟ ಸುದೀಪ್ ಮತ್ತು ಬಿಗ್‌ಬಾಸ್ ಸೀರಿಯಲ್ಲುಗಳ ವಿರುದ್ಧವಷ್ಟೇ ಅಲ್ಲ, ಜೀ ಕನ್ನಡದಲ್ಲಿ ರಮೇಶ್ ಅರವಿಂದ್ ನಡೆಸಿಕೊಡುವ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮವಾಗಿರಬಹುದು, ಇನ್ನು ಕೆಲವೇ ದಿನಗಳಲ್ಲಿ ಗೋಲ್ಡನ್ ಸ್ಟಾರ್ ಗಣೇಶ್ ಈ ಟೀವಿಯಲ್ಲಿ ಆರಂಭಿಸುವ 'ಸೂಪರ್ ಮಿನಿಟ್' ಎಂಬ ಮತ್ತೊಂದು ರಿಯಾಲಿಟಿ ಶೋ ಇರಬಹುದು-

ಟೀವಿ ಚಾನಲ್ಲುಗಳ ಇಂಥ ರಿಯಾಲಿಟಿ ಶೋಗಳು ಕಾಲಕ್ರಮೇಣ ಕನ್ನಡ ಸಿನಿಮಾಗಳನ್ನೇ ನುಂಗತೊಡಗಿವೆಯೇ?

ಸದ್ಯ ರಾಜೇಂದ್ರಸಿಂಗ್ ಬಾಬು ನೇತೃತ್ವದಲ್ಲಿ ಕನ್ನಡ ಚಿತ್ರ ನಿರ್ಮಾಪಕರ ಒಂದು ಹಿಂಡೇ 'ಟೀವಿ ಪ್ರಿಯ ಹೀರೋಗಳ' ವಿರುದ್ಧ ತಿರುಗಿಬಿದ್ದಿದೆ. ನಟ ಶಿವರಾಜ್‌ಕುಮಾರ್ ಸಿಟ್ಟಿಗೆದ್ದು ಸಿನಿಮಾ ನಿರ್ಮಾಪಕರ ಈ ಸರ್ವಾಧಿಕಾರಿ ಕ್ಯಾತೆಯ ವಿರುದ್ಧ ಕಿಡಿ ಕಾರಿದರೆ, ರಮೇಶ್ ಅರವಿಂದ್ ಯಾವುದೇ ಕಾರಣಕ್ಕೂ ತಾನು ಜೀ ಕನ್ನಡ ವಾಹಿನಿಯಲ್ಲಿ ನಡೆಸುವ 'ವೀಕೆಂಡ್ ವಿತ್...' ನಿಲ್ಲಿಸುವುದಿಲ್ಲ ಎಂದು ತಿರುಗೇಟು ಹಾಕಿದ್ದಾರೆ. ಇನ್ನು ಗೋಲ್ಡನ್ ಸ್ಟಾರ್ ಗಣೇಶ್ ನಿರ್ಮಾಪಕರ ವಿರುದ್ಧ ಯಾವ ಮಟ್ಟಕ್ಕಿಳಿಯುತ್ತಾರೋ!

ಬಿಗ್‌ಬಾಸ್

ಸಿನಿಮಾ ಹೀರೋಗಳು ಇನ್ನು ಮುಂದೆ ಟೀವಿ ರಿಯಾಲಿಟಿ ಶೋಗಳಿಗೆ ಹೋಗುವುದೇ ತಪ್ಪೆ? ಟೀವಿಗಳಿಗೆ ಇಂಥ ಸ್ಟಾರ್ ನಟರು ಹೋಗುವುದರಿಂದ ಬಿಡುಗಡೆಯಾಗುವ ಕನ್ನಡ ಚಿತ್ರಗಳಿಗೆ ನಿಜಕ್ಕೂ ಪ್ರೇಕ್ಷಕರ ಕೊರತೆಯಾಗುತ್ತದೆಯೆ? ಅಥವಾ ಟೀವಿಗಳೇ ಕಾಲಕ್ರಮೇಣ ಕನ್ನಡ ಸಿನಿಮಾಗಳ ಪಾಲಿಗೆ ಮರಣಶಾಸನ ಬರೆಯುತ್ತಿವೆಯೆ? ಸಿನಿಮಾ ಕಾರಣಕ್ಕೆ, ಸ್ಟಾರ್ ನಟರುಗಳು ಗಳಿಸಿದ ಜನಪ್ರಿಯತೆಯನ್ನು ಟೀವಿಗಳಿಗೆ ಮಾರಿಕೊಳ್ಳಲು ಹೊರಟರೆ ಅದು ತವರು ನೆಲೆಯನ್ನೇ ಶಿಥಿಲಗೊಳಿಸುತ್ತಾ? ಇನ್ನು ಮುಂದೆ ಟೀವಿ-ಸಿನಿಮಾ ಎಂಬ ನಿರ್ಣಾಯಕ ಕಾಳಗವೊಂದಕ್ಕೆ ಇದು ನಾಂದಿಯಾಗುತ್ತಾ? ಅಥವಾ ನ್ಯೂಸ್ ಚಾನಲ್ಲುಗಳ ವಿರುದ್ಧ ಮನರಂಜನಾ ಚಾನಲ್ಲುಗಳಿಗೇ ಅಸೂಯೆ ಶುರುವಾಗಿದೆಯಾ?

ಇಲ್ಲಿಗೆ ಎರಡು ತಿಂಗಳ ಹಿಂದೆ ಸುವರ್ಣ ವಾಹಿನಿಯಲ್ಲಿ ಶುರುವಾದ ಬಿಗ್‌ಬಾಸ್-ಸೀಜನ್-2ನ ಕೇಂದ್ರ ಬಿಂದುವೇ ನಟ ಸುದೀಪ್. ಬಿಗ್‌ಬಾಸ್ ಮನೆಯಲ್ಲಿರುವ ಒಂದು ಡಜನ್ ಸ್ಪರ್ಧಾಳುಗಳ ಪೈಕಿ ಶ್ವೇತಾ ಚೆಂಗಪ್ಪ, ದೀಪಿಕಾ ಕಾಮಯ್ಯ, ಹರ್ಷಿಕಾ ಪೂಣಚ್ಚ ಮತ್ತು ನೀತು ಗ್ಲಾಮರ್ ಗೊಂಬೆಗಳೇ ಹೊರತು ದೊಡ್ಡ ಇಮೇಜಿನ ಹೀರೋಯಿನ್‌ಗಳೇನಲ್ಲ, ಹಾಗೇ ಪುರುಷ ಸ್ಪರ್ಧಿಗಳಲ್ಲಿ ಮಯೂರ್ ಪಟೇಲ್, ಆದಿ ಲೋಕೇಶ್, ಸಂತೋಷ್ ವರ್ಚಸ್ವೀ ನಟರೇನಲ್ಲ. ಸೃಜನ್ ಲೋಕೇಶ್ ತನ್ನ ಪ್ರತಿಭೆಯ ಕಾರಣಕ್ಕೆ ವಿಶೇಷ ಗಮನ ಸೆಳೆಯಬಹುದೇ ಹೊರತು ಸ್ಟಾರ್ ನಟರಂತೂ ಅಲ್ಲವೇ ಅಲ್ಲ.



ಬಿಗ್‌ಬಾಸ್‌ನ ಸ್ಟಾರ್ ಸ್ಪರ್ಧಿಗಳಿವರು

ಹೀಗಾಗಿ ಬಿಗ್‌ಬಾಸ್ ಮೊದಲ ಆವೃತ್ತಿಗಿದ್ದ ಕ್ರೇಜ್ ಸದ್ಯದ ಎರಡನೇ ಆವೃತ್ತಿಗಿರಲಿಲ್ಲ. ಆದರೆ ಬಿಗ್‌ಬಾಸ್‌ನ ಆ್ಯಂಕರ ಆಗಿ ಸುದೀಪ್ ನಿಂತರೆಂದರೆ ಕತೆಯೇ ಬೇರೆಯಾಗುತ್ತದೆ. ಟೀವಿ ಪರದೆಯ ಮುಂದೆ ಕೂತ ಪ್ರೇಕ್ಷಕನ ಚಿತ್ತ ಮತ್ತೊಂದು ಚಾನಲ್ಲಿನತ್ತ ಹೊರಳುವುದೇ ಇಲ್ಲ. ಹಿಂದೆ ಪುನೀತ್ ಕನ್ನಡ ಕೋಟ್ಯಾಧಿಪತಿಯಲ್ಲಿ ಕಂಗೊಳಿಸುತ್ತಿದ್ದಾಗಲೂ ಜನ ಸುದೀಪ್‌ನ ಬಿಗ್‌ಬಾಸ್‌ಗೇ ಹೆಚ್ಚು ಆಕರ್ಷಿತರಾಗಿದ್ದರೆಂದರೆ ಇನ್ನು ಥೇಟರುಗಳಿಗೆ ಬಂದು ಹೊಸದಾಗಿ ಬಿಡುಗಡೆಯಾಗುವ ಇತರೆ ಹೀರೋಗಳ ಸಿನಿಮಾ ನೋಡುವುದುಂಟಾ?

ಶಿವಣ್ಣನ ಆರ್ಯನ್?

ಬಿಗ್‌ಬಾಸ್‌ನ ಅಪಾಯವನ್ನು ಅರಿತೇ ಕನ್ನಡದ ಅನೇಕ ಹೀರೋಗಳು ತಮ್ಮ ಚಿತ್ರದ ಬಿಡುಗಡೆಯನ್ನೇ ಮುಂದೂಡಿಬಿಟ್ಟರು. ಅಷ್ಟರ ನಡುವೆಯೂ ಧೈರ್ಯ ಮಾಡಿದ್ದು ರವಿಚಂದ್ರನ್ ಅಭಿನಯದ 'ದೃಶ್ಯ'. ಬಂದ ಪ್ರಶಂಸೆ ಮತ್ತು ಕತೆಗೆ ಲೆಕ್ಕ ಹಾಕಿದರೆ 'ದೃಶ್ಯ' ಭರ್ಜರಿಯಾಗೇ ಬಾಕ್ಸ್‌ಆಫೀಸ್ ದೋಚಬೇಕಿತ್ತು. ಆದರೆ ಗಳಿಕೆ ಆಮೆ ನಡಿಗೆಯಲ್ಲೇ ಸಾಗಿ ಅದೊಂದು ಆ್ಯವರೇಜ್ ಹಿಟ್ ಚಿತ್ರವಾಗೇ 'ದೃಶ್ಯ' ತೃಪ್ತಿ ಪಟ್ಟುಕೊಳ್ಳಬೇಕಾಯಿತು. ಆ ನಂತರ ತೆರೆಕಂಡ '143' ಹೊಸ ತಾರಾಗಣದ ಚಿತ್ರವಾಗಿತ್ತಾದರೂ ಕತೆ ಮತ್ತು ನಿರೂಪಣೆಯಲ್ಲಿ ವಿಭಿನ್ನ ಪ್ರಯತ್ನವಾಗಿತ್ತು. ಬೇರೆ ಯಾರೇ ದೊಡ್ಡ ಬ್ಯಾನರ್‌ಗಳ ಚಿತ್ರವಿಲ್ಲವಾದ್ದರಿಂದ ಸಹಜವಾಗೇ '143' ಗೆಲ್ಲಬೇಕಿತ್ತು.

ವಿಪರ್ಯಾಸವೆಂದರೆ ಬಿಡುಗಡೆಯಾದ ದಿನವೇ ಸಂಜೆಯ ಶೋಗಳು ಸೊರಗತೊಡಗಿದವು. ಶುಕ್ರವಾರ, ಶನಿವಾರ ಮತ್ತು ಭಾನುವಾರದ ಸಂಜೆ ಶೋಗಳಿಗೆ ಮಾಮೂಲಿನಂತೆ ಯಾವ ಪ್ರಮಾಣದ ಪ್ರೇಕ್ಷಕರಿರಬೇಕಿತ್ತೋ ಆ ಮಟ್ಟದಲ್ಲಿ ಪ್ರೇಕ್ಷಕರಿರಲಿಲ್ಲ. ಬೆನ್ನಲ್ಲೇ ಶಿವಣ್ಣನ 'ಆರ್ಯನ್' ತೆರೆಕಂಡರೆ ಅದು ಕೂಡ ಎರಡನೇ ವಾರದ ಹೊತ್ತಿಗೆ ಸುಸ್ತು ಹೊಡೆದಿತ್ತು. ಆ ನಂತರ ಶ್ರೀನಗರ ಕಿಟ್ಟಿಯ 'ಬಹುಪರಾಕ್' ಭಾರೀ ನಿರೀಕ್ಷೆಯ ಮಧ್ಯೆಯೇ ಬಿಡುಗಡೆಯಾಯಿತಾದರೂ ವಿನಕೇನ ಬಡಕಲಾಗುತ್ತಲೇ ಬಂತು. ತೀರ ಇತ್ತೀಚಿಗೆ ತೆರೆಕಂಡ 'ಬಾಸು' ಅದೇ ಹಳೇ ಕತೆಗೆ ಮಾಡಿದ ಪ್ರಚಾರ, ಪ್ರೊಮೋಷನ್‌ನ ವೆಚ್ಚ ಕೂಡ ಹುಟ್ಟಲಿಲ್ಲ.

ಅಂದರೆ ಸುವರ್ಣ ವಾಹಿನಿಯಲ್ಲಿ ಸುದೀಪ್ ಶುರುವಿಟ್ಟ ಬಿಗ್‌ಬಾಸ್‌ನ ಬಿಸಿ ಶಿವಣ್ಣ, ಶ್ರೀನಗರ ಕಿಟ್ಟಿ, ರವಿಚಂದ್ರನ್ ಥರದ ಘಟಾನುಘಟಿಗಳನ್ನೇ ಥರಗುಟ್ಟಿಸಿತ್ತು. ದೊಡ್ಡ ದೊಡ್ಡ ಬ್ಯಾನರ್‌ಗಳೇ ತಮ್ಮ ಚಿತ್ರಗಳ ಬಿಡುಗಡೆಯನ್ನು ಮುಂದೂಡಿದವು. ಇದು ಕೇವಲ ಬಿಗ್‌ಬಾಸ್ ರಿಯಾಲಿಟಿ ಶೋನ ಪರಿಣಾಮವಾಗಿರಲಿಲ್ಲ, ಇದಕ್ಕೆ ಪ್ರತಿಯಾಗಿ ನಟ ರಮೇಶ್ ಜೀ ಕನ್ನಡದಲ್ಲಿ 'ವೀಕೆಂಡ್ ವಿತ್ ರಮೇಶ್...' ಎಂಬ ಮತ್ತೊಂದು ರಿಯಾಲಿಟಿ ಶೋ ಆರಂಭಿಸಿದ್ದು ಅಳಿದುಳಿದ ಪ್ರೇಕ್ಷಕರನ್ನೂ ಥೇಟರಿಗೆ ಬರದಂತೆ ಟೀವಿ ಪರದೆಯೆದುರು ಕಟ್ಟಿ ಹಾಕಿತು.

ವೀಕೆಂಡ್ ವಿತ್....!

ಏಕೆಂದರೆ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದ ಪರಿಕಲ್ಪನೆಯೇ ಕೊಂಚ ಭಿನ್ನವಾಗಿತ್ತು. ಅದು **Wall of Fame** ಅಂದರೆ ಜನಪ್ರಿಯ ವ್ಯಕ್ತಿಗಳ ಬದುಕಿನ ಅಸಲೀ ವೃತ್ತಾಂತಗಳನ್ನು ಅವಲಂಬಿಸಿದ್ದು. ಪುನೀತ್‌ನಂಥ ಸ್ಟಾರ್ ಒಬ್ಬನನ್ನು ಕೂರಿಸಿಕೊಂಡು ಆತನ ಬಾಲ್ಯ, ಮನೆ, ಮಡದಿ, ಮಕ್ಕಳು, ಗೆಳೆಯರು, ಆತನ ಅಭಿರುಚಿ, ಬದುಕಿನ ವೈಪರೀತ್ಯ ವಿರೋಧಿಗಳು, ತೀರ ಖಾಸಗಿ ಎನಿಸುವಂತ ವಿಷಯಗಳ ಬಗ್ಗೆ ಯಾರಿಗೆ ತಾನೇ ಆಸಕ್ತಿಯಿರುವುದಿಲ್ಲ?

ರಮೇಶ್ ಕೇವಲ ಪುನೀತ್‌ರನ್ನಷ್ಟೇ ಅಲ್ಲ ಅರ್ಜುನ್ ಸರ್ಜಾ, ರವಿಚಂದ್ರನ್, ಯಶ್ ಮುಂತಾದ ಕನ್ನಡದ ಒಬ್ಬೊಬ್ಬರೇ ಹೀರೋಗಳನ್ನು ಕರೆಸಿ ಅವರ ಬದುಕಿನ ಮತ್ತೊಂದು ಮಜಲನ್ನು ಅನಾವರಣಗೊಳಿಸತೊಡಗಿದ್ದು ಪ್ರತಿ ಶನಿವಾರ ಮತ್ತು ಭಾನುವಾರ ಬಿಗ್‌ಬಾಸ್‌ಗೆ ಪರ್ಯಾಯ ಪ್ರೇಕ್ಷಕ ಸಮೂಹವೊಂದನ್ನು ಹುಟ್ಟಿ ಹಾಕಿತು. ಇಂಥ ಸ್ಟಾರ್, ಗ್ಲಾಮರ್‌ಗಳ ಮಧ್ಯೆ, ತೀರ ಭಿನ್ನವಾಗಿ ಮೂಡಿಬಂದದ್ದು ಪಬ್ಲಿಕ್ ಟೀವಿಯ ರೂವಾರಿ ರಂಗನಾಥ್ ಯಾನೇ ರಂಗಣ್ಣನ ನಿಜ ಬದುಕಿನ ಕತೆ. ವರ್ಚಸ್ವೀ ಪತ್ರಕರ್ತನೊಬ್ಬನ ಬದುಕು ಎಷ್ಟೊಂದು ಕುತೂಹಲಕರವಾಗಿರುತ್ತದೆ ಎಂಬುದಕ್ಕೆ, ಸಿಕ್ಕ ಟಿಆರ್‌ಪಿಯೇ ಪುರಾವೆಯಂತಿತ್ತು.

ಒಂದೆಡೆ ಸುದೀಪ್‌ನ ಬಿಗ್‌ಬಾಸ್ ಮತ್ತೊಂದೆಡೆ

25 ರೂ.ಗೆ ತಮಿಳು ಸಿನಿಮಾ ಮತ್ತು ಅಮ್ಮಾ ಕಳಕಳಿ!





ಕನ್ನಡದ ಸದ್ಯದ ದುರ್ಗತಿ ತಮಿಳು ಚಿತ್ರರಂಗಕ್ಕೇನಿಲ್ಲ, ಅದಿನ್ನೂ ಸಮೃದ್ಧವಾಗೇ ಉಳಿದಿದೆ. ಹಾಗಿದ್ದೂ ಹೊಸ ಪ್ರತಿಭೆಗಳಿಗೆ, ಅಸಹಾಯಕ ಪ್ರಯೋಗಗಳಿಗೆ ದೊಡ್ಡ ಬ್ಯಾನರ್‌ಗಳು, ದೊಡ್ಡ ಹೀರೋಗಳಿಂದ ಹಿನ್ನಡೆಯಾಗಬಾರದೆಂಬ ಕಳಕಳಿ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರಿಗೆ.


ಅದಕ್ಕೆಂದು ಮುಚ್ಚಿಹೋಗಿದ್ದ ಹಳೆಯ ಥೇಟರುಗಳನ್ನು ಸರ್ಕಾರವೇ ಖರೀದಿಸಿತು. ಅವುಗಳನ್ನು ಸರ್ಕಾರದ ವೆಚ್ಚದಲ್ಲೇ ನವೀಕರಿಸಲಾಯಿತು. ಸಾಲದೆಂಬಂತೆ ಮುಚ್ಚಿಹೋಗಿದ್ದ ಕಲ್ಯಾಣಮಂಟಪಗಳನ್ನೇ ಸಿನಿಮಾ ಮಂದಿರಗಳಾಗಿ ಪರಿವರ್ತಿಸಲಾಯಿತು. ಇಂಥ ಚಿತ್ರಮಂದಿರಗಳಲ್ಲಿ ಟಿಕೆಟ್ ಒಂದರ ಬೆಲೆಯನ್ನು ಕೇವಲ 25 ರೂಪಾಯಿಗೆ ಇಳಿಸಲಾಯಿತು. ಇದರರ್ಥ ಜನಸಾಮಾನ್ಯರಿಗೂ ಸಿನಿಮಾ ತಲುಪಬೇಕು ಮತ್ತು ಹೊಸ ಪ್ರಯೋಗಗಳಿಗೆ, ಸಣ್ಣಪುಟ್ಟ ಸಿನಿಮಾಗಳಿಗೆ ಥೇಟರುಗಳು ಸಿಗುವಂತಾಗಬೇಕು.

ನಮ್ಮಲ್ಲಿ ಸರ್ಕಾರಿ ಸಹಾಯಧನಕ್ಕೆ ಪರ್ಯಾಯವಾದ ಕಾರ್ಯಕ್ರಮವಿದು. ತಮಿಳು ಚಿತ್ರರಂಗದ ಉಳಿವಿಗಾಗಿ ಜಯಲಲಿತಾ ಕಳಕಳಿಯಿದು. ಇಂಥ ಕಾಳಜಿಯ ಲವಲೇಶವಾದರೂ ನಮ್ಮಲ್ಲಿ ಕಾಣಿಸುತ್ತಾ?

ಪುನೀತ್, ರಾಘು ಅವಮಾನ ತಾಳಲಾರದೆ ಎದ್ದು ನಡೆದರಂತೆ!
ಸಿಂಗಂ ರಿಟರ್ನ್ಸ್ ಮತ್ತು ನ್ಯೂಸ್ ಚಾನಲ್ಲುಗಳ ದೋಖಾ







ಸುವರ್ಣ, ಜೀ ಕನ್ನಡ, ಈ ಟೀವಿಯಂಥ ಎಂಟರ್‌ಟೇನ್‌ಮೆಂಟ್ ಚಾನಲ್‌ಗಳೇ ನ್ಯೂಸ್ ಚಾನಲ್‌ಗಳ ಏಟಿಗೆ ಥರಗುಟ್ಟಿ ಸ್ಟಾರ್‌ಗಳನ್ನು ಕರೆಸಿ ರಿಯಾಲಿಟಿ ಶೋ ನಡೆಸಬೇಕಾದ ದುರ್ಗತಿಗಿಳಿದಿರುವಾಗ ಇನ್ನು ಕನ್ನಡ ಸಿನಿಮಾಗಳ ಪಾಡು ಏನಾಗಬೇಡ?

ಈಗ ನಡೆದಿರುವುದು ಟೀವಿ ವಿರುದ್ಧದ ಸಿನಿಮಾ ಕಾಳಗವಷ್ಟೇ ಅಲ್ಲ, ಅದು ಮನರಂಜನಾ ಚಾನಲ್ಲುಗಳ ವಿರುದ್ಧದ ನ್ಯೂಸ್ ಚಾನಲ್ಲುಗಳ ಆರ್ಭಟ ಕೂಡ. ನಾಯಿಕೊಡೆಗಳಂತೆ ಹುಟ್ಟಿಕೊಂಡ ನ್ಯೂಸ್‌ಚಾನಲ್ಲುಗಳ ಟಿಆರ್‌ಪಿ ದಾಹಕ್ಕೆ ತಕ್ಕಂತೆಯೇ ದಿನಕ್ಕೊಂದು ಗಿಮ್ಮಿಕ್ ಸೃಷ್ಟಿಯಾಗುತ್ತವೆ. ಸಿನಿಮಾ ಸಂಬಂಧಿ ಸಣ್ಣಪುಟ್ಟ ವಿವಾದಗಳನ್ನೂ ದೊಡ್ಡದು ಮಾಡಿ ದಿನವಿಡೀ ಪ್ಯಾನಲ್ ಡಿಸ್ಕಷನ್ ನಡೆಸುವ ನ್ಯೂಸ್ ಚಾನಲ್ಲುಗಳು ಪ್ರತಿ ಸಂಜೆಯಾಯಿತೆಂದರೆ ತೆಲುಗು, ತಮಿಳು, ಹಿಂದಿ ಚಿತ್ರಗಳ ಕುರಿತಂತೆ ವಿಶೇಷ ಪ್ರೋಗ್ರಾಂ ಮಾಡುತ್ತವೆ.

ಅದರಲ್ಲೂ ನಾಲ್ಕೈದು ಭಾಷೆಗಳಲ್ಲಿ ತನ್ನದೇ ನ್ಯೂಸ್ ಚಾನಲ್ಲುಗಳನ್ನು ನಡೆಸುವ ಕನ್ನಡದ ಪ್ರಮುಖ ನ್ಯೂಸ್ ಚಾನಲ್ ವಾರಕ್ಕೆ ಕಮ್ಮಿಯೆಂದರೂ ಕನಿಷ್ಠ ಮೂರು ತೆಲುಗು ಚಿತ್ರಗಳ ಬಗ್ಗೆ ವಿಶೇಷ ಕಾರ್ಯಕ್ರಮ ಬಿತ್ತರಿಸುತ್ತದೆ. ತೆಲುಗಿನ ಪುಡಿ ಪುಕ್ಕಾ ನಟರುಗಳ ಬಗ್ಗೆಯೂ ಗಂಟೆ, ಅರ್ಧ ಗಂಟೆಯ ವಿಶೇಷ ಕಾರ್ಯಕ್ರಮ. ಅದು ತಪ್ಪಿದರೆ ತಮಿಳು ನಟರು, ಚಿತ್ರಗಳ ಬಗ್ಗೆ ವಿಶೇಷ ಎಪಿಸೋಡು. ಈ ಬಗ್ಗೆ ಕನ್ನಡದ ಕಳಕಳಿಯಿಂದ ಯಾರೋ ಕೇಳಿದ್ದಕ್ಕೆ ಆ ಟೀವಿಯ ಸ್ಥಳೀಯ ಪ್ರಮುಖರೊಬ್ಬರು "ಏನ್ರೀ ಮಾಡೋದು? ಅದು ಪ್ಯಾಕೇಜು, ತೆಲುಗಿನಲ್ಲಿ ಒಂದು ಪ್ರೋಗ್ರಾಂ ಬಂತೆಂದರೆ ಅದನ್ನೂ ಕನ್ನಡದಲ್ಲಿ ಬಿತ್ತರಿಸಬೇಕೆಂಬ ಷರತ್ತಿನ ಮೇರೆಗೇ ಪ್ಯಾಕೇಜ್ ಡೀಲಾಗಿರುತ್ತದೆ. ನಾವು ತಾನೇ ಏನು ಮಾಡಲು ಸಾಧ್ಯ...?" ಎಂದರಂತೆ.

ಹೀಗೆಂದು ಆ ಟೀವಿಯವರೇ ತಲೆ ಚಚ್ಚಿಕೊಳ್ಳುತ್ತಿರುವಾಗ ಕನ್ನಡದ ನಟರು, ಸಿನಿಮಾಗಳ ಬಗ್ಗೆ ವಿಶೇಷ ಕಾರ್ಯಕ್ರಮಗಳೇ ನ್ಯೂಸ್ ಚಾನಲ್ಲುಗಳಲ್ಲಿ ಅಪರೂಪ ಎನಿಸಿಬಿಟ್ಟಿವೆ. ಇದರ ಫಲವೆಂಬಂತೆ ತೆಲುಗು-ತಮಿಳು ಚಿತ್ರಗಳು ತಮ್ಮ ಕರ್ನಾಟಕದ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಿವೆ. ತೆಲುಗಿನ ಮಗಧೀರ, ಅರುಂಧತಿಯಂಥ ಚಿತ್ರಗಳು ಸುದೀಪ್, ದರ್ಶನ್ ಚಿತ್ರಗಳಿಗೆ ಸರಿಸಮನಾಗಿ ದುಡ್ಡು ಬಾಚುತ್ತಿವೆ. ಸಣ್ಣಪುಟ್ಟ ತೆಲುಗು-ತಮಿಳು ಚಿತ್ರಗಳ ಕರ್ನಾಟಕದ ಗಳಿಗೆಯೇ 80 ಲಕ್ಷದಿಂದ 1 ಕೋಟಿ ಮುಟ್ಟಿದೆ. ದೊಡ್ಡ ಹೀರೋಗಳ ಚಿತ್ರಗಳು 2 ರಿಂದ ಮೂರು ಕೋಟಿಯ ತನಕ ಗಳಿಸುತ್ತವೆ. ತೀರ ಇತ್ತೀಚೆಗೆ 'ಸಿಂಗಂ ರಿಟರ್ನ್ಸ್' ಎಂಬ ಚಿತ್ರವೊಂದೇ 4 ಕೋಟಿಗೆ ಮಾರಾಟವಾಗುತ್ತದೆ ಎಂದರೆ ಪರಭಾಷೆ ಚಿತ್ರಗಳ ಆರ್ಭಟ ಇನ್ನೆಷ್ಟಿರಬೇಡ?

ಇಂಥಾದ್ದರಲ್ಲಿ ಸುದೀಪ್, ಪುನೀತ್, ದರ್ಶನ್ ಥರದ ಸ್ಟಾರ್‌ಗಳೇ ಯಾವ ಪರಿ ಕಂಗಾಲು ಬಿದ್ದಿದ್ದಾರೆಂದರೆ ಅವರಿಗೆ ಕರ್ನಾಟಕದಲ್ಲೇ ತೆಲುಗು, ತಮಿಳು ಸ್ಟಾರ್‌ಗಳ ಜೊತೆ ಅಳಿವು ಉಳಿವಿನ ಹೋರಾಟ. ಇತ್ತೀಚೆಗೆ ಚೆನ್ನೈನಲ್ಲಿ ಸಿನಿಮಾ ಪ್ರಶಸ್ತಿ ಸಮಾರಂಭವೊಂದಕ್ಕೆ ಹೋಗಿದ್ದ ಪುನೀತ್ ಮತ್ತು ರಾಘವೇಂದ್ರ ರಾಜ್‌ಕುಮಾರ್‌ಗೆ ಎಂಥಾ ಆಘಾತ ಕಾದಿತ್ತೆಂದರೆ ತೆಲುಗು ಹಾಡೊಂದಕ್ಕೆ ಕನ್ನಡದ ಮುರಳಿಯಂಥ ಹೀರೋಗಳಿಂದ ಡ್ಯಾನ್ಸ್ ಮಾಡಿಸಲಾಗಿತ್ತು. ಕನ್ನಡದ ಹೀರೋಗಳೇ ತೆಲುಗು ಹಾಡಿಗೆ ಕುಣಿಯ ಹೊರಟರೆ ಅದಿನ್ನೆಂಥಾ ಅವಮಾನ?

ಅವಮಾನ ಎದುರಿಸಲಾಗದೆ ಪುನೀತ್ ಮತ್ತು ರಾಘು ಅರ್ಧಕ್ಕೆ ಎದ್ದು ಹೊರನಡೆದರಂತೆ!

...ನ ವಾಲ್ ಆಫ್ ಫೇಮ್, ಎರಡೂ ಶನಿವಾರ ...ಭಾನುವಾರ ರಾತ್ರಿ 8ಕ್ಕೇ ಶುರುವಾಗುತ್ತವೆ. ಅದು ...ಯುತೆಂದರೆ ಇದು, ಇಲ್ಲೂ ಬೋರು ಹೊಡೆದರೆ ...ಯಾಗಿ ಕನ್ನಡ ಸಿನಿಮಾಗಳತ್ತ ಪ್ರೇಕ್ಷಕನ ಚಿತ್ತ ...ಹರಿಯಬೇಡ?

...ಮತ್ತು ಶಿವಣ್ಣನ 'ಆರ್ಯನ್' ಗಲ್ಲಾಪೆಟ್ಟಿಗೆಯಲ್ಲಿ ...ಬಿತ್ತೋ, ಆಗಲೇ ನಿರ್ಮಾಪಕ ವಲಯಕ್ಕೆ ಬಿಸಿ ...ತ್ತು. ಬೆನ್ನಲ್ಲೇ ಶ್ರೀನಗರ ಕಿಟ್ಟಿಯ 'ಬಹುಪರಾಕ್' ...ಮಲಗಿದ್ದು ಮತ್ತಷ್ಟು ಆತಂಕ ಹುಟ್ಟಿಸಿತು. ತೀರ ... ಭಾರೀ ಪ್ರಚಾರ ಗಿಟ್ಟಿಸಿಯೇ ಶರಣ್‌ನ 'ಅಧ್ಯಕ್ಷ' ...ಯಾಯಿತಾದರೂ ಅದು ಶುಕ್ರವಾರ, ಶನಿವಾರ ...ಭಾನುವಾರದ ಸಂಜೆಯ ಶೋಗಳಿಗೆ ಇರಬೇಕಿದ್ದ ...ಳಿಯೇ ಕಾಣಿಸಲಿಲ್ಲ. ಹೌಸ್‌ಫುಲ್ ಬೋರ್ಡ್ ...ಬಿದ್ದಿತ್ತಾದರೂ ಟಿಕೆಟ್ಟು ಕಾಳಸಂತೆಕೋರರಿಗೆ ...ಆಮದನಿಯಿರಲಿಲ್ಲ.

FSS ಬಾಕ್ಸ್‌ಆಫೀಸ್

...ವುದೇ ಹೊಸ ಚಿತ್ರವೊಂದು ಬಿಡುಗಡೆಯಾ... ಅದರ ಭವಿಷ್ಯ ನಿರ್ಧಾರವಾಗುವುದೇ ಶುಕ್ರವಾರ, ...ಮತ್ತು ಭಾನುವಾರದ ಶೋಗಳಿಂದ. ಚಿತ್ರವೊಂದು ...ರೆಕಂಡು ಸಹಜ ಕುತೂಹಲಕ್ಕೆಂದು ಬರುವ ... ಶನಿವಾರ ಮತ್ತು ಭಾನುವಾರದ ಸಂಜೆಯು ... ಆ ಚಿತ್ರದ ಭವಿಷ್ಯದ ದಿಕ್ಸೂಚಿಯಾಗುತ್ತದೆ. ...ನ್ ಪರಿಭಾಷೆಯಲ್ಲಿ ಇದನ್ನು FSS ಅಂದರೆ ...Saturday, Sunday ಯ ಬಾಕ್ಸ್‌ಆಫೀಸ್ ...

...ದ್ದರಲ್ಲಿ ವಾರಾಂತ್ಯದ ಮನರಂಜನೆಯನ್ನೇ ಟೀವಿ ... ಶೋಗಳು ನುಂಗಿಹಾಕಿ ಅದಕ್ಕೆ ಸಿನಿಮಾರಂಗದ ...ಕುದುರೆಗಳನ್ನೇ ಮುಂದಿಟ್ಟುಕೊಂಡರೆ ಕೋಟಿ ...ರಿದು ಸಿನಿಮಾ ಮಾಡಿ ಕೈಸುಟ್ಟುಕೊಂಡ ಕನ್ನಡ ...ಪಕರ ಪಜೀತಿ ಏನಾಗಬೇಡ?

...ನ್ನು ಸೂಕ್ಷ್ಮವಾಗೇ ಗಮನಿಸಿ ಮೊದಲು ...ದ್ದು ಹಿರಿಯ ನಿರ್ದೇಶಕ ರಾಜೇಂದ್ರಸಿಂಗ್ ಬಾಬು. ... ರಮೇಶರ ರಿಯಾಲಿಟಿ ಶೋಗಳಷ್ಟೆ ಅಲ್ಲದೆ ... ತಿಂಗಳು ಗೋಲ್ಡನ್ ಗಣೇಶ್ ಈ ಟೀವಿಯಲ್ಲಿ ...ಮ ರಿಯಾಲಿಟಿ ಶೋ ನಡೆಸಲು ಹೊರಟ ಸುದ್ದಿ ...ಗುತ್ತಿದ್ದಂತೆಯೇ ಬಾಬು ಘರ್ಜನೆ ಮೊಳಗಿದೆ. ... ಅಮೂಲ್ಯ ಬಾಕ್ಸ್ ಆಫೀಸ್ ಅವಕಾಶವನ್ನು ... ಸ್ಟಾರ್‌ಗಳ ಮೂಲಕ ಎಂಟರ್‌ಟೇನ್‌ಮೆಂಟ್ ...ಳು ಕಬಳಿಸುತ್ತಿರುವುದು ಕನ್ನಡ ಚಿತ್ರರಂಗಕ್ಕೇ ...ಎಂಬ ಬಾಬು ಆಕ್ರೋಶಕ್ಕೆ ಕನ್ನಡ ಬಹುತೇಕ ...ಪಕರೆಲ್ಲ ದನಿಗೂಡಿಸಿದ್ದಾರೆ.

...ಬಿಗ್ ಬ್ಯಾನರ್‌ಗಳ ಮೌನ

...ಮತ್ತು ಪ್ರೈಮ್ ಟೈಮ್‌ನ ರಿಯಾಲಿಟಿ ಶೋಗಳಲ್ಲಿ ... ಸ್ಟಾರ್‌ಗಳ ಪಾತ್ರಕ್ಕೆ ಕಡಿವಾಣ ಹಾಕುವುದಕ್ಕೆ ... ಹೆಚ್ಚಾಯಿತೋ ಅದರ ವಿರುದ್ಧ ಮೊದಲು ...ದ್ದು ಶಿವಣ್ಣ. ಒಬ್ಬ ಸಿನಿಮಾ ನಟನಿಗೆ ಏನು ...ಕು ಏನು ಮಾಡಬಾರದು ಎಂದು ನಿರ್ಬಂಧಿಸಲು ಇವರು ಯಾರು? ಎಂಬಂತೆ ಶಿವಣ್ಣ ಹರಿಹಾಯ್ದರು. ಬೆನ್ನಲ್ಲೇ ರಮೇಶ್ ತಾನು ಯಾವುದೇ ಕಾರಣಕ್ಕೂ 'ವೀಕೆಂಡ್ ವಿತ್...' ಕೈಬಿಡಲಾರೆ ಎಂದು ತಿರುಗೇಟು ಕೊಟ್ಟರು. ಆದರೆ ಮಿಕ್ಕ ನಟರುಗಳ್ಯಾರೂ ಶಿವಣ್ಣ ಮತ್ತು ರಮೇಶ್ ವಾದವನ್ನು ಬೆಂಬಲಿಸಲೂ ಇಲ್ಲ, ಧಿಕ್ಕರಿಸಲೂ ಇಲ್ಲ. ಇದಕ್ಕೆ ಪೂರಕವೋ ಎಂಬಂತೆ ಆಗಸ್ಟ್ 20ರ ಬೆಳಗ್ಗೆ ವಾಣಿಜ್ಯ ಮಂಡಳಿಯಲ್ಲಿ ಈ ಬಗ್ಗೆ ನಡೆಯಬೇಕಿದ್ದ ಸಭೆಯೂ ನಡೆಯಲಿಲ್ಲ.

ಹಾಗಂತ ನಿರ್ಮಾಪಕರ ಆಕ್ರೋಶ ತಣಿಯಲಿಲ್ಲ. ತಮ್ಮ ಹೋರಾಟ ಮುಂದುವರಿಯುತ್ತದೆ ಎಂದೇ ರಾಜೇಂದ್ರಸಿಂಗ್ ಬಾಬು ಘೋಷಿಸಿದ್ದಾರೆ. ಬಾಬು ಬೆನ್ನಿಗೆ ಎಸ್.ಎಂ. ಸುರೇಶ್, ಸೂರಪ್ಪ ಬಾಬು, ಬಾ.ಮಾ. ಹರೀಶ್, ಉಮೇಶ್ ಬಣಕಾರ್ ಥರದ ಒಂದು ಡಜನ್ ನಿರ್ಮಾಪಕರು ನಿಂತಿದ್ದಾರೆ. ಇವರೆಲ್ಲ ಹೆಚ್ಚೂ ಕಮ್ಮಿ ಬಸವಳಿದ ನಿರ್ಮಾಪಕರೆ. ದೊಡ್ಡ ಬ್ಯಾನರ್‌ನ ಕೊಬ್ರಿ ಮಂಜು, ಮುನಿರತ್ನಂನಾಯ್ಡು, ರಾಕ್‌ಲೈನ್, ರಾಮು ಥರದವರಿಗೆ ದೊಡ್ಡ ಸ್ಟಾರ್‌ಗಳನ್ನು ತಡವಿಕೊಳ್ಳುವುದು ಬೇಕಿಲ್ಲ. ಫಿಲ್ಮ್‌ಛೇಂಬರ್ ಅಧ್ಯಕ್ಷ ಗಂಗರಾಜು ಜನ್ಮಾಪಿ ಗಟ್ಟಿ ನಿರ್ಧಾರಕ್ಕೆ ಕೈಯಿಟ್ಟವರಲ್ಲ. ಶುಕ್ರ, ಶನಿ, ಭಾನುವಾರಗಳ ಪ್ರತಿ ರಾತ್ರಿ 8ಕ್ಕೆ ಟೀವಿಗಳ ಮುಂದೆ ಒಬ್ಬೊಬ್ಬ ಸ್ಟಾರ್ ಹೀಗೆ ರಿಯಾಲಿಟಿ ಶೋಗೆ ನಿಂತರೆಂದರೆ ದೊಡ್ಡ ಹೀರೋಗಳಿಲ್ಲದೆ, ದೊಡ್ಡ ಬ್ಯಾನರ್‌ಗಳಿಲ್ಲದೆ ಸಿನಿಮಾ ಮಾಡಲು ನಿಂತ ಪ್ರತಿಭಾವಂತರಿಗೆ ಅಪಾಯ ತಪ್ಪಿದ್ದಲ್ಲ.



ಕನ್ನಡ ದುರ್ಗತಿ

ಕನ್ನಡದ ದುರಂತವೆಂದರೆ ತಮಿಳುನಾಡಿನ 2700 ಚಿತ್ರಮಂದಿರಗಳು, ಆಂಧ್ರದ ಮೂರು ಸಾವಿರದಷ್ಟು ಥೇಟರುಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿರುವುದು ಕೇವಲ 600 ಮಾತ್ರ. ಒಂದಾನೊಂದು ಕಾಲಕ್ಕೆ 1200 ಥೇಟರುಗಳಿದ್ದವಂತೆ, ಈಗದು 600ಕ್ಕೆ ಕುಸಿದು ಬಿಡುಗಡೆಯಾಗುವ ಕನ್ನಡ ಚಿತ್ರಗಳೇನಿದ್ದರೂ ಕೇವಲ 150 ರಿಂದ 200 ಥೇಟರುಗಳಿಗಷ್ಟೇ ಸೀಮಿತಗೊಳ್ಳಬೇಕು. ಆದರಲ್ಲೂ ಮೊದಲ ವಾರ ಮತ್ತು 2ನೇ ವಾರಗಳು ಚಿತ್ರಗಳ ಪಾಲಿಗೆ ನಿರ್ಣಾಯಕ. ಹಿಂದಿಯಲ್ಲಿ ಸಲ್ಮಾನ್, ಆಮೀರ್ ಖಾನ್‌ಗಳೂ ಇಂಥ ರಿಯಾಲಿಟಿ ಶೋಗಳಿಗೆ ಕೈಯಿಟ್ಟರಾದರೂ ಅದು ಹಿಂದಿಯ ಅಗಾಧ ಮಾರುಕಟ್ಟೆ ಮತ್ತು ವಿಸ್ತಾರದಿಂದಾಗಿ ನಷ್ಟ ಗೊತ್ತಾಗಲಿಲ್ಲ.

ಆದರೆ ಕನ್ನಡದ ಪರಿಸ್ಥಿತಿ ಹಾಗಿಲ್ಲ. ಈಗಾಗಲೇ ಕನ್ನಡದ ಅರ್ಧಕರ್ಧ ಮಾರುಕಟ್ಟೆಯನ್ನು ತಮಿಳು, ತೆಲುಗು ಚಿತ್ರಗಳು ಆಕ್ರಮಿಸಿಬಿಟ್ಟಿವೆ. ಮಾಮೂಲಿ ಚಿತ್ರವೊಂದರ ಬಿಡುಗಡೆಗೇ ಅಂದರೆ ಪ್ರೊಡಕ್ಷನ್ ಕಾಸ್ಟ್ ಅನ್ನು ಹೊರತುಪಡಿಸಿಯೂ ಜಾಹಿರಾತು, ವಾಲ್‌ಪೋಸ್ಟರ್‌ಗೆಂದೇ ಕನಿಷ್ಠ 50ರಿಂದ 60 ಲಕ್ಷ ಬೇಕು. ಹಿಂದಾದರೆ ಟೀವಿಗಳು ಪೈಪೋಟಿಗೆ ಬಿದ್ದು ಸ್ಯಾಟ್‌ಲೈಟ್ ಹಕ್ಕನ್ನು ಖರೀದಿಸುತ್ತಿದ್ದವು. ಸಿನಿಮಾದ ಅರ್ಧ ಬಂಡವಾಳ ಟೀವಿಗಳಿಂದಲೇ ಬರುತ್ತಿತ್ತು. ಈಗ ಅನೇಕ ಚಾನಲ್‌ಗಳು ಸಣ್ಣಪುಟ್ಟ ಸಿನಿಮಾಗಳತ್ತಲೇ ತಲೆ ಹಾಕುತ್ತಿಲ್ಲ. ಅಂಥಾದ್ದರಲ್ಲಿ ಪ್ರೇಕ್ಷಕನೇ ಥೇಟರಿಗೆ ಬರುತ್ತಿಲ್ಲ ವೆಂದರೆ ಅದಕ್ಕೆ ಹೀರೋಗಳೇ ಕಾರಣವಾಗುತ್ತಾರೆಂದರೆ ಹಿರಿಯ ನಿರ್ದೇಶಕ ಬಾಬು ವಾದದಲ್ಲಿ ನಿಜಕ್ಕೂ ಅರ್ಥವಿರಲೇಬೇಕು.

ರಾತ್ರಿ 8ರ ಬದಲು ಕನಿಷ್ಠ 9 ಗಂಟೆಗಾದರೂ ಸ್ಟಾರ್‌ಗಳ ರಿಯಾಲಿಟಿ ಶೋ ಶುರುವಾಗಲೆಂಬ ... ವಾದಕ್ಕೆ ಕನ್ನಡ ಜನತೆ ಕೈಜೋಡಿಸಬೇಕು.

● ರಾ. ಸೋಮನಾಥ್




...ಪ್; ಕೆಪಿಎಲ್, ಸಿಸಿಎಲ್, ಸಲ್ಮಾನ್‌ಖಾನ್ ಇತ್ಯಾದಿಗಳಾಚೆಗೆ...!

...ವಿ ರಿಯಾಲಿಟಿ ಶೋಗಳೇ ಕಾಲಕ್ರಮೇಣ ಸಿನಿಮಾ ಬಾಕ್ಸ್‌ಆಫೀಸ್‌ಗಳ ಪಾಲಿಗೆ ಯಮಕಂಟಕವಾಗಿ ...ಲಿವೆಯಾ?

...ಮ ಅಪ್ಪುತ್ತದೆ ಒಂದು ಸಮೀಕ್ಷೆ. ವರ್ಷದ ಮೂರು ತಿಂಗಳು ಪೂರ್ತಿ ಐಪಿಎಲ್ ಕ್ರಿಕೆಟ್ ಹಾವಳಿ ತಪ್ಪಿದ್ದಲ್ಲ. ...ಮೀರಿ ಸಿನಿಮಾಗಳು ಮೂರ್‍ಕಾಸು ಬಾಚಲು ಹೊರಟರೆ ಟೀವಿಗಳಲ್ಲಿ ಒಂದಲ್ಲ ಒಂದು ರಿಯಾಲಿಟಿ ಶೋ ...ಗುತ್ತದೆ. ಈಗ ಸುದೀಪ್‌ನ ಬಿಗ್‌ಬಾಸ್ ಮುಗಿಯುತ್ತಿದ್ದಂತೆ ಹಿಂದಿಯಲ್ಲಿ ಸಲ್ಮಾನ್‌ಖಾನ್‌ನ ಬಿಗ್‌ಬಾಸ್ ...8 ಶುರುವಾಗುತ್ತದೆ. ಎಲ್ಲ ಕನ್ನಡಿಗರು ಇದಕ್ಕೆ ಮಾರುಹೋಗದೆ ಇದ್ದರೂ ಕನಿಷ್ಠ ಶೇ. 30ರಷ್ಟಾದರೂ ಕನ್ನಡ ...ಕ್ಷಕರನ್ನದು ಸೆಳೆದೇ ಸೆಳೆಯುತ್ತದೆ. ಏಕೆಂದರೆ ಸಲ್ಮಾನ್ ಸನ್ನಿಲಿಯೋನ್ ಥರದ ಒಂದಲ್ಲ ಒಂದು ಸೆಕ್ಸ್‌ಬಾಂಬನ್ನು ...ಗೆ ಬಳಸದೇ ಇರಲಾರ!

...ಷ್ಟು ಹೊರತುಪಡಿಸಿದಂತೆ ಕನ್ನಡದ ಟೀವಿಗಳಲ್ಲಿ ಇಷ್ಟರಲ್ಲೇ ಕೆಪಿಎಲ್ ಎಂಬ ಮತ್ತೊಂದು ಕ್ರಿಕೆಟ್ ಶೋ ...ರಲಿದೆ. ಅದಕ್ಕೂ ಮುನ್ನ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಅಂದರೆ ಸಿಸಿಎಲ್ ಎಂಬ ಸಿನಿಮಾ ನಟರದ್ದೇ ...ದ, ಕ್ರಿಕೆಟ್ ಶೋ ಬೇರೆ. ಇದೆಲ್ಲವನ್ನೂ ಮೀರಿ ಸಿನಿಮಾಗಳು ಕೊಂಚ ಉಸಿರಾಡುವ ಹೊತ್ತಿಗೆ ಮಕ್ಕಳ ...ಟೆಗೆ ರಜೆ, ಆ ನಂತರ ಮಳೆಗಾಲ ಶುರುವಾಗುತ್ತದೆ. ಇಂಥದ್ದರಲ್ಲಿ ಇವೆಲ್ಲವನ್ನೂ ತಪ್ಪಿಸಿ ಕನ್ನಡ ಚಿತ್ರಗಳು ...ಕೆಂದರೆ ಎಲ್ಲಿಂದ?

...ಡ್ ಬ್ಯಾನರ್, ಸ್ಟಾರ್‌ಗಳಿಲ್ಲದೆ ಕೇವಲ ಪ್ರತಿಭೆಯನ್ನೇ ನಂಬಿ ಯಾರಾದರೂ ಸಿನಿಮಾ ಮಾಡಹೊರಟರೆ ...ಅವಕಾಶಗಳಿವೆ? ಭವಿಷ್ಯ ಎಷ್ಟೊಂದು ದುರ್ಗಮವಲ್ಲವೆ?





ಬೇಟೆಯಾಡಿದ ಚಿರತೆ

ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಅದು ನಡು ಮಧ್ಯಾಹ್ನವಾಗಿತ್ತು. ಉಷ್ಣವಲಯದ ಸೂರ್ಯ ಬೆಂಕಿಯ ಉಂಡೆಯಂತೆ ನೆತ್ತಿಯ ಮೇಲೆ ಉರಿಯುತ್ತಿದ್ದ. ಈ ಬಿಸಿಲಿನ ಧಗೆಯಲ್ಲಿ ಕಾಡು ಮೌನವಾಗಿ ಮಲಗಿತ್ತು. ಬೆಳಗ್ಗೆಯೆಲ್ಲಾ ಚಿಲಿಪಿಲಿಗುಟ್ಟುತ್ತಿದ್ದ ಹಕ್ಕಿಗಳು ಮತ್ತು ಮಂಗಗಳು ಕೂಡ ಈಗ ಮೌನವಾಗಿದ್ದವು. ಬೀಸುತ್ತಿದ್ದ ಬಿಸಿಗಾಳಿ ಅವುಗಳನ್ನು ನಿದ್ದೆಗೆ ಎಳೆಯುತ್ತಿತ್ತು.

ಕಾಡಿನ ಮರಗಳ ಕರಿನೆರಳಿನಲ್ಲಿ ಧಗೆಯ ಅನುಭವವಾಗುತ್ತಿದ್ದರೂ, ಸೂರ್ಯನ ಹೊಂಗಿರಣಗಳ ಪ್ರಖರತೆಯಿಂದ ಸ್ವಲ್ಪ ಬಿಡುಗಡೆ ಸಿಗುತ್ತಿತ್ತು. ಮರಗಳಿಂದ ಉದುರಿದ್ದ ಎಲೆಗಳು ಕಾಡಿನ ನೆಲವನ್ನೆಲ್ಲಾ ಆವರಿಸಿಕೊಂಡು ಹಳದಿ ಕಂದು ಬಣ್ಣದ ದಪ್ಪನಾದ ಪ್ರಾಕೃತಿಕ ನೆಲಹಾಸನ್ನು ಸೃಷ್ಟಿಸಿದ್ದವು. ಬೇಸಿಗೆಯಲ್ಲಿ ಒಣಗಿಹೋಗಿರುವ ಈ ಎಲೆಗಳು ಮಳೆ ಬಿದ್ದಕೂಡಲೆ ಫಲವತ್ತಾದ ಗೊಬ್ಬರವಾಗಿ ಬದಲಾಗುತ್ತದೆ. ಇಂತಹ ಎಲೆಗಳನ್ನು ಉದುರಿಸಿದ ದೈತ್ಯ ಮರಗಳು ಮುರಿದು ಬಿದ್ದು ನಾಶವಾದ ಮೇಲೂ ಆ ಎಲೆಗಳಿಂದಾದ ಗೊಬ್ಬರ ಕಾಡಿನ ಇತರ ಮರಗಳಿಗೆ ಆಹಾರವನ್ನು ಒದಗಿಸುತ್ತಲೇ ಇರುತ್ತದೆ.

ಕಾಡಿಗೆ ಮೇಯಲು ಕಳಿಸಿದ್ದ ಸಾಕುಪ್ರಾಣಿಗಳ ಕೊರಳಿಗೆ ಕಟ್ಟಿದ್ದ ಮರದ ಗಂಟೆಗಳಿಂದಾದ ಸದ್ದು ಇಲ್ಲಿನ ಅಗಾಧವಾದ ಮೌನವನ್ನು ಆಗಾಗ ಬೇಧಿಸುತ್ತಿತ್ತು. ಈ ಗಂಟೆಗಳಿಂದಾಗಿ ದನಗಾಹಿಂಗಳಿಗೆ ತಮ್ಮ ಪ್ರಾಣಿಗಳು ಇರುವ ಜಾಗವನ್ನು ಪತ್ತೆಹಚ್ಚಲು ಸುಲಭವಾಗುತ್ತಿತ್ತು. ಅದೂಅಲ್ಲದೆ ಈ ಗಂಟೆಗಳ ಸದ್ದು ಆಕ್ರಮಣ ಮಾಡಬಹುದಾದ ಕಾಡುಪ್ರಾಣಿಗಳಲ್ಲಿ ಭಯವನ್ನು ಹುಟ್ಟಿಸುತ್ತಿತ್ತು. ಆದರೆ ಆಕ್ರಮಣ ಮಾಡುವ ಪ್ರಾಣಿ ಹುಲಿ ಅಥವಾ ಚಿರತೆಯಾಗಿದ್ದರೆ, ಅದರ ಸ್ವಭಾವ ಮತ್ತು ಹಸಿವಿನ ತೀವ್ರತೆಯ ಮೇಲೆ ಈ ಗಂಟೆಗಳು ಕೆಲವೊಮ್ಮೆ ನಿರುಪಯುಕ್ತವಾಗುತ್ತವೆ.



ಅವತ್ತಿನ ಮಧ್ಯಾಹ್ನ ಅಂತಹ ಒಂದು ಘಟನೆಗೆ ಸಾಕ್ಷಿಯಾಗುವುದಿತ್ತು. ಮರದ ನೆರಳಿನಲ್ಲಿ ಮೇಯುತ್ತಿದ್ದ ಪ್ರಾಣಿಗಳ ಗುಂಪಿನ ಹೊರವಲಯದಲ್ಲಿ ದಷ್ಟಪುಷ್ಟವಾದ ಕಂದುಬಣ್ಣದ ಹೋರಿಯೊಂದು ಬಾಯಿತುಂಬಾ ಹುಲ್ಲನ್ನು ತುಂಬಿಕೊಂಡು ಮೆಲ್ಲುತ್ತಿತ್ತು. ಹುಲ್ಲನ್ನು ಕಚ್ಚಿ ಎಳೆದಾಗಲೆಲ್ಲಾ ತಲೆಯೆತ್ತಿ ಸುತ್ತಲೂ ಗಮನಿಸಿ ಯಾವುದೇ ಅಪಾಯದ ಸೂಚನೆ ಇಲ್ಲವೆಂದು ಖಾತ್ರಿಮಾಡಿಕೊಂಡು ಸಂಪೂರ್ಣ ಶಾಂತಿಯಿಂದ ತನ್ನ ಕೆಲಸ ಮುಂದುವರೆಸುತ್ತಿತ್ತು.

ಆ ಹೋರಿ ಒಮ್ಮೆ ಹಿಂತಿರುಗಿ ನೋಡಿದ್ದರೆ ಅದರ ಮನಸ್ಸಿನ ಶಾಂತಿ ಕದಡಿಹೋಗಬಹುದಿತ್ತು. ಹುಲ್ಲಿನ ಎಸಳುಗಳನ್ನು ಸ್ವಲ್ಪವೇ ಅಗಲಿಸಿ ಎರಡು ಕ್ರೂರವಾದ ಹಸಿರು ಕಣ್ಣುಗಳು ಈ ಹೋರಿಯತ್ತ ಆಸೆಯಿಂದ ನೋಡುತ್ತಿದ್ದವು. ಈ ಕಣ್ಣುಗಳು ಕಾಡಿನ ದೈತ್ಯ ಗಂಡು ಚಿರತೆಯದಾಗಿದ್ದವು. ಇದರ ಮೈಬಣ್ಣ ಹುಲ್ಲಿನ ಬಣ್ಣದ ಜೊತೆಗೆ ಹೊಂದಿಕೊಂಡು ಇದರ ಇರವನ್ನು ಮರೆಸಿತ್ತು. ನೆಲಕ್ಕೆ ಕವುಚಿ ಕುಳಿತು ಆಕ್ರಮಣಕ್ಕೆ ಸಿದ್ಧವಾಗಿತ್ತು ಈ ಚಿರತೆ.

ನಿಧಾನವಾಗಿ ಮತ್ತು ನಿಶಬ್ದವಾಗಿ ಈ ಚಿರತೆ ಹಿಂಗಾಲುಗಳನ್ನು ಎಳೆದು, ಮಾಂಸಖಂಡಗಳನ್ನು ಸೆಟೆಸಿ ಸಿದ್ಧವಾಯಿತು. ಮಾರಣಾಂತಿಕ ಆಕ್ರಮಣಕ್ಕೆ ಅನುಕೂಲವಾಗುವಂತೆ ದೇಹವನ್ನು ತೂಗಾಡಿಸಿ ಹಿಡಿತಕ್ಕೆ ತಂದುಕೊಂಡಿತು.

ನಂತರ ಕ್ಷಣಾರ್ಧದಲ್ಲಿ ಚಿರತೆಯ ದೇಹ ಗಾಳಿಯಲ್ಲಿ ತೂರಿಹೋಗಿ ಆಕ್ರಮಣ ನಡೆಯಿತು. ಆ ಹೋರಿಗೆ ಏನಾಗುತ್ತಿದೆ ಎಂದು ತಿಳಿಯುವುದರೊಳಗೆ ಅದರ ಬೆನ್ನ ಮೇಲೆ ಕುಳಿತಿದ್ದ ಚಿರತೆ ತನ್ನ ಹಲ್ಲುಗಳನ್ನು ಕುತ್ತಿಗೆಯಲ್ಲಿ ನೆಟ್ಟಿತ್ತು. ಒಂದು ಕ್ಷಣ ಹೋರಿ ತನ್ನ ದೇಹದ ಸ್ವಾಧೀನವನ್ನು ಗಳಿಸಿಕೊಂಡು ಮೇಯುತ್ತಿದ್ದ ಇತರ ಪ್ರಾಣಿಗಳ ಗುಂಪಿನ ಕಡೆ ಓಡಲು ಪ್ರಯತ್ನಿಸಿತು. ಆದರೆ ಅದರ ಪ್ರಾಣವಾಯುವಿನ ಸರಬರಾಜು ನಿಂತು, ರಕ್ತ ಧಾರಾಕಾರವಾಗಿ ಚಿಮ್ಮುತ್ತಿರುವಾಗ ಹೋರಿಯ ಪ್ರತಿರೋಧ ಕ್ಷಣಮಾತ್ರದ್ದಾಗಿತ್ತು. ದೊಡ್ಡ ಶಬ್ದದೊಂದಿಗೆ ನೆಲಕ್ಕುರುಳಿದ ಅದು ಕಾಲನ್ನು ಗಾಳಿಯಲ್ಲಿ ಜಾಡಿಸುತ್ತಾ ಶತ್ರುವನ್ನು ಓಡಿಸಲು ಯತ್ನಿಸಿತು. ಉಸಿರಿಗಾಗಿ ಚಡಪಡಿಸುವ ಗೊರಗೊರ ಸದ್ದು ಹೆಚ್ಚಾದಂತೆ ಅದರ ಕಣ್ಣುಗಳಲ್ಲಿ ಸಾವಿನ ನೆರಳು ಕಂಡುಬಂದು ಕೆಲವೇ ನಿಮಿಷಗಳಲ್ಲಿ ಅದು ಪ್ರಾಣಬಿಟ್ಟಿತು.

ಹೀಗೆ ನಾತನ್ ಎನ್ನುವ ಆ ದನಗಾಹಿ ತನ್ನ ಒಂದು ಹೋರಿಯನ್ನು ಕಳೆದುಕೊಂಡ. ಸಾಯುತ್ತಿದ್ದ ಹೋರಿ ಮಾಡಿದ ಸದ್ದಿನಿಂದ ಭಯಗೊಂಡ ಇತರ ಪ್ರಾಣಿಗಳು ಊರಿನ ಕಡೆಗೆ ದಿಕ್ಕಾಪಾಲಾಗಿ ಓಡಿಹೋದವು.

ಹತಾಶಗೊಂಡ ಚಿರತೆ

ಆದರೆ ಇದು ನಾತನ್ ಕಳೆದುಕೊಂಡ ಒಂದೇ ಪ್ರಾಣಿಯಾಗಿರಲಿಲ್ಲ. ಮುಂದಿನ ಒಂದು ತಿಂಗಳಲ್ಲಿ ಅವನ ಇತರ ನಾಲ್ಕು ಮತ್ತು ಊರಿನ ಇನ್ನಿಬ್ಬರ ತಲಾ ಎರಡು ಪ್ರಾಣಿಗಳನ್ನು ಚಿರತೆ ಬಲಿ ತೆಗೆದುಕೊಂಡಿತು. ಆಹಾರ ಇಷ್ಟು ಸುಲಭವಾಗಿ ಸಿಗುತ್ತಿರುವುದರಿಂದ ಚಿರತೆ ಇತರ ಕಾಡುಪ್ರಾಣಿಗಳನ್ನು ಬೇಟೆಯಾಡುವ ಕಷ್ಟವನ್ನು ಏಕೆ ತೆಗೆದುಕೊಳ್ಳಬೇಕೆಂದು ಈ ಊರಿನ ಸುತ್ತಮುತ್ತಲೇ ಇದ್ದುಬಿಡಲು ನಿರ್ಧರಿಸಿತು!

ಮುಂದೆ ಬಂದ ಮಳೆಗಾಲದಲ್ಲಿ ಊರಿನ ಸುತ್ತಮುತ್ತ ದನಕರುಗಳಿಗೆ ಬೇಕಾದಷ್ಟು ಮೇವು ದೊರಕತೊಡಗಿತು. ಹಾಗಾಗಿ ಸಾಕುಪ್ರಾಣಿಗಳನ್ನು ಮೇಯಿಸಲು ಕಾಡಿಗೆ ತೆಗೆದುಕೊಂಡು ಹೋಗುವ ಅಗತ್ಯವಿರಲಿಲ್ಲ. ಅವುಗಳನ್ನು ಊರಿನ ಹತ್ತಿರವೇ ಬಿಟ್ಟು ಹೆಚ್ಚು ಎಚ್ಚರಿಕೆಯಿಂದ ಕಾಯಲಾಗುತ್ತಿತ್ತು. ಇದನ್ನು ಇಷ್ಟಪಡದ ಚಿರತೆ ತನ್ನ ಆಹಾರಕ್ಕಾಗಿ ಸಾಕುಪ್ರಾಣಿಗಳ ಸಿಗಬಹುದಾದ ಜಾಗಗಳನ್ನು ಹುಡುಕತೊಡಗಿತು. ಊರಿನ ಸುತ್ತಮುತ್ತ ಕಾಡು ವಿರಳವಾಗಿ, ವಿಶಾಲವಾದ ಹೊಲಗದ್ದೆಗಳಿದ್ದುದರಿಂದ ಚಿರತೆಯ ಆಕ್ರಮಣಕ್ಕೆ ಅಡ್ಡಿ ಬರುತ್ತಿತ್ತು. ದೂರದಿಂದಲೇ ಅದು ಆಕ್ರಮಣಕ್ಕೆ ಸಿದ್ಧವಾಗಿ ಬರುತ್ತಿದ್ದುದನ್ನು ಗಮನಿಸಿದ ಜನ ಕೂಗಾಡಿ, ಕಲ್ಲನ್ನು ಎಸೆದು ಅಥವಾ ಕತ್ತಿಯನ್ನು ಝಳಪಿಸಿ ಅದನ್ನು ಹೆದರಿಸಿ ಓಡಿಸುತ್ತಿದ್ದರು. ಆಗ ಹಸಿವಿನಿಂದ ಕಂಗಾಲಾದ ಚಿರತೆಗೆ ಎರಡೇ ದಾರಿಗಳಿದ್ದವು. ಊರಿನ ಸಾಕುಪ್ರಾಣಿಗಳನ್ನು ಮರೆತು ಕಾಡಿಗೆ ಹಿಂತಿರುಗಿ ಕಾಡಪ್ರಾಣಿಗಳ ಬೇಟೆಗೆ ಯತ್ನಿಸುವುದು ಅಥವಾ ದನಗಾಹಿಂಗಳ ಬಗೆಗೆ ಹೆಚ್ಚಿನ ಆಕ್ರಮಣಕಾರಿ ಮನೋಭಾವ ತೋರುವುದು–ಈ ಎರಡರಲ್ಲಿ ಚಿರತೆ ಎರಡನೆಯ ಮಾರ್ಗವನ್ನು ಆರಿಸಿಕೊಂಡಿತು.

ಒಂದು ದಿನ ಸಂಜೆ ಚಿರತೆ ಆದಷ್ಟು ದೂರ ಮರೆಯಲ್ಲಿಯೇ ನಡೆದು ಬಂದು ಕೊನೆಗೆ ಹತ್ತಿರದಲ್ಲೇ ಇದ್ದ ಹಸುಗಳ ಕಡೆಗೆ ನುಗ್ಗಿತು. ಇದನ್ನು ನೋಡಿದ ದನಗಾಹಿಂಗಳು ಕೂಗಾಡುತ್ತ ತಮ್ಮ ಬಳಿಯಿದ್ದ ದೊಣ್ಣೆಗಳನ್ನು ಬೀಸತೊಡಗಿದರು. ಇದರಿಂದ ಹಿಂದೆ ಸರಿಯದ ಚಿರತೆ ಹಸುವಿನ ಕುತ್ತಿಗೆಯಲ್ಲಿ ತನ್ನ ಹಲ್ಲುಗಳನ್ನು ನೆಟ್ಟಿತು. ದನಗಾಹಿಂಗಳು ಕೆಲವು ನಿಮಿಷ ಕಂಗಾಲಾಗಿ ಇದನ್ನು ನೋಡುತ್ತಿರುವಷ್ಟರಲ್ಲಿ ಹಸು ಪ್ರಾಣಬಿಟ್ಟಿತ್ತು. ಸಂಭಾಳಿಸಿಕೊಂಡ ಜನ ಹಸುವಿನ ಶವವನ್ನು ಕವುಚಿ ಹಿಡಿದಿದ್ದ ಚಿರತೆಯ ಮೇಲೆ ಕೂಗಾಡುತ್ತಾ ಕಲ್ಲು ಬೀಸತೊಡಗಿದರು. ಸುತ್ತಲೂ ಕಲ್ಲುಗಳ ಸುರಿಮಳೆಯಾದಂತೆ ಚಿರತೆ ಹಸುವನ್ನು ಬಿಟ್ಟು, ಈ ಜನರತ್ತ ತನ್ನ ರಕ್ತಸಿಕ್ತ ಬಾಯಿಯಿಂದ ಗುರ್ರೆನ್ನುತ್ತಾ, ದ್ವೇಷಪೂರಿತ ಕಣ್ಣುಗಳಿಂದ ದುರುಗುಟ್ಟಿ ನೋಡಿತು. ಭಯಭೀತರಾದ ಜನ ನಾಗಾಲೋಟದಲ್ಲಿ ಅಲ್ಲಿಂದ ಓಡಿಹೋದರು.

ಫಾರೆಸ್ಟರ್ ರಾಮುವಿನ ಬೇಟೆಯ ಪ್ರಯತ್ನ

ಇಂತಹ ಪರಿಸ್ಥಿತಿಯಲ್ಲಿ ಅಲ್ಲಿನ ಜನ ಆ ಕ್ಷೇತ್ರದ ಫಾರೆಸ್ಟರ್‌ನ ಸಹಾ[…] ಕೇಳಿದರು. ರಾಮು ಎನ್ನುವ ಹೆಸರಿನ ಆ ವ್ಯಕ್ತಿಗೆ ಸ್ವಲ್ಪ ಬೇಟೆ[…] ಅನುಭವಿದ್ದುದಲ್ಲದೆ ಅವನ ಹತ್ತಿರ ಒಂದು ಸಾಧಾರಣ ಬಂದೂಕು ಕೂ[…] ಇತ್ತು. ಅರಣ್ಯ ಮತ್ತು ವನ್ಯಮೃಗಗಳನ್ನು ರಕ್ಷಣೆ ಮಾಡುವುದು ರಾಮುವಿ[…] ಕರ್ತವ್ಯವಾಗಿದ್ದರೂ ಅವನು ಆಗೀಗ ಜಿಂಕೆ ಅಥವಾ ಕಾಡುಹಂದಿಗ[…] ಬೇಟೆಯಾಡುತ್ತಿದ್ದನು. ತನ್ನ ಕೈಕೆಳಗಿನವರಾದ ಅರಣ್ಯ ರಕ್ಷಕರನ್ನು ಹೆದರಿಸಿಯ[…] ಅಥವಾ ಸ್ವಲ್ಪ ಮಾಂಸ ನೀಡಿಯೋ ಬಾಯಿ ಮುಚ್ಚಿಸುತ್ತಿದ್ದ. ರಾಮು ಇಷ್ಟ[…] ಎಚ್ಚರಿಕೆಗಳನ್ನು ತೆಗೆದುಕೊಂಡಿದ್ದರೂ ಅಲ್ಲಿಗೆ ಬಂದ ಹೊಸ ಯು[…] ಅರಣ್ಯಾಧಿಕಾರಿಗೆ ಇವನ ಕಳ್ಳಾಟಗಳೆಲ್ಲಾ ತಿಳಿದಿತ್ತು. ಆದರೆ ತ[…] ಬುದ್ಧಿವಂತಿಕೆಯಿಂದಾಗಿ ರಾಮು ಮೇಲಿನವರ ಕೈಗೆ ಕಳ್ಳತನದ ಮಾಲಿನೊಂದಿ[…] ಸಿಕ್ಕಿಬಿದ್ದಿರಲಿಲ್ಲ.

ರಾಮು ಇಲ್ಲಿಯವರೆಗೆ ಯಾವುದೇ ಕ್ರೂರಪ್ರಾಣಿಗಳ ಬೇಟೆಯಾಡಿರಲಿ[…] ಹಾಗಾಗಿ ಚಿರತೆಯನ್ನು ಎದುರಿಸಲು ಅವನು ಹಿಂಜರಿಯುತ್ತಿದ್ದ. ಆ[…] ಹಳ್ಳಿಯವರು ಪದೇಪದೇ ಒತ್ತಾಯಿಸಿದಾಗ ತನ್ನ ಮರ್ಯಾದೆ ಉಳಿಸಿಕೊಳ್ಳ[…] ಚಿರತೆಯ ಬೇಟೆಗೆ ಒಪ್ಪಿಕೊಂಡ. ಇದಕ್ಕಾಗಿ ಒಂದು ದಿನ ಅವನು ಅ[…] ಊರಿಗೆ ಬಂದಾಗ ಜನರೆಲ್ಲಾ ಅವನನ್ನು ತಮ್ಮ ಪಾಲಿನ ಭಾಗ್ಯದೇವತೆ ಎಂ[…] ಹೊಗಳಿದರು. ಇದರ ಲಾಭಪಡೆದ ರಾಮು ಚನ[…] ಊಟ ಹೊಡೆದು ಒಂದು ದೊಡ್ಡ ಲೋಟ ಕ[…] ಕುಡಿದ. ನಂತರ ಒಂದೆರಡು ಗಂಟೆ ನಿದ್ದೆ ಮಾ[…] ಮಧ್ಯಾಹ್ನದ ಹೊತ್ತಿಗೆ ಎದ್ದು ಊರಿನ ಪ್ರಮುಖ[…] ಕುರಿಯೊಂದನ್ನು ತರಿಸಲು ಹೇಳಿದ.

ಫಾರೆಸ್ಟರ್ ಆಗಿದ್ದ ಅವನಿಗೆ ಅಲ್ಲಿನ ಅರಣ್[…] ಪೂರ್ಣ ಪರಿಚಯವಿತ್ತು. ಊರಿನಿಂದ ಕಾ[…] ಹೋಗುವ ಮತ್ತು ಚಿರತೆಯ ಹೆಜ್ಜೆಗುರುತುಗ[…] ಜಾಗವನ್ನು ಅವನು ಆಯ್ಕೆ ಮಾಡಿಕೊಂಡ. ಅ[…] ದೊಡ್ಡ ಆಲದಮರಕ್ಕೆ ಮಚಾನನ್ನು ಕಟ್ಟಿಸಿ, ಸಾಯಂಕ[…] ನಾಲ್ಕು ಗಂಟೆಯ ಸುಮಾರಿಗೆ ರಾಮು ಮಚಾನ[…] ಏರಿದ. ಮಚಾನಿನ ಕೆಳಗಿನ ಒಂದು ಗೂ[…] ಕುರಿಯನ್ನು ಕಟ್ಟಿ ಊರಿನವರು ಹಿಂತಿರುಗಿದರು[…]

ಒಬ್ಬಂಟಿಯಾದ ಕುರಿ ದೊಡ್ಡದಾ[…] ಕೂಗತೊಡಗಿತು. ಇದನ್ನು ಕೇಳಿದ ಚಿರತೆ ತನ್ನ ಬೇ[…] ಸರಿಯಾದ ಸಮಯವೆಂದು ತಿಳಿದು ಸ[…] ಆರುಗಂಟೆಯ ಹೊತ್ತಿಗೆ ಇನ್ನೂ ಬೆಳಕು ಇರುವಾಗ[…] ಆಕ್ರಮಣ ಮಾಡಿತು. ಚಿರತೆ ಕುರಿಯನ್ನು ನೆ[…] ಒತ್ತಿ ಹಿಡಿದಿರುವಾಗ ರಾಮು ಬಂದೂಕ[…] ಚಲಾಯಿಸಿದ. ದೊಡ್ಡದಾಗಿ ಕೆಮ್ಮಿದ ಚಿರತೆ ಒ[…] ಪಲ್ಟಿ ಹೊಡೆದು ಪೊದೆಗಳ ಹಿಂದೆ ಓಡಿಹೋಯಿ[…] ಅರೆಜೀವವಾಗಿದ್ದ ಕುರಿ ಕೂಡ ತನ್ನ ಮಿದು[…] ಬಡಿದ ಗುಂಡಿನಿಂದಾಗಿ ಸತ್ತುಹೋಯಿತು. ಸ್ವಲ್ಪ ಹೊತ್ತಿನ ನಂತರ ಮಚಾನಿನ[…] ಇಳಿದ ರಾಮು ಊರಿಗೆ ಮರಳಿ ತಾನು ಚಿರತೆಯನ್ನು ಕೊಂದುದಾಗಿಯ[…] ನಾಳೆ ಬೆಳಗ್ಗೆ ಅದರ ಶವ ದೊರಕುತ್ತದೆಯೆಂದೂ ಹೇಳಿದ.

ಮರುದಿನ ಬೆಳಗ್ಗೆ ದೊಡ್ಡ ಗುಂಪಿನೊಂದಿಗೆ ರಾಮು ಕಾಡಿಗೆ ಹೋದ[…] ಸತ್ತಿದ್ದ ಕುರಿಯನ್ನು ರಾತ್ರಿಯೇ ಕತ್ತೆಕಿರುಬಗಳು ತಿಂದಿದ್ದವು. ಚಿರತೆ ಓಡಿಹೋ[…] ದಿಕ್ಕಿನಲ್ಲಿ ಎಲ್ಲರೂ ಹುಡುಕತೊಡಗಿದರು. ಸ್ವಲ್ಪ ದೂರದಲ್ಲಿ ಅವರಿಗೆ ರ[…] ಗುರುತುಗಳು ಕಂಡವು. ಆದರೆ ಚಿರತೆಯ ಶವ ಮಾತ್ರ ದೊರಕಲಿಲ್ಲ. ಮುಂ[…] ಎರಡು ತಿಂಗಳು ಚಿರತೆ ಯಾವ ಆಕ್ರಮಣವನ್ನೂ ಮಾಡಲಿಲ್ಲ. ಹಾ[…] ರಾಮುವನ್ನೊಳಗೊಂಡು ಎಲ್ಲರೂ ಅದು ಕಾಡಿನಲ್ಲೆಲ್ಲೋ ಹೋಗಿ ಮ[…] ಹೊಂದಿದೆ ಎಂದು ನಂಬಿದರು.

ನರಭಕ್ಷಕನ ಉದಯ

ಆಮೇಲೆ ಒಂದು ದಿನ ಹದಿನಾರು ವರ್ಷದ ಹುಡುಗನೊಬ್ಬ ಒಂಟಿಯ[…] ಅದೇ ಕಾಡಿನ ದಾರಿಯಲ್ಲಿ ಹಳ್ಳಿಗೆ ಹಿಂತಿರುಗುತ್ತಿದ್ದ. ಒಂದು ತಿರು[…]



› ಬಂದಾಗ ಸುಮಾರು ಇಪ್ಪತ್ತು ಗಜ ದೂರದಲ್ಲಿ ಚಿರತೆಯೊಂದು ನ್ನೇ ನೋಡುತ್ತಾ ಕುಳಿತಿದ್ದುದು ಕಂಡಿತು. ಮಾಮೂಲಿನ ಚಿರತೆಗಳಂತೆ ಕೂಡ ಮುಂದೆ ಸರಿದುಹೋಗಬಹುದೆಂದು ಆ ಹುಡುಗ ಅಲ್ಲೇ ಕೊಂಡ. ಆದರೆ ಈ ಚಿರತೆ ಹಾಗೆ ಮಾಡದೆ ಗುರುಗುಟ್ಟುತ್ತಾ ಇವನ ಆಕ್ರಮಣಕ್ಕೆ ಸಿದ್ಧವಾಯಿತು.

ಯುಗೊಂಡ ಹುಡುಗ ತಾನು ಬಂದ ದಾರಿಯಲ್ಲೇ ಹಿಂತಿರುಗಿ ಾಡಗಿದ. ಚಿರತೆ ಅವನನ್ನು ಹಿಂಬಾಲಿಸಿ ಆಕ್ರಮಣ ಮಾಡಿತು. ಚಿರತೆಯ ಕೆಳಕ್ಕೆ ಬಿದ್ದ ಹುಡುಗ ಅದೃಷ್ಟವಶಾತ್ ಹತ್ತಿರದಲ್ಲೇ ಕೈಗೆ ಸಿಕ್ಕ ಮರದ ಾದನ್ನು ಎತ್ತಿಕೊಂಡ. ಹಾಗೆಯೇ ಅಸಾಧಾರಣ ವೇಗದಲ್ಲಿ ಹೊರಳಿಕೊಂಡು ರದ ತುಂಡನ್ನು ಚಿರತೆಯ ಬಾಯಿಯಲ್ಲಿ ತೂರಿಸಿಬಿಟ್ಟಿದ್ದ. ಇದರಿಂದ ಯಾದ ಚಿರತೆ ಅವನ ಕುತ್ತಿಗೆಯ ಮೇಲಿನ ಹಿಡಿತವನ್ನು ಬಿದರೂ ಕೈ ಮತ್ತು ತೊಡೆಗಳನ್ನು ಉಗುರುಗಳಿಂದ ಪರಚಿತು. ಎದ್ದು ನಿಂತ ಆ ಹುಡುಗ ಮತ್ತೆ ಆ ಮರದ ತುಂಡಿನಿಂದ ಗೆ ಬಡಿದ. ಈ ಅನಿರೀಕ್ಷಿತ ಪ್ರತ್ಯಾಕ್ರಮಣದಿಂದ ದಂಗಾದ ಚಿರತೆ ಗಳತ್ತ ಹಾರಿ ಓಡಿಹೋಯಿತು. ತನ್ನ ಜೀವ ಉಳಿಸಿದ ಮರದ ನ್ನು ಹಿಡಿದುಕೊಂಡೇ ಆ ಹುಡುಗ ಮೈಯೆಲ್ಲಾ ರಕ್ತ ಸುರಿಸುತ್ತಾ ಗೆ ಓಡಿದ.

ದು ಮನುಷ್ಯರ ಮೇಲೆ ಚಿರತೆ ಮಾಡಿದ ಮೊದಲ ಣವಾಗಿತ್ತು. ಮುಂದಿನ ಆಕ್ರಮಣ ಮೂರು ವಾರಗಳ ನಂತರ ದಿತು. ಈ ಬಾರಿ ಚಿರತೆ ಹಿಂದಿನಂತೆ ಓಡಿಹೋಗಲಿಲ್ಲ. ಯುವವನೊಬ್ಬ ತನ್ನ ಕುರಿಗಳೊಂದಿಗೆ ಊರ ಕಡೆ ಹೊರಟಿದ್ದಾಗ ನುಗ್ಗಿ ಬಂದು ಒಂದು ಕುರಿಯನ್ನು ಹಿಡಿಯಿತು. ಈ ಕುರಿಗಳೇ ಜೀವನದ ಸರ್ವಸ್ವವಾಗಿದ್ದ ಆ ಬಡಪಾಯಿ ತನ್ನ ಕುರಿಯನ್ನು ು ಚಿರತೆಯ ಕಡೆ ಕೂಗುತ್ತಾ ದೊಣ್ಣೆಯನ್ನು ಬೀಸುತ್ತಾ ಓಡಿದ. ಯನ್ನು ಬಿಟ್ಟ ಚಿರತೆ ಇವನತ್ತ ನುಗ್ಗಿ ಇವನ ಕುತ್ತಿಗೆಯಲ್ಲಿ ತನ್ನ ಗಳನ್ನು ನೆಟ್ಟಿತು. ತನ್ನ ಈ ಮೂರ್ಖತನದ ಕೆಲಸಕ್ಕಾಗಿ ಅವನು ದ ಬೆಲೆಯನ್ನು ತೆರಬೇಕಾಯಿತು.

ುರಿಗಳು ಊರಿಗೆ ಹಿಂತಿರುಗಿದವು. ಕುರಿಕಾಯುವ ವ್ಯಕ್ತಿಗೆ ಯಾರೂ ವ ಸಂಬಂಧಿಗಳಿಲ್ಲದಿದ್ದರಿಂದ ಯಾರೂ ಅವನ ಗೈರುಹಾಜರಿಯನ್ನು ಗಮನಿಸಲಿಲ್ಲ. ಸಂಜೆಯಾದರೂ ಆತ ಹಿಂತಿರುಗದಿದ್ದಾಗ ಎಲ್ಲರಿಗೂ ದೋ ಅಪಾಯದ ಸೂಚನೆ ಸಿಕ್ಕರೂ ಏನಾದರೂ ಮಾಡುವುದಕ್ಕೆ ತಡವಾಗಿದ್ದುದರಿಂದ ಸುಮ್ಮನಾದರು.


ಮರುದಿನ ಬೆಳಗ್ಗೆ ಊರಿನ ಸುಮಾರು ಮೂವತ್ತು ಜನರ ಗುಂಪೊಂದು ದೊಣ್ಣೆ ಕೊಡಲಿ ಮುಂತಾದ ಆಯುಧಗಳೊಂದಿಗೆ ಕುರಿಕಾಯುವವನನ್ನು ಹುಕಲು ಹೊರಟರು. ಮುಂದುವರೆದಂತೆ ಅವರಿಗೆ ಚಿರತೆಯ ಹೆಜ್ಜೆ ಗುರುತುಗಳು ಮತ್ತು ಅದು ಆ ವ್ಯಕ್ತಿಯನ್ನು ಎಳೆದುಕೊಂಡು ಹೋಗಿರುವ ಗುರುತುಗಳು ಕಂಡುಬಂದವು. ಜೊತೆಗೆ ಅಲ್ಲಲ್ಲಿ ಒಣಗಿದ ರಕ್ತದ ಗುರುತುಗಳೂ . ಚಿರತೆ ಅವನನ್ನು ಕಾಡಿನ ಒಳಗಡೆ ಎಳೆದುಕೊಂಡು ಹೋಗಿತ್ತು. ಸ್ವಲ್ಪವೇ ದೂರದಲ್ಲಿ ಅರ್ಧ ತಿನ್ನಲಾಗಿದ್ದ ಅವನ ಶವ ಕೂಡ ದೊರಕಿತು. ಯೆಲ್ಲಗಿರಿ ಬೆಟ್ಟಗಳ ನರಭಕ್ಷಕ ಜನ್ಮತಾಳಿತ್ತು.

ಸಿದ್ಧತೆಯಿಲ್ಲದೆ ಬೇಟೆಯ ಪ್ರಯತ್ನ

ಯೆಲ್ಲಗಿರಿ ಬೆಟ್ಟಗಳು ಅರ್ಧಚಂದ್ರಾಕೃತಿಯಲ್ಲಿದ್ದು ಜಾಲಾರ್‌ಪೇಟೆ ರೈಲ್ವೇ ನಿಂದ ಪೂರ್ವದಲ್ಲಿದೆ. ಸಮುದ್ರಮಟ್ಟದಿಂದ ಸುಮಾರು ಮೂರು ಅಡಿಗಳಷ್ಟು ಎತ್ತರವಿರುವ ಈ ಬೆಟ್ಟಗಳನ್ನು ಏರಲು ಕೆಲವೊಮ್ಮೆ ಳಿಂದ ಬಂಡೆಗಳಿಗೆ ಹಾರುತ್ತಾ ಸಾಗಬೇಕಿತ್ತು. 1941ನೇ ಇಸವಿಯಲ್ಲಿ ಇಲ್ಲಿ ಒಂದೂವರೆ ಎಕರೆಯಷ್ಟು ಕೃಷಿ ಜಮೀನನ್ನು ಖರೀದಿಸಿದ್ದೆ. ರಿನಿಂದ ಸುಮಾರು 95 ಮೈಲು ದೂರವಿದ್ದ ಈ ಜಾಗವನ್ನು ನಾನು ಂತ್ಯವನ್ನು ಕಳೆಯುವ ಸ್ಥಳವಾಗಿ ಇಟ್ಟುಕೊಳ್ಳಲು ಬಯಸಿದ್ದೆ. ಆದರೆ ಇಲ್ಲಿಗೆ ಭೇಟಿಕೊಡಲು ಸಾಧ್ಯವಾಗದೆ, ಈ ಕೃಷಿ ಭೂಮಿಯ ತುಂಬೆಲ್ಲಾ ಾನ ಮುಳ್ಳುಗಳು ಹಬ್ಬಿಕೊಂಡಿದ್ದವು. ಇವುಗಳನ್ನು ತೆಗೆದುಹಾಕಲು ನಾನು ು ದಿನಗಳ ಸಮಯವನ್ನಿಟ್ಟುಕೊಂಡು ಹೋಗಿದ್ದಾಗ ಕುರಿಕಾಯುವವನ ಸಮಾಚಾರ ನನಗೆ ತಿಳಿಯಿತು. ನನ್ನ ಜಮೀನಿನಲ್ಲಿ ಕೆಲಸಕ್ಕೆ ಬಂದಿದ್ದ ಕೂಲಿಕಾರರು ಹೇಳಿದ ಪ್ರಕಾರ ಆ ಚಿರತೆ ಇನ್ನೂ ಅಲ್ಲೇ ಸುತ್ತಾಡುತ್ತಿತ್ತು ಮತ್ತು ಹಿಂದಿನ ದಿನವಷ್ಟೇ ಅವರು ಚಿರತೆಯ ಹೆಜ್ಜೆ ಗುರುತುಗಳನ್ನು ನೋಡಿದ್ದರು.

ಇದರಿಂದ ನನ್ನ ಆಸಕ್ತಿ ಕೆರಳಿ ನಾನು ಈ ಚಿರತೆಯನ್ನು ಬೇಟೆಯಾಡಲು ಪ್ರಯತ್ನಿಸಬಾರದೇಕೆ ಅನ್ನಿಸಿತು. ಆದರೆ ನನ್ನ ಮಾಮೂಲಿನ ಬೇಟೆಯ ಬಂದೂಕು ಮತ್ತು ಇತರ ಸಾಮಗ್ರಿಗಳನ್ನು ನಾನು ತೆಗೆದುಕೊಂಡು ಹೋಗಿರಲಿಲ್ಲ. ಒಂದು ಚಿಕ್ಕ ಬಂದೂಕನ್ನು 'ಅಲ್ಲಿನ ಕಾಡುಕೋಳಿಗಳನ್ನು ಆಹಾರಕ್ಕಾಗಿ ಬೇಟೆಯಾಡಲು ಇಟ್ಟುಕೊಂಡಿದ್ದೆ. ಅದೂಅಲ್ಲದೆ ನನ್ನ ಹತ್ತಿರ ಎರಡು ಕಾರ್ಟ್ರಿಡ್ಜ್‌ಗಳು ಮಾತ್ರ ಇದ್ದವು. ಅಷ್ಟರಲ್ಲಿಯೇ ಚಿರತೆಯನ್ನು ಕೊಲ್ಲಬೇಕಿತ್ತು.

ನಾನು ಹೊಲದ ಕೆಲಸವನ್ನು ನಿಲ್ಲಿಸಿ ಕೂಲಿಕಾರರನ್ನು ಕರೆದುಕೊಂಡು ಚಿರತೆಯ ಜಾಡನ್ನು ಹುಡುಕಲು ಹೊರಟೆ. ಹಿಂದಿನ ರಾತ್ರಿಯೇ ಚಿರತೆ



ಕಾಡಿನ ಪಕ್ಕದ ಆ ಕಾಲುದಾರಿಯಲ್ಲಿ ಓಡಾಡಿದ ಗುರುತುಗಳಿದ್ದವು. ಅದರ ಆಧಾರದ ಮೇಲೆ ಇದೊಂದು ದೊಡ್ಡ ಗಂಡು ಚಿರತೆ ಎಂದು ನಿರ್ಧರಿಸಿದೆ. ನಾನು ಹಳ್ಳಿಗೆ ಹೋಗಿ ಅಲ್ಲಿನ ಪಟೇಲನನ್ನು ಪರಿಚಯಿಸಿಕೊಂಡೆ. ನಾನು ಬಂದಿದ್ದನ್ನು ಸಂತೋಷದಿಂದ ಸ್ವಾಗತಿಸಿದ ಅವನು ನನಗೆ ಬೇಕಾದ ಎಲ್ಲಾ ಸಹಕಾರ ನೀಡುವುದಾಗಿ ಹೇಳಿದ. ಬಲಿಪಶುವನ್ನಾಗಿ ಉಪಯೋಗಿಸಲು ಕುರಿಯೊಂದನ್ನು ವ್ಯವಸ್ಥೆ ಮಾಡಲು ನಾನು ಕೇಳಿಕೊಂಡೆ. ಬಹಳ ಶ್ರಮಪಟ್ಟು ಪಟೇಲ ಪಕ್ಕದ ಊರಿನಿಂದ ದೊಡ್ಡದಾಗಿ ಕೂಗಬಲ್ಲ ಒಂದು ಕುರಿಮರಿಯನ್ನು ತರಿಸಿದ.

ಪಟೇಲ ಮತ್ತು ನಾಲ್ಕು ಜನ ಆಳುಗಳೊಂದಿಗೆ ಮಚಾನನ್ನು ಕಟ್ಟಲು ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಕಾಡಿಗೆ ಹೊರಟೆ. ಅವರು ನನ್ನನ್ನು ಚಿರತೆ ಕುರಿಕಾಯುವವನ ಮೇಲೆ ಆಕ್ರಮಣ ಮಾಡಿದ ಸ್ಥಳದ ಮೂಲಕ ಅವನ ಶವ ದೊರೆತ ಜಾಗಕ್ಕೆ ಕರೆದುಕೊಂಡು ಬಂದರು. ಆ ಜಾಗದಲ್ಲಿ ಮದ್ರಾಸ್ ಮುಳ್ಳು ಎಂದು ಕರೆಸಿಕೊಳ್ಳುವ ಪೊದೆಗಳು ದಟ್ಟವಾಗಿ ಬೆಳೆದಿದ್ದು, ಕೆಲವೇ ಅಡಿಗಳಿಗಿಂತ ಹೆಚ್ಚು ದೂರದಿಂದ ಚಿರತೆ ಕಾಣುವುದು ಸಾಧ್ಯವೇ ಇರಲಿಲ್ಲ. ಹಾಗಾಗಿ ಇದು ಬೇಟೆಗೆ ಸೂಕ್ತ ಸ್ಥಳವಾಗಿರಲಿಲ್ಲ.

ಅಲ್ಲಿಂದ ಕಾಲು ಮೈಲು ಹಿಂದೆ ಬಂದೆವು. ಅಲ್ಲಿ ಒಂದು ದೊಡ್ಡದಾದ ಹಲಸಿನ ಮರ ಇತ್ತು. ಮರದಲ್ಲಿ ಅಗಲವಾದ ಎಲೆಗಳು ಹೇರಳವಾಗಿದ್ದು ಮಚಾನನ್ನು ನಿರ್ಮಿಸಲು ಯೋಗ್ಯವಾಗಿತ್ತು. ಕಾಡಿನ ಕಾಲುದಾರಿಯ ಮೇಲುಗಡೆ ಹಾದುಹೋಗಿದ್ದ ಹದಿನೈದು ಅಡಿ ಎತ್ತರದ ರೆಂಬೆಯೊಂದರ ಮೇಲೆ ಮಚಾನನ್ನು ಕಟ್ಟಿದೆವು. ಮೂರು ಅಡಿ ಅಗಲದ ಮಚಾನನ್ನು ಕಟ್ಟಿದ ಆಳುಗಳು ಅದರ ಸುತ್ತ ಎಲೆಗಳಿಂದ ಮರೆ ಮಾಡಿದರು. ಕೆಳಗಿನಿಂದ ನೋಡಿದರೂ ಏನೂ ಅಸಹಜವಾಗಿ ಕಾಣದಂತೆ ಮಾಡಲು ಮಚಾನಿನ ಅಡಿಯಲ್ಲೂ ಎಲೆಗಳ ಮರೆಯನ್ನು ಮಾಡಲಾಯಿತು. ಸುಮಾರು ಇಪ್ಪತ್ತು ಅಡಿ ದೂರದಲ್ಲಿ ಕುರಿಮರಿಯನ್ನು ಕಟ್ಟಲು ಹೇಳಿ ನಾನು ಮಚಾನನ್ನು ಏರಿದೆ. ಇವೆಲ್ಲ ಆಗುವಷ್ಟರಲ್ಲಿ ಸುಮಾರು ಸಂಜೆ ಐದು ಗಂಟೆಯಾಗಿತ್ತು.

ನಾನು ಮೊದಲೇ ಹೇಳಿದಂತೆ ಬೇಟೆಯ ಉದ್ದೇಶಕ್ಕಾಗಿ ನಾನು ಯೆಲ್ಲಗಿರಿಗೆ ಬಂದಿರಲಿಲ್ಲ. ಹಾಗಾಗಿ ಬೇಟೆಗೆ ಅಗತ್ಯವಿರುವ ಸಾಮಾನು ಸರಂಜಾಮುಗಳನ್ನು ತಂದಿರಲಿಲ್ಲ. ಬಂದೂಕಿನ ನಳಿಕೆಗೆ ಅಳವಡಿಸಬಲ್ಲ ಫ್ಲ್ಯಾಶ್‌ಲೈಟ್‌ನ ಬದಲಾಗಿ ಮಾಮೂಲಿನ ಎರಡು ಸೆಲ್ ಟಾರ್ಚ್‌ನ್ನು ತಂದಿದ್ದೆ. ಇದರ ಬೆಳಕು ಬೇಟೆಗೆ ಸಾಕಾಗುತ್ತಿರಲಿಲ್ಲ. ಅಲ್ಲದೆ ಇದನ್ನು ಬಂದೂಕಿಗೆ ಹತ್ತಿರವಾಗಿ ನಾನು ಎಡಗೈಯಿಂದ ಹಿಡಿದುಕೊಳ್ಳಬೇಕಾಗಿತ್ತು. ಆಗ ತಿಂಗಳು ಬೆಳಕಿನ ಸಮಯವೂ ಅಲ್ಲದ್ದರಿಂದ ಚಿರತೆಯ ಬರವನ್ನು ಕಂಡುಹಿಡಿಯಲು ಶಬ್ದ ಮತ್ತು ನನ್ನ ಅನುಭವವನ್ನು ಮಾತ್ರ ನಂಬಿಕೊಳ್ಳಬೇಕಾಗಿತ್ತು.

ನಾನು ಹೇಳಿದಂತೆ ಅಲ್ಲಿಗೆ ಬಂದಿದ್ದ ಜನ ಕುರಿಯನ್ನು ಗೂಟಕ್ಕೆ ಕಟ್ಟಿ ಜೋರಾಗಿ ಮಾತನಾಡುತ್ತಾ ಊರಿಗೆ ಹೊರಟರು. ಹೀಗೆ ಜೋರಾಗಿ ಮಾತನಾಡಿಕೊಂಡು ಅವರು ಹೋಗುತ್ತಿರುವುದರಿಂದ ಕುರಿಮರಿ ಅಲ್ಲಿ ಜನರು ಇಲ್ಲ ಎನ್ನುವ ಕಾರಣಕ್ಕೆ ಕೂಗಲು ಪ್ರಾರಂಭಿಸುತ್ತಿತ್ತು, ಮತ್ತು ಚಿರತೆ ಅದೇ ಕಾರಣಕ್ಕಾಗಿ ಅಲ್ಲಿಗೆ ಬೇಗ ಆಗಮಿಸಬಹುದಿತ್ತು. ಕುರಿಮರಿಯೇನೊ ನಾನಂದುಕೊಂಡಂತೆ ಕೂಗಲು ಪ್ರಾರಂಭಿಸಿತು. ಆದರೆ ಕತ್ತಲಾಗುವಷ್ಟರಲ್ಲಿ ಕೂಗಿಕೂಗಿ ಅದರ ಧ್ವನಿಯೇ ಬಿದ್ದುಹೋಯಿತು. ರಾತ್ರಿಯೂ ತಾನು ಅಲ್ಲಿಯೇ ಕಳೆಯುವುದು ಅನಿವಾರ್ಯವೆಂದು ತೀರ್ಮಾನಿಸಿದ ಅದು ಮಲಗಿ ನಿದ್ದೆಮಾಡಿಬಿಟ್ಟಿತು! ಚಿರತೆ ಅದೇ ದಾರಿಯಲ್ಲಿ ಬಂದು ಕುರಿಯನ್ನು ಎಡವಿದ್ದರೆ ಮಾತ್ರ ಅದನ್ನು ಕಂಡುಹಿಡಿಯುವುದು ಸಾಧ್ಯವಿತ್ತು. ಆದರೂ ನಾನು ರಾತ್ರಿ ಒಂಬತ್ತು ಗಂಟೆಯವರೆಗೆ ಕಾಯಲು ನಿರ್ಧರಿಸಿದೆ.

ಮುಂದಿನ ಎರಡೂವರೆ ಗಂಟೆಗಳು ನಾನು ಹಿಂದೆ ಕಾಡಿನಲ್ಲಿ ಹಲವಾರು ಬಾರಿ ಇಂತಹದೇ ಸಂದರ್ಭಗಳಲ್ಲಿ ಕಳೆದಂತೆಯೇ ಇತ್ತು. ಹಗಲಿನ ಹಕ್ಕಿಗಳ ಕೂಗಿನ ಸದ್ದು ಮಾಯವಾಗಿತ್ತು. ಚಿಕ್ಕದಾಗಿ ಶಿಳ್ಳೆಯಂತೆ ಶಬ್ದ ಹೊರಡಿಸುತ್ತಿದ್ದ ಹಕ್ಕಿಯೊಂದು ಮಾತ್ರ ಆಗಾಗ ಕೂಗುತ್ತಿತ್ತು. ಕುರಿಕಾಯುವವರ ಶಿಳ್ಳೆಯಂತೆ ಇದು ಸದ್ದು ಮಾಡುತ್ತಿದ್ದುದರಿಂದ ಇದನ್ನು ಕುರಿಹುಡುಗನ ಹಕ್ಕಿ ಎಂದೇ ಕರೆಯುತ್ತಿದ್ದರು. ಸಣ್ಣದಾಗಿ ಆದರೆ ಕರ್ಣಭೇದಕವಾಗಿ ಕೂಗುವ ಇದು ಕಾಡುಗಳಲ್ಲಿ ಮಾತ್ರ ಕಂಡುಬರುತ್ತದೆ.

ರಾತ್ರಿ ಸುಮಾರು 9.15ಕ್ಕೆ ನಾನು ಕಾಯುವಿಕೆಯನ್ನು ಮುಗಿಸಲು ನಿರ್ಧರಿಸಿದೆ. ಟಾರ್ಚ್‌ನ ಬೆಳಕನ್ನು ಕುರಿಮರಿಯತ್ತ ಹಾಯಿಸಿದೆ. ಹರಡಿದ ಬೆಳಕು ಎಷ್ಟು ದುರ್ಬಲವಾಗಿತ್ತೆಂದರೆ ಅದು ಕುರಿಮರಿಯನ್ನು ತಲುಪಲೇ ಇಲ್ಲ. ಚಿರತೆ ಕುರಿಮರಿಯ ಮೇಲೆ ಆಕ್ರಮಣ ಮಾಡಿದ್ದರೆ ನನಗೆ ಅದು ಸ್ಪಷ್ಟವಾಗಿ ಕಾಣಿಸುವುದು ಸಾಧ್ಯವಿರಲಿಲ್ಲ. ಹಾಗಾಗಿ ಚಿರತೆ ಬರದಿದ್ದುದೇ ಒಳ್ಳೆಯದಾಯಿತು ಎಂದು ನನ್ನನ್ನು ನಾನೇ ಸಮಾಧಾನಿಸಿಕೊಂಡೆ! ಮಚಾನಿನಿಂದ ಕೆಳಗಿಳಿದು ಕುರಿಮರಿಯನ್ನು ಹಿಡಿದುಕೊಂಡು ಊರಿಗೆ ಹಿಂದಿರುಗಿದೆ.

ಮರುದಿನ ಬೆಳಗ್ಗೆ ಮತ್ತೆ ಹಳ್ಳಿಗೆ ಬಂದು ಏನಾದರೂ ಹೊಸ ಮಾಹಿತಿ ದೊರಕಬಹುದೇ ಎಂದು ವಿಚಾರಿಸಿದೆ. ಆ ಚಿರತೆ ಎಲ್ಲಿಂದ ಬಂದಿದೆ ಅಥವಾ ಸದ್ಯಕ್ಕೆ ಅದು ಯಾವ ಅರಣ್ಯ ಪ್ರದೇಶದಲ್ಲಿರಬಹುದು ಎನ್ನುವ ವಿಷಯ ಯಾರಿಗೂ ತಿಳಿದಿರಲಿಲ್ಲ.

ಮುಂದಿನ ಮೂರು ಹಗಲುಗಳು ನನ್ನ ಹೊಲದಲ್ಲಿ ಕೆಲಸ ಮಾಡಿಸುತ್ತಾ ಕಳೆದೆ. ರಾತ್ರಿಯ ಹೊತ್ತಿನಲ್ಲಿ ಅದೇ ಮಚಾನಿನಲ್ಲಿ ಬೇರೆಬೇರೆ ಕುರಿಮರಿಗಳನ್ನು ಬಲಿಯಾಗಿ ಕಟ್ಟಿ ಕಳೆಯುತ್ತಿದ್ದೆ. ಆದರೆ ಚಿರತೆಯ ಸುಳಿವೇ ಇರಲಿಲ್ಲ. ಪ್ರತಿ ಮುಂಜಾವಿನಲ್ಲಿ ಕಾಡಿನ ಕಾಲುಹಾದಿ ಮತ್ತು ಹತ್ತಿರದ ಹಳ್ಳಕೊಳ್ಳಗಳ ಬಳಿಯೆಲ್ಲಾ ಸುತ್ತಾಡಿ ಚಿರತೆಯ ಹೆಜ್ಜೆ ಗುರುತಗಳೇನಾದರೂ ಇವೆಯೇ ಎಂದೂ ಪರಿಶೀಲಿಸುತ್ತಿದ್ದೆ. ಬಹುಶಃ ಚಿರತೆ ಯೆಲ್ಲಗಿರಿ ಬೆಟ್ಟಗಳ ದೂರದ ಭಾಗಕ್ಕೆ ಹೋಗಿರಬೇಕು ಅನ್ನಿಸಿತು. ನಾಲ್ಕನೆಯ ದಿನ ಬೆಳಗ್ಗೆ ಊರ ಪಟೇಲನಿಗೆ ನನಗೆ ತಂತಿಯ ಮೂಲಕ ಚಿರತೆಯ ಸಮಾಚಾರವೇನಾದರೂ ಇದ್ದರೆ ತಲುಪಿಸುವಂತೆ ಹೇಳಿ ಹಿಂತಿರುಗಿದೆ.

(ಮುಂದುವರೆಯುವುದು)

ಶರಣರ ತ್ಯಾಗ ಅರಿಯದ ನಾವು ಎಂಥ ಜನ?

ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮ ಬಾರದು:
ಸರಿಯಲ್ಲ ನೋಡಾ.
ಕೂಡಲಸಂಗಮದೇವಾ.
ನಿಮ್ಮ ಶರಣರ ಚಮ್ಮಾವುಗೆಗೆ!

– ಬಸವಣ್ಣ

ಕಲ್ಯಾಣದ ಪ್ರಧಾನಿ ಬಸವಣ್ಣನವರು ಒಂದುದಿನ ಒಡ್ಡೋಲಗಕ್ಕೆ ಹೋಗುತ್ತಿರುವಾಗ ಹರಳಯ್ಯನವರು "ಶರಣು" ಎಂದು ಕೈ ಮುಗಿದರು. ಬಸವಣ್ಣನವರು "ಶರಣು ಶರಣಾರ್ಥಿ" ಎಂದು ಕೈ ಮುಗಿದರು. ಬಸವಣ್ಣನವರು ಎರಡು ಬಾರಿ ಶರಣೆಂದುದನ್ನು ಕೇಳಿ ಸ್ತಂಭೀಭೂತರಾದ ಹರಳಯ್ಯ ನಿಂತಲ್ಲಿಯೇ ನಿಂತರು. ಪತ್ನಿ ಕಲ್ಯಾಣಮ್ಮ ಹುಡುಕಿಕೊಂಡು ಬರುವವರೆಗೆ ಅಲ್ಲಿಯೇ ನಿಂತಿದ್ದರು. ಬಸವಣ್ಣನವರು ತಮ್ಮ ಮೇಲೆ ಹೆಚ್ಚಿನ "ಶರಣು" ಹೊರೆ ಹೊರಿಸಿದ್ದನ್ನು ಪತ್ನಿಗೆ ವಿವರಿಸಿದರು. ತಮ್ಮ ತೊಡೆಯ ಚರ್ಮದಿಂದ ಚಮ್ಮಾವುಗೆಯ ಮಾಡಿ ಬಸವಣ್ಣನವರ ಪಾದಗಳಿಗೆ ಅರ್ಪಿಸುವುದೇ ಇದಕ್ಕೆ ಪರಿಹಾರ ಎಂದು ನಿರ್ಧರಿಸಿದರು.

ಮರುದಿನವೆ ಹರಳಯ್ಯ ಕೊರೆದ ಬಲದೊಡಿ ಚರ್ಮ
ಹರನೆಂದು ಮಡದಿಯೆಡದೊಡೆಯ/ ತಾ ಕೊಯ್ದು
ಭರದಿ ಹದಮಾಡಿ ಒಣಗಿಸಿದ//

ಎಂದು ಮುಂತಾಗಿ ಆ ಕಾಲದ ಜನಪದ ಕವಿಯೊಬ್ಬ ಹೃದಯಸ್ಪರ್ಶಿಯಾಗಿ ತ್ರಿಪದಿಗಳನ್ನು ಕಟ್ಟಿ ಹಾಡಿದ್ದಾನೆ.

ಹರಳಯ್ಯನವರು ಈ ಚಮ್ಮಾವುಗೆಗಳನ್ನು ಒಮ್ಮೆ ಬಸವಣ್ಣನವರಿಗೆ ಕೊಟ್ಟಾಗ, ಅವರು ಭಾವಪರವಶರಾಗಿ ಅವುಗಳನ್ನು ತಮ್ಮ ತಲೆಯ ಮೇಲಿಟ್ಟುಕೊಂಡು "ಇವು ದೇವರ ಪಾದರಕ್ಷೆಗಳು" ಎಂದರು. ಆ ಸಂದರ್ಭದ ಹಿನ್ನೆಲೆಯಲ್ಲಿ ಬಸವಣ್ಣನವರು ಮೇಲೆ ತಿಳಿಸಿದ ವಚನವನ್ನು ಹೇಳಿದ್ದಾರೆ. ಹರಳಯ್ಯ ದಂಪತಿ ನಿರ್ಮಿಸಿದ ಈ ಚಮ್ಮಾವುಗೆಗಳಿಗೆ ದೇವರ ಸೃಷ್ಟಿಯಾದ ಈ ಪೃಥ್ವಿ ಸಮ ಬರುವುದಿಲ್ಲ ಎಂದು ಬಸವಣ್ಣನವರು ಹೇಳಬೇಕಾದರೆ ಹರಳಯ್ಯ ದಂಪತಿ ಎಂಥ ಪವಿತ್ರ ಜೀವಗಳು ಎಂಬುದರ ಅರಿವಾಗುವುದು.

ಸಮಗಾರ ಹರಳಯ್ಯನವರು ಮತ್ತು ಬ್ರಾಹ್ಮಣ ಮಧುವರಸರು ಇಷ್ಟಲಿಂಗ ದೀಕ್ಷೆ ಪಡೆದ ಕಾರಣ ಜಾತಿಸಂಕರಗೊಂಡು ಬಸವಣ್ಣನವರ ನಿರ್ಜಾತಿ ಧರ್ಮವಾದ ಲಿಂಗವಂತ ಧರ್ಮ ಸ್ವೀಕರಿಸಿದರು. ಹರಳಯ್ಯನವರ ಮಗ ಶೀಲವಂತನ ಜೊತೆ ಮಧುವರಸರ ಮಗಳು ಲಾವಣ್ಯಳ ಮದುವೆಯೂ ಆಯಿತು. ಆದರೆ ಮನುವಾದಿಗಳು ರೊಚ್ಚಿಗೆದ್ದರು. ಸಮಗಾರ ವರನಿಗೆ ಬ್ರಾಹ್ಮಣ ಕನ್ಯೆಯನ್ನು ಕೊಡುವುದು ಧರ್ಮಬಾಹಿರವಾದ ವಿಲೋಮ ವಿವಾಹ ಎಂದು ಕಲ್ಯಾಣದ ದೊರೆ ಬಿಜ್ಜಳನ ಕಿವಿ ಚುಚ್ಚಿದರು. ಕಣ್ಣು ಕೀಳಿಸಿಕೊಂಡು ಎಳೆಹೂಟೆ ಶಿಕ್ಷೆ ಅನುಭವಿಸಿದ ಹರಳಯ್ಯ, ಶೀಲವಂತ ಮತ್ತು ಮಧುವರಸರು ಹುತಾತ್ಮರಾದರು. ಮನುವಾದಿ ಭಯೋತ್ಪಾದಕರಿಂದಾಗಿ ಕಲ್ಯಾಣದಲ್ಲಿ ಅಸಂಖ್ಯಾತ ಶರಣರ ಹತ್ಯಾಕಾಂಡವಾಯಿತು. ಸಹಸ್ರಾರು ವಚನಕಟ್ಟುಗಳು ಬೆಂಕಿಗೆ ಆಹುತಿಯಾದವು. ಸಕಲ ಮಾನವರನ್ನು ವಿಮೋಚನೆಗೊಳಿಸುವಂಥ ಬಸವಕ್ರಾಂತಿ ಆಗದಂತೆ ಮನುವಾದಿಗಳು ನೋಡಿಕೊಂಡರು.

ನಡೆ ನುಡಿ ಸಿದ್ಧಾಂತದ ಶರಣರು "ಜಾತಿ ನಿರರ್ಥಕ, ನೀತಿ ಲೋಕರಕ್ಷಕ" ಎಂಬ ತತ್ತ್ವದಲ್ಲಿ ನಂಬಿಕೆ ಇಟ್ಟವರಾಗಿದ್ದರು. ಪ್ರತಿಯೊಬ್ಬರು ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನೀತಿವಂತರಾದಾಗ ಅವರ ವರ್ಣ, ಜಾತಿ ಮತ್ತು ಉಪಜಾತಿಗಳು ನಿರ್ನಾಮವಾಗಿ ಕೇವಲ ಮನುಷ್ಯರಾಗುವರು. ಅಂಥವರೇ ನಿಜಮಾನವರು. ಶರಣರು ಇಂಥ ನಿಜಮಾನವರಾಗಿದ್ದರು. ಶರಣ ಸಂಕುಲವು ಇಂಥ ನಿಜಮಾನವರ ಸಮಾಜವಾಗಿತ್ತು. ಜಾತಿ ಮತ್ತು ಅಸ್ಪೃಶ್ಯತೆಯ ವಿಷವನ್ನು ನಮ್ಮ ಸಮಾಜದಿಂದ ಹೊರಹಾಕಿ ಎಲ್ಲ ರೀತಿಯ ಸಮಾನತೆಯನ್ನು ಸಾಧಿಸುವುದು ಶರಣರ ಉದ್ದೇಶವಾಗಿತ್ತು. ಇಂಥ ಘನ ಉದ್ದೇಶದಿಂದಲೇ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯನ್ನು ಶರಣರು ಏರ್ಪಡಿಸಿದರು. ವರ್ಣ ಮತ್ತು ಜಾತಿಪದ್ಧತಿಯ ಮೇಲೆ ನಿಂತ ಮನುಧರ್ಮದ ಸಮಾಜಕ್ಕೆ ದೊಡ್ಡ ಸವಾಲು ಒಡ್ಡಿದರು. ಅದಕ್ಕಾಗಿ ಶರಣರು ಸಾವುನೋವು ಮತ್ತು ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ನಡೆನುಡಿ ಸಿದ್ಧಾಂತವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅವರು ಎಂಥ ತ್ಯಾಗಕ್ಕೂ ಸಿದ್ಧರಾದರು. ಅದಕ್ಕಾಗಿ ನಾಡು ಎಂದೂ ಕಂಡರಿಯದಂಥ ದುರಂತವನ್ನು ಅನುಭವಿಸಿದರು. ನಮ್ಮ ಜನರಲ್ಲಿ ಮತ್ತು ಲಿಂಗಾಯತರು ಎಂದು ಕರೆಯಿಸಿಕೊಳ್ಳುವವರ ಹೃದಯಗಳಲ್ಲಿ ನಿರಂತರ ನೋವಿನ ಜ್ವಾಲೆಯಾಗಿ ಅವರ ತ್ಯಾಗ ಜೀವಂತವಾಗಿರಬೇಕಿತ್ತು. ಆದರೆ ನಮ್ಮ ಜನರ ವಿಸ್ಮೃತಿಯಿಂದಾಗಿ ಹತ್ತಾರು ಸಹಸ್ರ ಶರಣರ ಸಾವು ನೋವುಗಳು ನಮಗೆ ಬಾಧಿಸದೆ ಮರೆಯಾಗಿವೆ. ಎಲ್ಲ ಕಾಯಕಜೀವಿ ಶರಣರ ಸಹಸ್ರಾರು ವಚನ ಕಟ್ಟುಗಳನ್ನೂ ವೈದಿಕಶಕ್ತಿಗಳು ಸುಟ್ಟು ಹಾಕಿದವು. ಶರಣರ ಈ ತ್ಯಾಗಕ್ಕೆ ಬೆಲೆ ಇಲ್ಲವೆ ಎಂಬ ಪ್ರಶ್ನೆ ನಮ್ಮಲ್ಲಿ ಉದ್ಭವಿಸದೆ ನಾವು ಮನುಷ್ಯರಾಗಿ ಉಳಿಯಲು ಸಾಧ್ಯವಿಲ್ಲ.

ಜಾತಿ ನಿರ್ನಾಮದಿಂದ ಸೃಷ್ಟಿಯಾಗುವ ಸುಂದರ ಸಮಾಜದ ಕನಸು ಹೊತ್ತ ದಲಿತ ಮತ್ತು ಬ್ರಾಹ್ಮಣ ಹಿನ್ನೆಲೆಯ ಈ ಶರಣರ ತ್ಯಾಗ ಭಾರತದ ಹೊಸ ಸಮಾಜ ವ್ಯವಸ್ಥೆಗೆ ದಾರಿದೀಪವಾಗಿದೆ. ಇಂಥ ಒಂದು ಘಟನೆ ಭಾರತದ ಇತಿಹಾಸದಲ್ಲಿ ನಡೆದ ದಾಖಲೆ ಇಲ್ಲ. ಈ ಅನನ್ಯ ಘಟನೆ ಇಂದು ದೇಶಾದ್ಯಂತ ಪ್ರಚಾರವಾಗಬೇಕಿದೆ.

ಹರಳಯ್ಯ ಮಧುವರಸರ ಮಕ್ಕಳ ಮದುವೆ ವಿಲೋಮ ವಿವಾಹವಲ್ಲ. ಎರಡೂ ಮನೆತನಗಳವರು ಇಷ್ಟಲಿಂಗಧಾರಿಗಳಾಗಿ ಲಿಂಗವಂತರಾಗಿದ್ದರಿಂದ ಆ ಮದುವೆ ಲಿಂಗವಂತರ ಮದುವೆಯಾಗಿತ್ತು. ನಡೆ-ನುಡಿ ಸಿದ್ಧಾಂತದಂತೆ ನಡೆದುಕೊಂಡ ಶರಣರು ಈ ಮದುವೆಯ ಮೂಲಕ ತಾವು ಜಾತಿಯನ್ನು ನಿರ್ನಾಮ ಮಾಡುವ ಮಹತ್ಕಾರ್ಯದಲ್ಲಿ ತೊಡಗಿದ್ದೇವೆ ಎಂಬುದನ್ನು ಸೂಚಿಸಿದರು. ಅವರು ಮನುಧರ್ಮದ ಶಾಸ್ತ್ರ ಮತ್ತು ಬಿಜ್ಜಳನ ರಾಜ್ಯದ ಶಸ್ತ್ರಗಳನ್ನು ಏಕಕಾಲಕ್ಕೆ ಎದುರು ಹಾಕಿಕೊಂಡಿದ್ದರು. ಅದರ ದುಷ್ಪರಿಣಾಮದ



ಅರಿವು ಅವರಿಗಿತ್ತು. ಆದರೆ ನುಡಿದಂತೆ ನಡೆಯಲೇಬೇಕಿತ್ತು. ಈ ದೃಢನಿರ್ಧಾರವನ್ನು ಕಾರ್ಯಗತಗೊಳಿಸಿದ್ದರಿಂದಲೇ ವೈದಿಕರು ಮನುಧರ್ಮದ ಪ್ರಕಾರ ಹರಳಯ್ಯ-ಮಧುವರಸರಿಗೆ ಶಿಕ್ಷೆಯಾಗಬೇಕೆಂದು ಒತ್ತಾಯಿಸಿದರು. ಬಿಜ್ಜಳ ತನ್ನ ಮಂತ್ರಿಮಂಡಲದ ವೈದಿಕರನ್ನು ಎದುರುಹಾಕಿಕೊಳ್ಳುವ ಶಕ್ತಿಯನ್ನು ಹೊಂದಿರಲಿಲ್ಲ. ರಾಜ ಯಾರೇ ಇರಲಿ, ಮಂತ್ರಿಮಂಡಲ ವೈದಿಕರ ಹಿಡಿತದಲ್ಲಿರುವುದು ಅನಿವಾರ್ಯವಾಗಿತ್ತು. ಈ ಅನಿವಾರ್ಯತೆಯನ್ನು ಭಾರತದ ಬಹುಪಾಲು ರಾಜರು ಅನುಭವಿಸಿದ್ದಾರೆ. ಇದಕ್ಕೆ ಬಿಜ್ಜಳ ಹೊರತಾಗಿರಲಿಲ್ಲ. ಕಲ್ಯಾಣದಲ್ಲಿ ಪ್ರತಿಗಾಮಿ ಮತ್ತು ಪುರೋಗಾಮಿ ವಿಚಾರಗಳ ತಾಕಲಾಟ ತಾರಕಕ್ಕೇರಿತ್ತು. ಪ್ರತಿಗಾಮಿ ವೈದಿಕ ಶಕ್ತಿಗೆ ಬಿಜ್ಜಳ ಮಣಿದಾಗ, ಮಂತ್ರಿಮಂಡಲವನ್ನೇ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದ ವೈದಿಕರ ಆಜ್ಞೆಯಂತೆ ಸೈನಿಕರು ಸಾತ್ವಿಕ ಶರಣರ ಮೇಲೆ ಹರಿಹಾಯ್ದರು. ಆಗ ಕಲ್ಯಾಣನಗರ ಗೊಂದಲದ ಗೂಡಾಯಿತು. ಏತನ್ಮಧ್ಯೆ ಹರಳಯ್ಯ ಮತ್ತು ಮಧುವರಸರನ್ನು ಆನೆಕಾಲಿಗೆ ಕಟ್ಟಿ ಚಿತ್ರಹಿಂಸೆ ನೀಡಲಾಯಿತು. ಸುಲಿಗೆ ಮತ್ತು ಅಸಮಾನತೆ ಇಲ್ಲದ ನವಸಮಾಜದ ಕನಸು ಕಂಡಿದ್ದ ಹರಳಯ್ಯ-ಮಧುವರಸರು ಈ ಎಳೆಹೂಟೆ ಶಿಕ್ಷೆಯಿಂದಾಗಿ ಹುತಾತ್ಮರಾದರು.

ಈ ದುರಂತದ ನಂತರ ಕಲ್ಯಾಣದಲ್ಲಿ ಯಾವ ರೀತಿಯ ಅಮಾನವೀಯ ಕೃತ್ಯಗಳು ಜರುಗಿದವು? ಶರಣರು ಯಾವ ನಿರ್ಧಾರ ಕೈಗೊಂಡರು? ಎಂಬುದನ್ನು ಜನಪದ ಕವಿಯೊಬ್ಬ ಹೃದಯಸ್ಪರ್ಶಿಯಾಗಿ ತ್ರಿಪದಿಗಳನ್ನು ರಚಿಸಿದ್ದಾನೆ.

ಮಧುವರಸ ಹರಳಯ್ಯ ಹೋದ ದಿನ ಶಿವನಡಿಗೆ
ಬೀದಿ ಬೀದಿಗಳು ಕಿಡಿಕಾರಿ/ ಕಲ್ಯಾಣ
ಗಾದಿ ಹೌಹಾರಿ ತಳಮಳಿಸಿ//

ಅಂದು ಸಂಜೆಗೆ ಶಿವನೆ ಹೊಂದಿ ಮಂಟಪ ಕೂಡಿ
ಬಂದ ಬವಣೆಯನು ಕಳೆಯುದಕೆ/ ದಂಡೇಳ
ಸಂದಣಿಗೆ ಉಳವಿ ಸೇರೆಂದ//

ವಚನ ಮಂಟಪದೊಳಗೆ ವಚನಗಳ ಮಳೆ ಸುರಿದು
ಶುಚಿ ಹೊಂದಿ ಜಗವು ಅನುಭಾವ/ ಬಿತ್ತಿದರು
ಉಚಿತ ಹೊಸಮತದ ಬೆಳೆ ಬಂತು//

ಬಿಚ್ಚುಗತ್ತಿಯ ಮಾಚ ಕೆಚ್ಚೆದೆಯ ಬಂಟನವ
ರೊಚ್ಚ ಬೊಮ್ಮಯ್ಯ ಜಗದೇವ/ ನಿಮ್ಮಾಣೆ
ನುಚ್ಚು ಬಿಜ್ಜಳನ ಕಡಿಯುವೆವು//

ಬಿಜ್ಜಳನ ವಧೆಯಾತು ಹೆಜ್ಜೆ ಮೀರಿತು ನಾಡು
ಕಜ್ಜ ಹದಗೆಟ್ಟು ಶಿವಶರಣ/ ರೂಳಿಗವು
ಸಜ್ಜುಗೇಡಾಗಿ ಊರ್ಬಿಟ್ಟು//

ಅಳಿಯ ಬಿಜ್ಜಳರಾಯ ಕೊಲೆಯ ಕೇಳುತಲಿದ್ದ
ತಳಮಳಿಸಿ ಬಳಗ ಕೂಡಿಸಿದ/ ದಂಡೆತ್ತಿ
ಉಳುವೆ ಬಳಿ ಅವರ ತಡೆಗಟ್ಟ//

ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟ ಜೈನರು/ ಮುರಗೋಡ
ಹಾದಿಯೊಳು ಮುರಿದ ಮಾಚಯ್ಯ//

ಹೀಗೆ ಕಲ್ಯಾಣ ಹತ್ಯಾಕಾಂಡದ ನಂತರ ವಚನಗಳ ರಕ್ಷಣೆಗಾಗಿ ಶರಣರನೇಕರು ಉಳವಿಯ ಹಾದಿ ಹಿಡಿದದ್ದು ಈ ತ್ರಿಪದಿಗಳಿಂ[illegible] ತಿಳಿದುಬರುತ್ತದೆ.

ನಮ್ಮ ವಿದ್ವಾಂಸರು ಈ ಜನಾಂಗಹತ್ಯೆಯನ್ನು ರಮ್ಯವಾಗಿ "ಕಲ್ಯಾಣಕ್ರಾಂ[illegible] ಎಂದು ಬಣ್ಣಿಸುತ್ತಲೇ ಬಂದಿದ್ದಾರೆ. ಈ ಜನಾಂಗಹತ್ಯೆ ಕಲ್ಯಾಣಕ್ರಾಂತಿ ಅ[illegible] ಕಲ್ಯಾಣದಲ್ಲಿ ನಡೆಯಲಿದ್ದ ಬಸವಕ್ರಾಂತಿಯನ್ನು ತಡೆದಂಥ ಕ್ಷಿಪ್ರಕ್ರಾಂತಿ ಇ[illegible] ಶರಣಸಂಕುಲದಲ್ಲಿ ಬಸವಣ್ಣನವರು ನವಜನಾಂಗವನ್ನು ಸೃಷ್ಟಿಸಿದ್ದರು. ನವಜನಾಂಗ ಜಾತಿ, ವರ್ಗ, ವರ್ಣ, ಲಿಂಗ ಮುಂತಾದ ಎಲ್ಲ ತೆರನ[illegible] ಭೇದಗಳನ್ನು ತಿರಸ್ಕರಿಸಿತ್ತು. ಎಲ್ಲ ಕಾಯಕಗಳಿಗೆ ಅಲ್ಲಿ ಸಮಾನ ಗೌರವವಿ[illegible] ಜಾತಿಗಳನ್ನು ನಿರ್ನಾಮ ಮಾಡಿದ ಅವರು, ಜಾತಿಗಳ ಹೆಸರುಗಳನ್ನು ಅ[illegible] ಕಾಯಕಗಳ ಹೆಸರಾಗಿ ಬಳಸುತ್ತ ಆತ್ಮಗೌರವದೊಂದಿಗೆ ಸಮಾನತೆಯ[illegible] ಸಾಧಿಸಿದ್ದರು. ಈ ನವಜನಾಂಗ ಹತ್ಯೆಗೆ ಪಟ್ಟಭದ್ರ ಹಿತಾಸಕ್ತಿಗಳು [illegible] ಹುಡುಕುತ್ತಿದ್ದವು. ಹರಳಯ್ಯ-ಮಧುವರಸರ ಮಕ್ಕಳ ಮದುವೆಯನ್ನು ಅವ[illegible] ತಮ್ಮ ಕ್ರೌರ್ಯ ಪ್ರದರ್ಶನಕ್ಕೆ ಬಳಸಿಕೊಂಡರು.

ಮುಂಬರುವ ಸಾಧಕಬಾಧಕಗಳ ಅರಿವಿನೊಂದಿಗೇ ಈ ಮದುವೆ ನಡೆಯಿ[illegible] ಶರಣಸಂಕುಲದಲ್ಲಿ ಅನೇಕ ಪರಿಮಾಣಾತ್ಮಕ ಬದಲಾವಣೆಗಳು ಉಂಟಾಗಿದ್ದ[illegible] ಅಂತೆಯೆ ಅವರಿಗೆ ಈ ಗುಣಾತ್ಮಕ ಬದಲಾವಣೆಯ ತೀವ್ರತೆ ಹೆಚ್ಚಿತು.

ಶಿವಶರಣ ದುಂಬಿಗಳು ಭವದೊಳಗೆ ಹಾರ್ಯಾರಿ
ಶಿವಮತದ ಹುಟ್ಟು ಕಟ್ಟಿದವು/ ವಚನಗಳು
ಸವಿದುಳಿದಿರುವ ಹೊಸಜೇನು//

ಮಲ್ಲಿಗೆ ಇದ್ದಾಗ ಮುಳ್ಳೇಕೆ ಮುಡಿಯುತೀ
ಕಲ್ಯಾಣದಲ್ಲಿ ಬಸವಯ್ಯ/ ಇದ್ದಾಗ
ಕಲ್ಲಿಗೇಕೆ ಕೈಯ ಮುಗಿಯುವಿ//

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕ/ ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು//

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು/ ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ//

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ
ಭಲರೆ ಬಸವಯ್ಯ ಬಸವರಸ/ ನಿನ್ನುಸುರು
ನೆಲೆಯಾತು ನಿತ್ಯ ಜನಪದಕೆ//

ಸಾಧು ಸಾಧಲೆ ಬಸವ ಓದು ಕಲಿಯಿತು ಜನವು
ಹೋದಹೋದಲ್ಲಿ ಹೊಸಮಾತು/ ಕೇಳಿದವು
ಮೇದಿನಗೆ ಬಂತು ಹೊಸ ಬೆಳಕು//

ಕಾಯಕವ ಕಲಿಸುದಕೆ ನಾಯಕನು ಬಸವಯ್ಯ
ಜೀಯ ಹೊಸಮತಕ್ಕಯ ಶಿವಭಕ್ತ/ ಸಾರುದಕೆ
ರಾಯ ಜೀವನದ ಹೊಸ ನುಡಿಗೆ//

ದಾಸೋಹಿ ಬಸವಣ್ಣ ದಾಸೋಹ ಕಲಿಸಿದನು
ದೇಶ ದೇಶೆಲ್ಲ ಕೇಳುತಲಿ/ ಹೊಸ ಮಾತ
ಮಾಸಿದವು ವೇದ ಹುಸಿಯೆಂದು//

ಮಿಧ್ದಿದನು ಶಿವಗೋಷ್ಠಿ ಬಿದ್ದ್ವು ವೇದಗಳೆಂದು
ಹುದ್ದೆ ಹೊಂದಿದವು ಜಗದೊಳಗೆ/ ವಚನಗಳ
ಸುದ್ದಿ ನಾಡ್ ತುಂಬಿ ಜನ ಹಿಗ್ಗಿ//

ಹರಳಯ್ಯ-ಮಧುವರಸ ಮಕ್ಕಳ ಮದುವೆಗೆ ಮೊದಲು ಶರಣಸಂಕುಲದ[illegible] ಪರಿಮಾಣಾತ್ಮಕ ಬದಲಾವಣೆ ಇದು. ಈ ಕಾರಣದಿಂದಲೇ ಮನುವಾದಿ[illegible] ಶರಣರ ಬಗ್ಗೆ ಭಾರಿ ಭಯ ಉಂಟಾಯಿತು.

ಕೊಂಡಿಗಳು ಹಾರುವರು ಕಂಡು ಮಂಟಪಕಂಜಿ
ಹಿಂಡುವುದು ನಮ್ಮ ಶಿವಮತವು/ ನಾಡೊಳಗೆ
ಬಂಡು ಎಬ್ಬಿಸುವುದೇ ಲೇಸೆಂದು//

ಹೀಗೆ ಪಟ್ಟಭದ್ರ ಹಿತಾಸಕ್ತಿಗಳು ಏನಾದರೂ ಕ್ಯಾತೆ ತೆಗೆದು ಶರಣ[illegible] ಸದೆ ಬಡಿಯುವ ಬಗ್ಗೆ ಲೆಕ್ಕಹಾಕತೊಡಗಿದವು. ಜನ ಮಂಟಪ (ಸಭೆ) ಸೇರುವ[illegible] ಮತ್ತು ಅನುಭವಮಂಟಪದಲ್ಲಿ ಹೊಸ ವಿಚಾರಗಳಿಂದ ಪ್ರಭಾವಿತರಾಗುವು[illegible] ಆ ದುಷ್ಟಶಕ್ತಿಗಳು ಗಮನಿಸಿದವು. ವರ್ಣಾಶ್ರಮ ಧರ್ಮವಾದ ಮನು[illegible] ವೈದಿಕಧರ್ಮವು ಜಾತಿ, ಅಸ್ಪೃಶ್ಯತೆ, ಶೋಷಣೆ ಮತ್ತು ಲಿಂಗಭೇದಗಳ ಮೇ[illegible] ನಿಂತಿದೆ. ಈ ಅನ್ಯಾಯದ ಆಚರಣೆಗಳಿಲ್ಲದೆ ವೈದಿಕಧರ್ಮ ಅಸ್ತಿತ್ವದಲ್ಲಿ[illegible] ಸಾಧ್ಯವೇ ಇಲ್ಲ. ಆದರೆ ಶರಣರ ಹೊಸಧರ್ಮ ಈ ಎಲ್ಲ ಅಸಮಾನತೆಗ[illegible] ನಿರ್ನಾಮ ಮಾಡುವ ಗುರಿಯನ್ನು ಹೊಂದಿದೆ. ಅಂತೆಯೆ ಭಯಭೀತ[illegible]

ಹೊಸ ಮಾನವೀಯ ವ್ಯವಸ್ಥೆಯನ್ನು ಬಗ್ಗು ಬಡಿಯುವ ಉದ್ದೇಶದಿಂದ ...ವರ್ತಾರಿ ಹೇಳಿಕೆಗಳನ್ನು ನೀಡುತ್ತ ಭಾರಿ ಗೊಂದಲ ಸೃಷ್ಟಿಸಿದರು. ...ಟೆ ನಂತರ ನಡೆದ ಸೈನಿಕ ಕಾರ್ಯಾಚರಣೆಯಿಂದಾಗಿ ಪರಿಸ್ಥಿತಿ ...ಕೋಪಕ್ಕೆ ಹೋಯಿತು. ಅಗಣಿತ ಸಾವುನೋವುಗಳು ಸಂಭವಿಸಿದವು. ...ಳಿದುಳಿದ ಶರಣರಲ್ಲಿ ಅನೇಕರು ತಮಗೆ ದಾರಿತೋಚಿದ ಕಡೆ ...ು. ಮತ್ತೆ ಕೆಲವರು ವಚನಕಟ್ಟುಗಳ ರಕ್ಷಣೆಯ ಹೊಣೆ ಹೊತ್ತು ...ಯ ಕಡೆಗೆ ನಡೆದರು. ಹೀಗೆ ಹೋಗುವ ಸಂದರ್ಭದಲ್ಲಿ ಅವರು ...ಸ್ಯವಾದ ವಚನಕಟ್ಟುಗಳನ್ನು ನಂಬಿಗಸ್ತರ ಮನೆಗಳಲ್ಲಿ ರಕ್ಷಿಸಲು ಕೊಟ್ಟು ...ತ್ತಿದ್ದರು. ಕಲ್ಯಾಣದಿಂದ ಸೇಡಂ ಮೂಲಕ ಹಾದುಹೋಗುತ್ತಿದ್ದ ...ಬಿಜನಳ್ಳಿಯಲ್ಲಿ ತಂಗಿದ್ದಾಗ ಅಲ್ಲಿನ ನಂಬಿಗಸ್ತರೊಬ್ಬರ ಮನೆಯಲ್ಲಿ ...ವ ಉದ್ದೇಶದಿಂದ, ಹರಳಯ್ಯನವರು ಬಸವಣ್ಣನವರಿಗೆ ಕೊಡಲು ...ದ ಚಮ್ಮಾವುಗೆಗಳನ್ನು ಕೊಟ್ಟರು. ಆ ಚಮ್ಮಾವುಗೆಗಳನ್ನು ಪಡೆದುಕೊಂಡ ...ವರು ಶತಮಾನಗಳಿಂದ ರಕ್ಷಿಸಿಕೊಂಡು ಬಂದರು. ಕಳೆದ ಶತಮಾನದಲ್ಲಿ ...ಸಿಯೊಬ್ಬ ಅವು ಪೂಜಾರ್ಹ ವಸ್ತುಗಳೆಂದು ಹೇಳಿದ. ಅವುಗಳನ್ನು ...ರಿನಲ್ಲಿ ತೊಳೆದು ಪೂಜೆ ಮಾಡತೊಡಗಿದ. ಉತ್ಕೃಷ್ಟ ಕಲಾಕೃತಿಗಳಂತಿದ್ದ ...ವುಗಳನ್ನು ವಿರೂಪಗೊಳಿಸಿದ. ಅವುಗಳ ಅಟ್ಟೆಯ ಭಾಗ ಮಾತ್ರ ... ಅವು ಜಾರದಂತೆ ಚರ್ಮ ಹೆಣೆದ ಕ್ರಮ ಅನನ್ಯವಾಗಿದೆ. ಶರಣರು ...ಾಯಕದ ಮೂಲಕ ಸಿದ್ಧಾಂತವನ್ನು ರೂಪಿಸಿದ್ದಷ್ಟೇ ಅಲ್ಲದೆ ತಾವು ...ಸುವ ಉತ್ಪನ್ನಗಳು ಉನ್ನತ ದರ್ಜೆಯೊಂದಿಗೆ ಕಲಾತ್ಮಕವಾಗಿರಬೇಕು ...ತೆಯನ್ನು ಹೊಂದಿದ್ದರು ಎಂಬುದಕ್ಕೆ ಈ ಚಮ್ಮಾವುಗೆಗಳು ...ಗಿವೆ. ಹರಳಯ್ಯನವರು ಚಮ್ಮಾವುಗೆಗೆ ಬಳಸಿದ ರೇಷ್ಮೆ ಗೊಂಡೆಗಳು ...ದಾಟ ಕೋಲಾಪುರಿ ಚಪ್ಪಲಿಗಳ ಹಾಗೆ ಕಂಡರೂ ತಮ್ಮದೇ ಆದ ...ವನ್ನು ಹೊಂದಿವೆ. ಚೂಪಾದ ಮುಂಭಾಗದ ಮೇಲೆ ಕಲಾತ್ಮಕವಾದ ... ಹೊದಿಗೆ ಇದ್ದ ಹಾಗೆ ತೋರುತ್ತದೆ.

...ಳಯ್ಯನವರ ಬಲದೊಡೆಯ ರೂಪಾಯಿ ಅಗಲದ ಚರ್ಮ ಬಲಗಾಲಿನ ...ಗೆಯಲ್ಲಿದ್ದರೆ, ಹರಳಯ್ಯನವರ ಪತ್ನಿ ಕಲ್ಯಾಣಮ್ಮನವರ ಎಡದೊಡೆಯ ... ಅಗಲದ ಚರ್ಮ ಎಡಗಾಲಿನ ಚಮ್ಮಾವುಗೆಯಲ್ಲಿದೆ. ಈ ...ಗಳು ಮಾನವರ ಚರ್ಮದವು ಎಂಬುದು ಪ್ರಯೋಗಾಲಯದಲ್ಲಿ ...ಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಈ ತುಣುಕುಗಳನ್ನು ಹಿಮ್ಮಡಿ ...ಕೆಳಭಾಗದಲ್ಲಿನ ಅಟ್ಟೆಯ ಒಳಗಡೆ, ಪ್ರಾಣಿಚರ್ಮದ ಪದರುಗಳ ...ಇಡಲಾಗಿದೆ. ಈ ಅನುಪಮ ತ್ಯಾಗದ ಚರ್ಮದ ತುಕಡಿಗಳಿಗೆ ...ಮಾನವಕುಲ ತಲೆಬಾಗಬೇಕಿದೆ.

ಈ ಚಮ್ಮಾವುಗೆಗಳನ್ನು ದೇವರ ಚಮ್ಮಾವುಗೆಗಳೆಂದು ತಲೆಯ ...ಮೇಲಿಟ್ಟುಕೊಂಡ ಬಸವಣ್ಣನವರು ಹರಳಯ್ಯ ದಂಪತಿಗೆ ಮರಳಿಸಿದಾಗ ...ಶ್ರದ್ಧೆಯಿಂದ ಅವುಗಳನ್ನು ಹೊತ್ತುಕೊಂಡು ತಮ್ಮ ಮನೆಯ ಕಡೆಗೆ ...ಾಗ, ದಾರಿಮಧ್ಯೆ ಮಧುವರಸ ಮಂತ್ರಿ ಆ ಚಮ್ಮಾವುಗೆ ಬೇಕೆಂದು ...ರದಿಂದ ಹಟ ಮಾಡಿದ. ಒತ್ತಾಯದಿಂದ ಕಸಿದುಕೊಂಡು ಧರಿಸಿದ ... ಅವನ ಶರೀರದಲ್ಲಿ ಬೆಂಕಿ ಬಿದ್ದಂತಾಯಿತು. ಆ ಉರಿಯು ಆತನನ್ನು ...ಡಗಿತು. ಯಾವ ವೈದ್ಯನಿಂದಲೂ ಮಧುವರಸನ ಮೈಯುರಿಯನ್ನು ...ಗೊಳಿಸಲಿಕ್ಕಾಗಲಿಲ್ಲ. ಕೊನೆಗೆ ಬಸವಣ್ಣನವರ ಸಲಹೆ ಮೇರೆಗೆ ಮಧುವರಸರ ...ಯೊಂದಿಗೆ ತೆಗೆದುಕೊಂಡು ಹರಳಯ್ಯನವರ ಮನೆಗೆ ಹೋದಳು. ...ಚಮ್ಮಾವುಗೆಗಳನ್ನು ಮಾಡುವಾಗ ಬಳಸುವ ಬಾನಿಯಲ್ಲಿನ ನೀರನ್ನು ...ಕೊಂಡು ಬಂದು ಅದರಿಂದ ಮಧುವರಸನಿಗೆ ಸ್ನಾನ ಮಾಡಿಸಿದ ...ಲೇ ಆತನ ಮೈಯುರಿ ಮಾಯವಾಗುತ್ತದೆ ಎಂಬ ಪವಾಡವು ...ಕವಾಗಿದ್ದು, ಹುದ್ದೆ ಮತ್ತು ಕುಲ ಮದಗಳ ಕ್ರೌರ್ಯವನ್ನು ಮತ್ತು ಆ ಕ್ರೌರ್ಯವನ್ನು ದಮನಗೊಳಿಸುವ ಶಕ್ತಿ ಕಾಯಕಜೀವಿಗಳಿಗೆ ಇದೆ ಎಂಬುದನ್ನು ಸೂಚಿಸುತ್ತದೆ.

ಹರಳಯ್ಯ ಮತ್ತು ಕಲ್ಯಾಣಮ್ಮ ದಂಪತಿಯ ನಿಷ್ಠೆ ಮತ್ತು ಭಾವಪೂರ್ಣತೆ ಬಸವಣ್ಣನವರ ಮೇಲೆ ಆಳವಾದ ಪರಿಣಾಮ ಬೀರಿತು. ಅಂತೆಯೆ ಅವರು ಆ ಕ್ಷಣ ಭಾವಪರವಶರಾಗಿ ಆ ಚಮ್ಮಾವುಗೆಗಳನ್ನು ತಲೆಯ ಮೇಲಿಟ್ಟುಕೊಳ್ಳಲು ಸಾಧ್ಯವಾಯಿತು. ನಂತರ ಬಸವಣ್ಣನವರು ಆ ಚಮ್ಮಾವುಗೆಗಳನ್ನು ಕಾಯಕಜೀವಿಗಳ ತಾತ್ವಿಕ ಸಂಕೇತವಾಗಿ ಬಳಸಿದರು.

ಕಾಗೆ ಎಷ್ಟಿಸುವ ಹೊನ್ನಕಳಸವಹುದರಿಂದ
ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯಾ
ಅಯ್ಯಾ ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯಾ
ಕೂಡಲಸಂಗಮದೇವಾ,
ನಿಮ್ಮ ಸೆರಗೊಡ್ಡಿ ಬೇಡುವುದೊಂದೇ ವರವ ಕರುಣಿಸಯ್ಯಾ

ಎಂದು ಬಸವಣ್ಣನವರು ತಿಳಿಸಿದಲ್ಲಿ ಕಾಯಕಜೀವಿಗಳ ಘನತೆ ಅಡಗಿದೆ ಮತ್ತು ಒಣಪ್ರತಿಷ್ಠೆಯ ಗುಡಿ, ಗೋಪುರ ಮತ್ತು ಸ್ಥಾವರ ಸ್ಥಾಪನೆಯನ್ನು ಅಲ್ಲಗಳೆಯಲಾಗಿದೆ. ಅವರು ಇಡೀ ಚಳವಳಿಯ ಮುಂಚೂಣಿಯ ನಾಯಕರೆಂಬುದನ್ನು ಅನೇಕ ವಚನಗಳಲ್ಲಿ ಅಲ್ಲಗಳೆಯುತ್ತಲೇ ಬಂದಿದ್ದಾರೆ. ಅವರಿಗೆ ಕಟ್ಟಕಡೆಯ ಮನುಷ್ಯನಾಗಿರುವುದೇ ಶ್ರೇಯಸ್ಕರವಾಗಿದೆ. ಅಷ್ಟೇ ಅಲ್ಲ ಶರಣತತ್ವಗಳನ್ನು ಸಾರುವ ಬಡಜಂಗಮರಿಗೆ ಮತ್ತು ಶರಣರು ಹಾಕಿಕೊಳ್ಳುವ ಚಮ್ಮಾವುಗೆಯ ಮಾಡಯ್ಯ ಎಂದು ಕೂಡಲಸಂಗಮದೇವರಲ್ಲಿ ಬೇಡಿಕೊಳ್ಳುತ್ತಾರೆ. ಹೊನ್ನಕಳಸದ ಮೇಲೆ ಕೂಡ ಕಾಗೆಗಳು ಮಲವಿಸರ್ಜನೆ ಮಾಡುತ್ತವೆ. ಹಾಗೆ ಹೊನ್ನಕಳಸವಾಗುವುದಕ್ಕಿಂತಲೂ ಶರಣರ ಚಮ್ಮಾವುಗೆಯಾಗುವುದೇ ಲೇಸು ಎಂದು ಕಾಯಕಜೀವಿಗಳ ಮಹತ್ವವನ್ನು ಎತ್ತಿ ಹಿಡಿಯುತ್ತಾರೆ.

ಆದರೆ ಇಂದು ಏನಾಗುತ್ತಿದೆ? ಬಸವಣ್ಣ ಹಲವರ ಪ್ರತಿಷ್ಠೆಯ ಸಂಕೇತವಾಗುತ್ತಿದ್ದಾರೆ. ಬಸವಣ್ಣನವರ ಮೂರ್ತಿಯ ಮೂಲಕ ತಮ್ಮ ಕೀರ್ತಿಯನ್ನು ಅಜರಾಮರಗೊಳಿಸುವ ಹವಣಿಕೆಯಲ್ಲಿದ್ದಾರೆ. ಅವಲೋಹದಂತವರನ್ನು ಚಿನ್ನದಂತಾಗಿಸುವ ಪುರುಷಮೂರ್ತಿ ಬಸವಣ್ಣನವರನ್ನು ಕಂಚಿನ ಪುತ್ಥಳಿಯಾಗಿಸುವುದು ಯಾವ ನ್ಯಾಯ? ಬಸವಣ್ಣನವರು ತಮ್ಮ ವಚನಗಳಲ್ಲಿ ಉಸಿರಾಡುತ್ತಿದ್ದಾರೆ ಹೊರತಾಗಿ ಮೂರ್ತಿಗಳಲ್ಲಿ ಅಲ್ಲ. ಸ್ಥಾವರ ಪ್ರತಿಷ್ಠೆ ನಾಯಕ ನರಕ ಎಂದು ಹೇಳಿದ ಬಸವಣ್ಣನವರ ಮೂರ್ತಿಯನ್ನು ಸ್ಥಾಪಿಸುವುದರಿಂದ ಅವರನ್ನು ಹೊನ್ನಶೂಲಕ್ಕೇರಿಸಿದಂತಾಗುತ್ತದೆ.

ಎಲ್ಲೆಡೆ ಹಿಂಸೆಯನ್ನು ಅನುಭವಿಸುತ್ತಿರುವ **21**ನೇ ಶತಮಾನದ ಜಗತ್ತು ಬಸವತತ್ತ್ವಗಳಿಗಾಗಿ ಕಾತರಗೊಂಡಿದೆ ಹೊರತಾಗಿ ಬಸವಣ್ಣನವರ ಮೂರ್ತಿಗಳಿಗಲ್ಲ ಎಂಬುದನ್ನು ಮಾತಾಜಿ, ಪಿತಾಜಿ, ಅಕ್ಕಾಜಿ, ಅಣ್ಣಾಜಿ, ಸ್ವಾಮೀಜಿ ಮತ್ತು ಆಧುನಿಕ ಶರಣರು ಎಷ್ಟು ಬೇಗ ಅರಿತುಕೊಳ್ಳುವರೋ ಅಷ್ಟುಬೇಗ ದೇಶಕ್ಕೆ ಮತ್ತು ಜಗತ್ತಿಗೆ ಒಳ್ಳೆಯದಾಗುತ್ತದೆ.


ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ವಚನಸಂಪುಟಗಳು ಕಾಗುಣಿತ, ಅಪಾರ್ಥ, ಪುನರಾವರ್ತನೆ, ಅಪೂರ್ಣ ವಚನ, ವಚನಾಂಕಿತಗಳಿಲ್ಲದ ವಚನ, ಗೊಂದಲಗಳಿಂದ ಕೂಡಿದ ಅಕಾರಾದಿ ಮತ್ತು ಶರಣರು ವಿರೋಧಿಸಿದ ವೇದಾಗಮಗಳಲ್ಲಿನ ಸಂಸ್ಕೃತ ಶ್ಲೋಕಗಳ ಹಾವಳಿ ಮುಂತಾದ ದೋಷಗಳಿಂದಾಗಿ ಕಸವೂ ರಸವೂ ಒಂದೇ ಕಡೆಯಲ್ಲಿ ಇದ್ದಂತಾಗಿದೆ. ಬಸವತತ್ತ್ವ ಉಳಿಸುವುದಕ್ಕಾಗಿ ಮೊದಲಿಗೆ ವಚನಗಳಲ್ಲಿನ ದೋಷಗಳ ನಿವಾರಣೆಗಾಗಿ ಪ್ರಯತ್ನಿಸುವುದು ಬಹುಮುಖ್ಯವಾಗಿದೆ. ಇದಕ್ಕಾಗಿ ನೂರಾರು ಜನ ವಚನಪ್ರಿಯರು, ವಚನತಜ್ಞರು ಮತ್ತು ತಾಡೋಲೆ ಪರಿಣತರನ್ನು ಒಳಗೊಂಡ ವಚನ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಬೇಕಿದೆ.

ಬೆಳಿಗ್ಗೆ ಟಿ.ವಿ. ಹಚ್ಚಿದ ಕೂಡಲೆ ಮೂಢನಂಬಿಕೆಯನ್ನು ಬಿತ್ತರಿಸುವವರೇ ಬಹುಪಾಲು ಟಿ.ವಿ.ಗಳನ್ನು ಆಕ್ರಮಿಸಿಕೊಂಡಿರುವುದನ್ನು ಕಾಣುತ್ತೇವೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ಎಂದು ಹೇಳಿಕೊಳ್ಳುವ ಚಾನಲ್‌ಗಳು ಕೂಡ ಜನರು ಯಥಾಸ್ಥಿತಿವಾದಿಗಳಾಗುವಂತೆ ನೋಡಿಕೊಳ್ಳುತ್ತಿವೆ. ಸಮಾಜದಲ್ಲಿ ನಡೆಯುವುದೆಲ್ಲವೂ ದೇವಲೀಲೆ ಎಂಬಂತೆ ಅವು ಬಿಂಬಿಸುತ್ತಿವೆ. ಬೆಲೆ ಏರಿಕೆಗೆ, ನಿರುದ್ಯೋಗಕ್ಕೆ, ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರಕ್ಕೆ, ಕೋಮುಗಲಭೆಗಳಿಗೆ, ಜಾತಿಸಂಘರ್ಷಗಳಿಗೆ, ಅರಣ್ಯನಾಶಕ್ಕೆ ದೇವರೇ ಕಾರಣ ಎನ್ನುವಂಥ ಸ್ಥಿತಿಗೆ ಟಿ.ವಿ.ಗಳು ನಮ್ಮನ್ನು ಒಯ್ಯುವ ಸಾಧ್ಯತೆಗಳಿವೆ. ಹೀಗಾಗಿ ಮೂಢನಂಬಿಕೆಯವರು ಮತ್ತು ಭ್ರಷ್ಟಾಚಾರಿಗಳು ದೇಶದಲ್ಲಿ ನಾಚಿಕೆ ಇಲ್ಲದೆ ತಲೆ ಎತ್ತಿ ತಿರುಗುವಂಥ ವಾತಾವರಣ ಈಗಾಗಲೇ ನಿರ್ಮಾಣವಾಗಿದೆ. ಬಸವಾದಿ ಶರಣರ ತತ್ತ್ವಗಳನ್ನು ಜನಸಮುದಾಯಕ್ಕೆ ತಿಳಿಹೇಳುವ ಬಸವಚಾನಲ್ ಅವಶ್ಯಕತೆ ಇದೆ. ಈ ಕಡೆಗೆ ಗಮನಹರಿಸುವುದಕ್ಕೆ ಧನವುಳ್ಳ ಸ್ವಾಮಿಗಳಿಗೆ ಸಮಯವೇ ಇಲ್ಲ!

ಬೃಹತ್ ಮೂರ್ತಿಗಳಿಗೆ ಖರ್ಚು ಮಾಡುವ ನೂರಾರು ಕೋಟಿ ಹಣದಿಂದ ಬಸವ ಸಂಶೋಧನಾ ಕೇಂದ್ರ ಸ್ಥಾಪಿಸುವುದಷ್ಟೇ ಅಲ್ಲದೆ ಬಸವ ವಿಶ್ವವಿದ್ಯಾಲಯವನ್ನೂ ಸ್ಥಾಪಿಸಬಹುದು. ಬಸವಚಾನಲ್ ಕೂಡ ಆರಂಭಿಸಬಹುದು.

ಅನೇಕ ಕಡೆಗಳಲ್ಲಿ ಮಠದ ಸಂಪತ್ತು ಸ್ವಾಮಿಗಳ ಕೈಯಲ್ಲಿದೆ. ಅನೇಕ ಸ್ವಾಮಿಗಳು ಹಣದ ಆಸೆಗಾಗಿ ಭ್ರಷ್ಟರಾಜಕಾರಣಿಗಳ ಕೈಯಲ್ಲಿದ್ದಾರೆ. ಇವರೆಲ್ಲರ ಮಧ್ಯೆ ಅವರನ್ನು ನಂಬಿದ ಜನರು ಎಡಬಿಡಂಗಿಗಳಾಗುತ್ತಿದ್ದಾರೆ. ಈ ದುರಂತ ಎಲ್ಲ ಧರ್ಮಗಳನ್ನೂ ಆವರಿಸಿಕೊಂಡಿದೆ. ಇನ್ನೂ ಅನೇಕ ಅಕ್ಕಗಳು ಮತ್ತು ಅಣ್ಣಗಳು ಇಂಥ ಮಠಗಳು ಇಲ್ಲದ ಕಾರಣ ತಮ್ಮದೇ ಆದ ಆಶ್ರಮ, ಸೇವಾಪ್ರತಿಷ್ಠಾನ, ಸಮಿತಿ, ಟ್ರಸ್ಟ್ ಮುಂತಾದವುಗಳನ್ನು ಸ್ಥಾಪಿಸುವುದರ ಮೂಲಕ ಜನರಲ್ಲಿ ಮೂಢನಂಬಿಕೆ ತುಂಬುತ್ತಿದ್ದಾರೆ. ಇವರ ಮಧ್ಯೆ ಅನೇಕ ಸಾತ್ವಿಕರೂ ಇದ್ದಾರೆ. ಆದರೆ ಅವರು ಧ್ವನಿ ಇಲ್ಲದವರಾಗಿದ್ದಾರೆ. ಜನ ಜಾಗೃತರಾಗದಿದ್ದರೆ ಮಠದ ಆಸ್ತಿಯನ್ನು ಸ್ವಾಮಿಗಳೇ ಹಾಳು ಮಾಡುವಂಥ ದಿನಗಳು ಬರುವುದರಲ್ಲಿ ತಡವಿಲ್ಲ. ಈಗಾಗಲೇ ಇಂಥ ಅನೇಕ ಘಟನೆಗಳು ನಮ್ಮ ನಾಡಿನಲ್ಲಿ ಸಂಭವಿಸಿದ್ದು ಮಾಧ್ಯಮಗಳಲ್ಲಿ ಚರ್ಚಾಸ್ಪದವಾಗಿವೆ. ಹರಳಯ್ಯನವರ ವಚನಗಳು ಸಿಕ್ಕಿಲ್ಲ. ಆದರೆ ಅವರು ಬಸವಣ್ಣನವರಿಗೆ ಕೊಟ್ಟ ಕಲಾತ್ಮಕ ಚಮ್ಮಾವುಗೆಗಳು ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಬಿಜನಳ್ಳಿ ಗ್ರಾಮದಲ್ಲಿ ಶಿಥಿಲಾವಸ್ಥೆಯಲ್ಲಿವೆ.

ಬಸವಣ್ಣನವರು ಸ್ಪರ್ಶಿಸಿದ ಇನ್ನೊಂದು ಚರವಸ್ತು ಈ ಜಗತ್ತಿನಲ್ಲಿ ಉಳಿದಿಲ್ಲವಾದ ಕಾರಣ ಈ ಚಮ್ಮಾವುಗೆಗಳು ಅಮೂಲ್ಯವಾಗಿವೆ. ಆದರೆ ಸರ್ಕಾರ ಕಣ್ಣುಮುಚ್ಚಿ ಕುಳಿತಿರುವುದರಿಂದ ಅವುಗಳ ಮೇಲೆ ಮಾಲೀಕತ್ವ ಸಾಧಿಸಲು ಕೆಲವರು ಯತ್ನಿಸುತ್ತಿದ್ದಾರೆ. ನಾಡಿನ ಈ ಅಮೂಲ್ಯ ಆಸ್ತಿಯ ಬಗ್ಗೆ ಸರ್ಕಾರಕ್ಕೆ ಪರಿಜ್ಞಾನವೇ ಇಲ್ಲ. ರಾಜ್ಯ ಸರ್ಕಾರ ಕೂಡಲೆ ಕ್ರಮಕೈಗೊಂಡು ಶರಣರ ಈ ಏಕೈಕ ಚರವಸ್ತುವನ್ನು ರಾಷ್ಟ್ರೀಯ ಸೊತ್ತೆಂದು ಘೋಷಿಸಬೇಕು. ಬಸವಕಲ್ಯಾಣ ಪ್ರಾಧಿಕಾರದ ಅಡಿಯಲ್ಲಿ ಬಿಜನಳ್ಳಿಯಲ್ಲಿಯೇ ಈ ಚಮ್ಮಾವುಗೆಗಳಿಗಾಗಿ ನಯನಮನೋಹರವಾದ ಸ್ಮಾರಕಭವನವನ್ನು ನಿರ್ಮಿಸಬೇಕು. ಆ ಮೂಲಕ ಬಿಜನಳ್ಳಿಯನ್ನು ಸಮಾನತೆಯ ಯಾತ್ರಾಸ್ಥಳವನ್ನಾಗಿಸಬೇಕು.



■ ರಂಜಾನ್ ದರ್ಗಾ



...ಾರಿವರು-2

...ದರು ಇವರು
...ದರು ಇವರು
... ಮೇಲೆ
...ಗಬೇಕಾದವರು
...ನೋಡುತ್ತಲೇ
...ಲೆದೇ ಸುಡು
...ಯೇ ಬತ್ತಲಾದರು

...ನದ ಒಂದು ಗಂಟೆಗೆ
...ಬೆಳೆದ. ಸೂರ್ಯ
...ಸಿಗೆ ಬಂದು ಸುಡಲು
... ಸುತ್ತು ಕಾಯುಬೇಕೆಂದರಿಯದವರು

ಎಳೆಯ ಚಂದಿರನ ತೆಳು
ಬೆಳದಿಂಗಳ ಬೆಳಕಲ್ಲಿ
ಸ್ವಪ್ನ ಸೀಮೆಯ ಪ್ರೇಮಿಗಾಗಿ ಕಾದು
ಮನುಷ್ಯ ದಾಳಿಗೆ ಸಿಲುಕಿ
ಛಿದ್ರವಾಗದೆ ಉಳಿದವರು

ದಿವ್ಯ ಮೌನದ ಕಣಿವೆಗಳಲ್ಲಿ
ನಡೆಯುತ್ತಿರುವ ಜೀವಸಂಕುಲದ
ವ್ಯಾಪಾರಕ್ಕೆ ಎಚ್ಚರಿಕೆಯ ಕರೆಗಂಟೆ ಒತ್ತಿ
ಸುಮಧುರ ಬದುಕಿಗೆ ಸ್ವರವಾಗದವರು


ಕಾರ್ಗತ್ತಲೆಯ ಲೆಕ್ಕಾಚಾರಗಳನ್ನು
ಬೆಳಕಿನ ಅಂದಾಜಿನಲ್ಲಿ ಹೋಲಿಸಿ
ಕಾಲನ ನಿಶ್ಯಬ್ದತೆಗೆ, ಹೆಳವನ ಮೌನದ
ಒರೆ ಹಚ್ಚಿ ಅಣಕಿಸುವವರು



ಡಾ|| ಡಿ.ಸಿ.ರಾಜಪ್ಪ ಐಪಿಎಸ್

ಅಗಾಧ ಮಾಹಿತಿಯ ಪರಿಧಿಗಳ ನಡುವೆ

ಅನುರಣನ



ನಮ್ಮ ಸುತ್ತಲಿನ ಜಗತ್ತನ್ನು ಅರ್ಥೈಸಿಕೊಳ್ಳಲು ನಡೆಸಿದ ಹುಡುಕಾಟ ಮತ್ತು ಬೆರಗಿನ ನಡುವೆ ಅವುಗಳನ್ನು ವಿವರಿಸಿದ ರೀತಿಯಲ್ಲಿ ಐಸ್ಯಾಕ್ ನ್ಯೂಟನ್ ಕೊಡುಗೆ ಅಪಾರ. ಇದು ಕೇವಲ ಭೂಮಿಯ ಗುರುತ್ವ ಕುರಿತ ವಿವರಣೆಗಳಿಗಷ್ಟೇ ಅಲ್ಲ, ಚಲನೆ, ಬಲ ಮತ್ತು ಕೆಲಸಗಳನ್ನು ವಿಶ್ವದ ಆಗು ಹೋಗುಗಳ ಮೂಲಕ ಪ್ರಶ್ನಿಸಿ ಉತ್ತರಗಳನ್ನು ಪಡೆಯುವುದರಿಂದ ಅಂತಹ ಹಲವು ಪ್ರಶ್ನೆಗಳಿಗೆ ಕಾರಣವಾಗಿದ್ದಕ್ಕೆ. ಸರಿಸುಮಾರು 1676ರಲ್ಲಿ ಆತ ರಾಬರ್ಟ್ ಹುಕ್‌ಗೆ ಬರೆಯುತ್ತಾರೆ: "ನಾನು ಏನಾದರೂ ಮುಂದೆ ನೋಡುತ್ತಿದ್ದರೆ, ಅದು ದೈತ್ಯ ಸಾಧಕರ ತೋಳುಗಳ ಮೇಲೆ ನಿಂತದ್ದಕ್ಕೆ ಸಾಧ್ಯವಾಗಿದೆ." ವಿಜ್ಞಾನದ ಜಗತ್ತೇ ಹಾಗೆ ಅದೇನಿದ್ದರೂ ಒಗ್ಗೂಡಿದ ಕೆಲಸವೇ. ಇಂದು ಸಂಶೋಧನೆ ಮತ್ತು ಅಧ್ಯಯನದಲ್ಲಿರುವ ವಿಜ್ಞಾನದ ವಿದ್ಯಾರ್ಥಿಗಳೆಲ್ಲರೂ ಕೂಡ ನಮ್ಮೆಲ್ಲರ ಹಿಂದಿನ ದೈತ್ಯ ಸಾಧಕರಾದಂತಹ ಅರಿಸ್ಟಾಟಲ್‌ರಿಂದ ಮೊದಲ್ಗೊಂಡು, ನ್ಯೂಟನ್, ರುದರ್‌ಫೋರ್ಡ್, ಡಾರ್ವಿನ್, ಐನ್‌ಸ್ಟೀನ್‌ರ ಕೆಲಸಗಳ ಶಿಖರದ ಮೇಲೆ ಕುಳಿತು ನೋಡುತ್ತಿರುತ್ತಾರೆ. ವಿಜ್ಞಾನವು ಯಾವಾಗಲೂ ಸಂಚಿತವಾದ ಜ್ಞಾನವೇ. ಅದರ ಓದು ಕೂಡ ಹಾಗೇಯೆ. ಒಟ್ಟಾರೆ ಒಗ್ಗೂಡಿದ ಅರಿವಿನ ಮುಂದೆ ಸದಾ ನೋಡುವ ಕ್ರಮದಲ್ಲಿ ವಿಜ್ಞಾನದ ಆಶಯಗಳಿವೆ. ಆದ್ದರಿಂದ ಯಾವುದೇ ವೈಜ್ಞಾನಿಕ ಸಂಗತಿಗೆ ಅದರ ಹಿಂದಿನ ಸಣ್ಣ ಮಾಹಿತಿಯ ಅರಿವಾದರೂ ಬೇಕಾಗುತ್ತದೆ. ಇದೇ ಹಿನ್ನೆಲೆಯಲ್ಲಿಯೇ ವಿಜ್ಞಾನದ ಬಹುಪಾಲು ಸಂಗತಿಗಳನ್ನು ಸರಳ ಮಾಡಿ ಹೇಳುವಲ್ಲಿ ತೊಡಕುಗಳಿರುತ್ತವೆ. ಈ ಸರಳಮಾಡುವಿಕೆಯ ಹಿಂದೆ ಆ ಸಂಗತಿಯ ಅಡಿಪಾಯದ ತಿಳಿವು ಕೆಲಸಮಾಡುತ್ತಿರುತ್ತದೆ. ಅವೆಲ್ಲವನ್ನೂ ಮೀರುವುದೇ ಸಮಾಜವನ್ನು ವೈಜ್ಞಾನಿಕ ಇತಿಹಾಸದಲ್ಲಿ ಅರಿಯುವ ಪ್ರಯತ್ನ.

ನ್ಯೂಟನ್ ಸಾಮಾನ್ಯವಾಗಿ ನಮ್ಮೆಲ್ಲರಿಗೂ ಪರಿಚಿತನಾಗಿರವ ಭೌತವಿಜ್ಞಾನಿ, ಗಣಿತಶಾಸ್ತ್ರಜ್ಞ, ರಾಬರ್ಟ್ ಹುಕ್ ಒಬ್ಬ ಜೀವವಿಜ್ಞಾನಿ. ಇಬ್ಬರ ಪ್ರಪಂಚಗಳೂ ವಿರುದ್ಧ ದಿಕ್ಕಿನವು. ವಿಶ್ವದ ಹೊರಗಿನ ಬೆರಗಿಗೆ ಅದರ ಆಗುಹೋಗುಗಳ ಶಕ್ತಿ ಮತ್ತು ಕಾರ್ಯ ಕಾರಣಗಳ ಹಿಂದಿದ್ದ ನ್ಯೂಟನ್, ಇಡೀ ಭೂಮಿ ಮತ್ತದರ ಮೇಲಿನ ಬೆಳಕಿಗೆ ಮೋಹಗೊಂಡ ವ್ಯಕ್ತಿ. ಬೆಳಕಿನ ಮೂಲ ಪಾಠಗಳ, ಕಾರ್ಯಕಾರಣ ಸಂಬಂಧಗಳ ಮೂಲಕ ನಮಗೆ ಗೊತ್ತು. ರಾಬರ್ಟ್ ಹುಕ್ ಸೂಕ್ಷ್ಮಜೀವಶಾಸ್ತ್ರದ ಹುಟ್ಟಿಗೆ ಕಾರಣರಾದ ವಿಜ್ಞಾನಿ. ಸೂಕ್ಷ್ಮದರ್ಶಕ ಯಂತ್ರವನ್ನು ಕಂಡುಹಿಡಿದು, ಜೀವಕೋಶದ ಒಳಹೊಕ್ಕು ನೋಡುವ ಮೂಲಗಳ ಕಾರಣಕರ್ತ. ಇವೆರಡೂ ಅಂದರೆ ನಮ್ಮೊಳಗಿನ ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳಿರುವ ಜೀವಕೋಶದ ಒಳಗೆ ಹಾಗೂ ಹೊರಗಿನ ದಿಗಂತದಾಚೆಯ ಆಕಾಶದ ಉದ್ದಗಲಕ್ಕೂ ನಡೆವ ಸಂಗತಿಗಳಿಗೂ ಮಾನವರ ಕುತೂಹಲಗಳಿಂದ ಇಂದು ಮಾಹಿತಿಗಳ ಮಹಾಪೂರ ಸಾಗಿದೆ. ಇಡೀ ಜೀವಿಯನ್ನು ಸಂಭಾಳಿಸಬಲ್ಲ ಎಲ್ಲ ಬಗೆಯ ಮಾಹಿತಿಯೂ ಕೇವಲ ಜೀವಕೋಶದೊಳಗೆ ಇರುವಂತೆ ವಿಕಾಸಗೊಂಡ ನಿಸರ್ಗವೇ, ಅಗಾಧ ಸಂಖ್ಯೆ ಆಕಾಶ ಕಾಯಗಳನ್ನೂ ನಿರ್ವಹಿಸುತ್ತಿದೆ. ಇಂತಹ ಹುಡುಕಾಟಗಳಿಂದಲೇ ತಾತ್ವಿಕ ಚರ್ಚೆಗಳು ಆರಂಭಗೊಂಡು ಇಂದಿನ ಪ್ರಾಯೋಗಿಕ ದರ್ಶನಗಳು ಸಾಧ್ಯವಾಗಿವೆ.


ಹಿಂದೆ ಹದಿನೇಳು ಹಾಗೂ ಹದಿನೆಂಟನೆಯ ಶತಮಾನದಲ್ಲಿನ ಹುಡುಕಾಟಗಳು, ಹೆಚ್ಚಿನವು ಈ ಕಾರಣಗಳ ಹಿಂದೆ ಹೋದವು. ಏಕೆ? ಎಂಬ ಪ್ರಶ್ನೆಗಳ ಉತ್ತರಗಳಿಂದ ದರ್ಶನಗಳ ವಿಕಾಸವಾಗಿವೆ. ಆಗಂತೂ ಮಾನವ ಶಕ್ತಿಯಲ್ಲಿ ಅಪರಿಮಿತ ನಂಬಿಕೆಯನ್ನೂ ಬೆಳೆಸಿಕೊಂಡ ಸಮಾಜದ ಬೆಳವಣಿಗೆಗಳಿಂದ ಇಂದಿನ ನಿತ್ಯ ಜೀವನದಲ್ಲಿ ವೈಜ್ಞಾನಿಕ ಬಳಕೆಯ ಕ್ರಾಂತಿಗಳಾಗಿವೆ.

ನ್ಯೂಟನ್‌ನ ಕಾಮನಬಿಲ್ಲಿನ ರಮ್ಯತೆ!


ನ್ಯೂಟನ್ನನ ಪ್ರಸಿದ್ಧವಾದ ಅನ್ವೇಷಣೆ ಕಾಮನಬಿಲ್ಲಿನ ಬಣ್ಣಗಳ ಹುಟ್ಟಿನ ಗುಟ್ಟನ್ನು ಬಿಚ್ಚಿಟ್ಟದ್ದು. ಅದರ ಬಣ್ಣಗಳು ನೀರ ಹನಿ ಹಾಗೂ ಬಿಸಿಲಿನ ಬೆಳಕಿನ ವಕ್ರೀಭವನದ ವಿವರಗಳನ್ನು ಕೊಟ್ಟ ಹಿನ್ನೆಲೆಯಲ್ಲಿ ನ್ಯೂಟನ್ ಕುರಿತು ಬ್ರಿಟನ್ನಿನ ವಿಖ್ಯಾತ ರಮ್ಯ ಕವಿ ಜಾನ್ ಕೀಟ್ಸ್ ತಗಾದೆ ತೆಗೆದಿದ್ದರಂತೆ. ಏನೆಂದರೆ ಬಣ್ಣಗಳ ಹುಟ್ಟಿನ ವಿವರಗಳಿಂದ ಕಾಮನಬಿಲ್ಲಿನ ಬಣ್ಣಗಳ ಕಾವ್ಯದ ರಹಸ್ಯವನ್ನು ಬಯಲು ಮಾಡಿದಕ್ಕೆ ಅದರ ರಮ್ಯತೆಯು ಹಾಳಾಯಿತೆಂದು ಗೋಳಾಡಿದ್ದರಂತೆ. ಇಂತಹದ್ದೇ ಪ್ರಸಂಗಗಳು ಸಾಮಾನ್ಯವೇ ಏಕೆಂದರೆ ವಿಜ್ಞಾನವು ಎಲ್ಲವನ್ನೂ ಸತ್ಯದ ಒಳಗೆ ಬಿಚ್ಚಿಟ್ಟು ನೋಡುವ ಆಸೆಯುಳ್ಳದ್ದು. ಆದರೆ ಮಾನವರ ಭಾವನಾತ್ಮಕ ಲೋಕವು ನಂಬಿಕೆಗಳನ್ನು ಜವಾಬ್ದಾರರನ್ನಾಗಿಸಿ ಬದುಕನ್ನು ಸೃಷ್ಟಿಸಿಕೊಳ್ಳುಂತಹದ್ದು. ಆದರೆ ವಿಜ್ಞಾನದ ಮುಖ್ಯ ಆಶಯವು ಸಂಗತಿಯನ್ನು ಮತ್ತಷ್ಟು ಒರೆಹಚ್ಚಿ ಸತ್ಯನಿಷ್ಠವಾಗಿ ನೋಡಿ ಅದರ ರಮ್ಯತೆಯನ್ನು ಇನ್ನಷ್ಟು ಹೆಚ್ಚಿಸುವುದೇ ಆಗಿದೆ. ಇದನ್ನು ಸಾಮಾನ್ಯ ಆಲೋಚನೆಯಲ್ಲಿ ಒಪ್ಪಿಸುವುದು ಕಷ್ಟ. ಅದಕ್ಕೇ ವಿಜ್ಞಾನದ ಓದಿನ ಶಿಸ್ತು ಅನುಭವ ಬೇಕೇನೋ. ಇದಕ್ಕೆ ನ್ಯೂಟನ್ನನಿಂದಾಗಿ ಕಾಮನಬಿಲ್ಲಿನ ಬಣ್ಣಗಳ ಕಾವ್ಯದ ರಮ್ಯತೆಯು ಹೆಚ್ಚೇ ಆಯಿತೆಂಬ ವಿವರಗಳನ್ನು ಕೇಳಬೇಕು.

ಈ ವೈಜ್ಞಾನಿಕ ರಮ್ಯತೆಯ ವಿವರಗಳೆಂದರೆ ಮೂಡಿದ ಕಾಮನ ಬಿಲ್ಲಿನ ಚಿತ್ರವು ಚಲಿಸುವ ಹನಿಗಳಿಂದಾದಲ್ಲಿ ಚಿತ್ರವೂ ಓಡುವುದಿಲ್ಲವೇಕೆ? ಎಂಬ ಪ್ರಶ್ನೆಯಿಂದ ಆರಂಭವಾದೀತು. ಅಲ್ಲದೆ ಜತೆಗೆ ಹನಿಗಳು ದುಂಡಾಗಿರುವಾಗ ಬಿಲ್ಲು ಏಕೆ ಅರ್ಧ ಚಂದ್ರಾಕಾರವಾಗಿ ಬಾಗಿದೆ? ಅದರ ತುದಿಗಳು ಎಲ್ಲಿ ನೆಲವನ್ನು ತಾಗಿವೆ? ಮುಂತಾಗಿ ಪ್ರಶ್ನೆಗಳು ಏಳಬಹುದು. ಈ ಹತ್ತು ಹಲವು ರಹಸ್ಯಗಳನ್ನು ವಿಜ್ಞಾನವು ಬಿಚ್ಚಿಟ್ಟಿದೆ. ನಿಜಕ್ಕೂ ಅದು ದುಂಡಾಗಿಯೇ ಇರಬೇಕು, ಉಳಿದ ಅರ್ಧ ದಿಗಂತದಲ್ಲಿ ಮರೆಯಾಗಿರುತ್ತದೆ. ಕೆಲವೊಮ್ಮೆ ದುಂಡಾದ ಚಂದ್ರಬಿಲ್ಲುಗಳನ್ನು ನೋಡಿರಬಹುದು. ಅದು ಚಂದ್ರನ ಬೆಳಕಿನಿಂದಾದ ಬಿಲ್ಲು. ನ್ಯೂಟನ್ ಪ್ರಿಸಮ್ಮಿನಿಂದ ಬೆಳಕಿನ ಬಣ್ಣದ ರಹಸ್ಯಬಿಡಿಸಿದ, ಆದರೆ ಮಳೆ ಹನಿಗಳು ನ್ಯೂಟನ್ನನ ಪ್ರಿಸಂಗಿಂತಾ ಹೆಚ್ಚು ಸಂಕೀರ್ಣವಾದವು. ಅವು ದುಂಡಗಿದ್ದು ಹಿಂದಿನ ಮೇಲ್ಮೈಯು ಒಳಕ್ಕೆ ಬಾಗಿದ ನಿಮ್ನ ಮಸೂರದಂತಿರುತ್ತದೆ. ಹನಿಯನ್ನು ಹೊಕ್ಕ ಬೆಳಕು ಮೊದಲು ವಕ್ರೀಭವನಗೊಂಡು, ಈ ಮೇಲ್ಮೈ ತಲುಪಿ ಅಲ್ಲಿಂದ ಪ್ರತಿಫಲನಗೊಳ್ಳುತ್ತವೆ. ಆದ್ದರಿಂದಲೇ ನಾವು ಸದಾ ಸೂರ್ಯನ ಎದುರಲ್ಲೇ ಕಾಮನಬಿಲ್ಲನ್ನು ಕಾಣುತ್ತೇವೆ. ಇಲ್ಲವಾದರೆ ಸೂರ್ಯನ ಎದುರು ನೋಡುವಾಗಲೇ ಕಾಣಬಹುದಿತ್ತು. ವಾಸ್ತವವಾಗಿ ನಾವು ಕಾಣುವ ಕಾಮನಬಿಲ್ಲು ಒಂದೇ ಬಿಲ್ಲು ಅಲ್ಲ, ಎರಡು! ಪ್ರತೀ ಕಣ್ಣಿನಲ್ಲೊಂದು. ಕಣ್ಣರಳಿಸಿ ಸ್ಕ್ರೀನ್ ಎಲ್ಲಿದೆ, ಎಂದು ಸಾಕಷ್ಟು ಅಗಲ ಮಾಡಿ ನೋಡುವಾಗ, ಅದು ನೋಡುವ ಕಣ್ಣೊಳಗೇ ಇರುತ್ತದೆ. ಓಡುವ ಹನಿಗಳಿಂದ ಮೂಡುವ ಬಿಲ್ಲು ಓಡುವುದಿಲ್ಲ ಒಂದೇ ಕಡೆ ಇದ್ದಂತೆ ಕಾಣುತ್ತದೆ. ಏಕೆಂದರೆ ಬಣ್ಣಗಳ ಒಟ್ಟಾರೆ ಸಮೂಹವು ಒಂದಾಗಿ ಹಾಗಾಗುತ್ತದೆ. ಇಡೀ ಕಾಮನ ಬಿಲ್ಲಿನ ದೂರ, ನೆಲೆ ಎಲ್ಲವೂ ಭ್ರಮಾಲೋಕದ ಸಂಗತಿಗಳೇ ಆಗಿದ್ದು, ನಮಗೆ ಅದರ ಒಡನಾಟಕ್ಕೆ ಕಾವ್ಯದ ರಮ್ಯತೆಯೆ ಹೆಚ್ಚು ಹತ್ತಿರ. ಅದಕ್ಕೇ ಕಾಮನಬಿಲ್ಲನ್ನು ಬೆನ್ನು ಹತ್ತದ ಕವಿಗಳಿಲ್ಲ, ಕವಿಗಳಲ್ಲಿ ಜಾನ್ ಕೀಟ್ಸ್, ಶೆಲ್ಲಿ, ವರ್ಡ್ಸ್‌ವರ್ತ್, ಕುವೆಂಪು ಹೀಗೆ ಕವಿಗಳ ದಂಡೇ ಈ ಮಳೆಬಿಲ್ಲಿನ ರಮ್ಯತೆಯನ್ನು ಕಿವಿಗಳಿಗೆ ಇಂಪುಮಾಡಿ ಎರೆದಿದ್ದಾರೆ. ಬಣ್ಣಗಳೇಳನು ತೋರಣ ಮಾಡಿ ಮಕ್ಕಳ ಕಣ್ಣಿಗೆ ಚಂದವಾಗಿದ್ದ ಬಣ್ಣದ ಓಕುಳಿಯಾಟವನ್ನಾಡಿ ಭೂಮಿಯಿಂದ ಬಾನಿಗೆ ಸೇತುವೆ ಹೂಡಿದ ಹಾಗೆ ಕಂಡಿದ್ದರು ನಮ್ಮ ಕುವೆಂಪು. ಮಕ್ಕಳಿಗಂತೂ ಮೋಜೋ ಮೋಜು!

ಆಗಸದ ಬಣ್ಣದ ಆಟಕ್ಕೆ ಆರಂಭಗೊಂಡ ಬ್ರಹ್ಮಾಂಡದ ಮೇಲಿನ ಹುಚ್ಚು ಕನಿಷ್ಟ ಸೌರವ್ಯೂಹದ ಆಳತೆಗೆ ಕಣ್ಣರಳಿಸುವ ಬಯಕೆಯಲ್ಲಿ ಹರಡಿಕೊಂಡಿದೆ. ಸೂರ್ಯನ ಪಥ ಹಿಡಿದು ಅದರ ಸುತ್ತಲೂ ಜರುಗುವ ವಿದ್ಯಮಾನಗಳ ಹುಡುಕುತ್ತಾ ಅದರಿಂದ ಭೂಮಿಯ ಮೇಲಿಂದ ತಮ್ಮ ಬೌದ್ಧಿಕ ಹರಹನ್ನು ಆಗಸದಾಚೆಗೆ ವಿಸ್ತರಿಸಿಕೊಂಡಿದ್ದೇವೆ. ಇದನ್ನು ನೆನಪಿಸಿಕೊಳ್ಳಲು ಒಂದು ನೆಪವಿದೆ. ಕಳೆದ ವರ್ಷದಲ್ಲಿ ನಡೆದ ಮಹತ್ತರ ಸುದ್ದಿಯೊಂದಿದೆ. ಕಳೆದ ಸುಮಾರು 35 ವರ್ಷಗಳಿಂದ ನಿರಂತರವಾಗಿ ಸಾಗುತ್ತಿದ್ದ ವಾಯೇಜರ್ 2013ನೇ ವರ್ಷ ಸೌರವ್ಯೂಹ ದಾಟಿ ಸಾಗಿದೆ. ಯಾವುದೇ ಮಾನವ ನಿರ್ಮಿತ ವಸ್ತುವೊಂದು ಸೌರಕಕ್ಷೆಯ ದಾಟಿ ಹೋದದ್ದು ಇದೇ ಮೊದಲು. ಇದರಿಂದ ಸೂರ್ಯನನ್ನು ಅರ್ಥಮಾಡಿಕೊಳ್ಳುವ ಬಯಕೆಯನ್ನು ಮಾನವ ಸೌರವ್ಯೂಹದಿಂದಾಚೆ ದಾಟಿದ ಕ್ಷಣದಿಂದ ಆಲೋಚಿಸಬೇಕಿದೆ. ಸೂರ್ಯನ ಕುರಿತ ಅರಿವು ಈಗಿರುವಂತೆ ಎಲ್ಲಾ ತಿಳಿವಿನ ಒಟ್ಟಾರೆ ಫಲ. ಇದೀಗ ವಾಯೇಜರ್ ಸೂರ್ಯನ ವಲಯದಿಂದ ಬೇರೊಂದು ವಲಯಕ್ಕೆ ಹೋಗಿದೆ. ನಕ್ಷತ್ರಗಳ ನಡುವಣ ವಲಯವನ್ನು ಅದು ತಲುಪಿರಬೇಕೆಂಬ ಕಲ್ಪನೆಯು ಇದರಲ್ಲಿ ಸೇರಿದೆ. ವಾಯೇಜರ್‌ನಿಂದ ಕೇವಲ ಸೌರಪ್ರಪಂಚದ ಮಾಹಿತಿ ಬಯಸಲಾಗಿತ್ತು ಆದರದು ನಿಲ್ಲಿಸದೇ ಮುಂದುವರೆದಿದೆ. ಈಗಾಗಲೇ ಸುಮಾರು 11,000 ದಶಲಕ್ಷ ಮೈಲುಗಳ ದೂರ ಹೋಗಿರುವ ಅದರ ಭವಿಷ್ಯತ್ತು ಬೇರೆಯದೇ ಆಗಿದೆ. ಅದರಲ್ಲಿರುವ ಪ್ಲುಟೋನಿಯಂ ಇನ್ನು ಹದಿನೈದು ವರ್ಷ ಕಾಲ ವಿದ್ಯುತ್ತನ್ನು ಒದಗಿಸಲಿದೆ. ಅದರ ನಂತರ ಅದು ಈ ಬೃಹತ್ ವ್ಯೋಮದೊಳಗೆ ದಿಕ್ಕು ತಪ್ಪಿ ಒಂಟಿಯಾಗಲಿದೆ. ಮುಂದಿನ ಕಥಾನಕವೇ ನಮ್ಮೆಲ್ಲರ ವಿಜ್ಞಾನದ ಅರಿವಿಗೆ ಬರದಹಾಗೆ. ವಾಯೇಜರ್ ಹಾರಿ ಬಿಡುವಾಗ ಅಮೆರಿಕಾ ಅಧ್ಯಕ್ಷರಾಗಿದ್ದ ಜಿಮ್ಮಿ ಕಾರ್ಟರ್ ಮಾತುಗಳು ಅನುರಣಿಸುತ್ತಿವೆ: "ಇದು ದೂರದ ಜಗತ್ತಿಗೆ ಸಣ್ಣದೊಂದು ಕಾಣಿಕೆ. ನಮ್ಮ ಸದ್ದಿನ, ನಮ್ಮ ವಿಜ್ಞಾನದ, ನಮ್ಮ ಕಲ್ಪನೆಯ, ನಮ್ಮ ಸಂಗೀತದ, ನಮ್ಮ ಆಲೋಚನೆಗಳ ಮತ್ತು ನಮ್ಮ ಭಾವನೆಗಳ ಹೆಗ್ಗುರುತು." ಹೆಗ್ಗುರುತು ಬಾನದಾಟಿ ಹೋಗಿದೆ. 2013ರಷ್ಟೊತ್ತಿಗೆ ನಿಖರವಾಗಿ ಅದು ಸೌರವಲಯದ ಬಿಟ್ಟು ಸಾಗುವ ಬಗೆಗೆ ಊಹಿಸಲಾಗಿತ್ತು. ಈ ದಾಟಿದ ವಲಯವನ್ನೇ ಸೌರವಲಯದ ಅಂಚು ಎಂದೇ ನಾಸಾ ಲೆಕ್ಕಾಚಾರ ಹಾಕಿದೆ. ವಿಜ್ಞಾನಿಗಳಲ್ಲಿ ನೌಕೆಯ ಸ್ಥಳದ ಬಗೆಗೆ ಅನುಮಾನಗಳಿವೆ. ಅದೇನೇ ಇದ್ದರೂ ಅದು ಇಂದು ನಾವೆಲ್ಲಾ ಊಹಿಸಿರದ ವ್ಯೋಮದಲ್ಲಿದೆ ಎಂಬುದು ಮಾತ್ರ ಖಾತ್ರಿ. ಇವೆಲ್ಲವುಗಳ ಹಿಂದೆ ನಮ್ಮ ಚಂದ್ರಯಾನ, ಮಂಗಳಯಾನ, ಸಾಲದಕ್ಕೆ ಗುರುವನ್ನಪ್ಪಳಿಸಿದ ಶೂಮ್ಯಾಕರ್ ಧೂಮಕೇತುವಿನ ಅಗಾಧ ಸಂಗತಿಗಳು ನೆನಪಿಗೇ ಬಾರವು. ಏಕೆಂದರೆ ಗುರುವನ್ನಪ್ಪಳಿಸಿದ ಧೂಮಕೇತುವಿನಲ್ಲಿ ಇರಬಹುದಾದ ಆಮ್ಲಜನಕ ಹಾಗೂ ಗುರುವಿನಲ್ಲಿರುವ ಜಲಜನಕವು ಒಂದಾಗಿ ಅಪಾರ ಜಲರಾಶಿ ಉಂಟಾಗಿ ಸಾಗರಗಳಾದರೆ ನಮ್ಮ ಎಸ್ಟೇಟ್ ಏಜೆಂಟರುಗಳು ಗುರುಕಡೆಗೆ ಮುಖ ಮಾಡಿಯಾರು. ಏಕೆಂದರೆ ನೂರಾಇಪ್ಪತ್ತು ಭೂಮಿಯಷ್ಟು ಜಾಗವನ್ನು ಗುರು ಗ್ರಹ ಹೊಂದಿದೆ. ಕೋಟ್ಯಾಂತರ ಬೆಂಗಳೂರುಗಳು ಸುಲಭದಲ್ಲಿ ಸೃಷ್ಟಿಯಾಗಬಹುದು.




ನ್ಯೂಟನ್ನಿನ ಮಳೆಬಿಲ್ಲಿನ ಪ್ರಯೋಗ



ಸೌರವ್ಯೂಹ ದಾಟಿದ ವಾಯೇಜರ್

ರಾಬರ್ಟ್ ಹುಕ್‌ನ ಜೀವಕೋಶದ ಒಳಗಿನ ಬ್ರಹ್ಮಾಂಡ!

ರಾಬರ್ಟ್ ಹುಕ್ ಜೀವಿಕೋಶದ ಒಳಹೊಕ್ಕು ಮಾಡಿ ಮಾಡಿ ಇವತ್ತಿನ ಜೀವತಂತ್ರಜ್ಞಾನದ ಕ್ರಾಂತಿಗೆ ಕಾರಣರಾಗಿದ್ದಾರೆ. ಸೂಕ್ಷ್ಮದರ್ಶಕದಿಂದ ಅತೀ ಚಿಕ್ಕ ಗಾತ್ರವನ್ನೂ ಕಣ್ಣರಳಿಸಿ ನೋಡುವಂತಾದುದು. ನಂತರದ ಬೆಳವಣಿಗೆಗಳು ಸುಮಾರು ವರ್ಷಕಾಲ ಜೈವಿಕ ಜಗತ್ತನ್ನು ಅದ್ಭುತಗಳ ಹಿನ್ನೆಲೆಯಲ್ಲಿಯೇ ನೋಡಲಾಗುತ್ತಿತ್ತು. ಅತೀ ಚಿಕ್ಕದನ್ನೂ ವಿವರವಾಗಿ ಕಾಣಬಲ್ಲ ಆಸೆಗಳು ಮಾಲೆಕ್ಯುಲಾರ್ ಸಂಗತಿಗಳಾಗಿ ವಿಜೃಂಭಿಸತೊಡಗಿವೆ. ಇದೀಗ ಜೀವಕೋಶದ ಒಳಗಿನ ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳಿಗೆ ನಕ್ಷೆಗಳ ರಚನೆಯಲ್ಲಿ ಸುದ್ದಿಗಳಾಗುತ್ತಿವೆ. ಕೋಶದ ಕೇಂದ್ರದ ಒಳಗಿನ ಜೈವಿಕ ಮಾಹಿತಿಯ ಅಗಾಧತೆಗೆ ಮನುಕುಲವು ಒಟ್ಟಿಕೊಂಡಿದೆ. ದಿಗಂತದಾಚೆಗೆ ಚಾಚಿದ್ದ ಬಾಹುಗಳು ಸಂಕುಚನಗೊಂಡು ಅತೀ ಸಣ್ಣದರೊಳಗೆ ಇಡೀ ಜೀವಿಯ ಹರಹನ್ನು ಕಟ್ಟುವ ರಾಚನಿಕ ವಿನ್ಯಾಸಗಳ ಮಾಹಿತಿಗೆ ಮೋಹಗೊಂಡಿವೆ. ಕೋಶದೊಳಗಣ ತನ್ನನ್ನೇ ತಾನು ಕಾಪಿ ಮಾಡಿಕೊಂಡು ಮರುಹುಟ್ಟು ಪಡೆಯುವ ನ್ಯುಕ್ಲಿಯಿಕ್ ಆಮ್ಲದ ರಸಾಯನಿಕ ವಿವರಗಳ ತಿಳಿವಿಗೆ ಮೊದಲಾದವು. ಅದರಿಂದ ನಾವು ಹೇಗೆ ನಮ್ಮ ಅಪ್ಪನನ್ನೋ ಅಮ್ಮನನ್ನೋ ಅಥವಾ ಇಬ್ಬರಲ್ಲೂ ಪಾಲು ತೆಗೆದುಕೊಂಡ ಹಾಗೆ ಜನಿಸುತ್ತೇವಲ್ಲಾ ಕೌತುಕಗಳ ಸಂಗತಿಗಳನ್ನು ವ್ಯವಸ್ಥಿತವಾದ ತಿಳಿವ ದಾಖಲಾಗಲು ಸಾಧ್ಯವಾಗಿದೆ. ಇದರ ಫಲವಾಗಿ ಜೀನೋಮ್ ಅಥವಾ ಮಾನವ ತಳಿನಕ್ಷೆ ಯೋಜನೆಯು ಆರಂಭಗೊಂಡಿತ್ತು, ಜತೆಗೆ ಇನ್ನೂ ಹತ್ತು ಹಲವು ಜೈವಿ ಆಸಕ್ತಿಗಳನ್ನೂ ಸೇರಿಸಿಕೊಂಡು ಅಗಾಧ ಮಾಹಿತಿಯನ್ನು ಅರಿಯುವಂತಾಗಿದೆ.



ಎರಡೇ ಜೀವಕೋಶದ ಡಿಎನ್‌ಎ ಮೆಟ್ಟಿಲುಗಳಿಂದ ಚಂದ್ರನ ತಲುಪಬಹುದು


ಮಾನವನ ದೇಹದಲ್ಲಿ ಸುಮಾರು 100,000,000,000,000 ಜೀವಕೋಶಗಳಿವೆ. ಇವುಗಳಲ್ಲಿ ಪ್ರತಿಯೊಂದು ಕೋಶದಲ್ಲೂ ಮತ್ತೊಂದು ಜೀವಕೋಶವನ್ನು ಪುನರಚಿಸಲು ಬೇಕಾದ ಸೂಚನೆಗಳ ಮಾಹಿತಿಯು ಇದೆ. ಮಾಹಿತಿಯು ಜೀವಕೋಶದ ಪ್ರತೀ ಭಾಗದ ರಚನೆಯ ಹೇಗೆ ನಿರ್ವಹಿಸಬೇಕೆಂಬುದನ್ನೂ ಒಳಗೊಂಡಿದೆ. ಅ ಅಲ್ಲ, ಅದರಿಂದ ಆ ಮೂಲಕ ಇಡೀ ಜೀವಿಯ ರಚನೆ ಮಾಹಿತಿಯನ್ನೂ ಅದು ಒದಗಿಸಲಿದೆ. ಅಂದರೆ ಮಾಹಿತಿಯಿಂದಲೇ ಜೀವಿಯ ದೇಹವು ತಯಾರಾಗುತ್ತ ಇಂತಹ ಮಾಹಿತಿಯ ಸೂಚನೆಗಳಿಗೆ ಜೀನೋಮ್ ಎನ್ನುತ್ತಾರೆ. ನಮಗೆ ಈ ಜೀನೋಮ್ ಎರಡು ಬಗೆಯ ಸಿಗುತ್ತದೆ. ಒಂದು ಅಮ್ಮನಿಂದ ಮತ್ತೊಂದು ಅಪ್ಪನಿಂ ಎರಡರ ಮಿಲನದಿಂದ ಉಂಟಾದ ಗರ್ಭದಿಂದ ಮಗು ಜನಿಸುತ್ತದೆ. ಈ ಜೀನೋಮ್ ಡಿ.ಎನ್.ಎ. (ಡಿಆ ರಿಬೋನ್ಯುಕ್ಲಿಯಿಕ್ ಆಮ್ಲ) ಎಂಬ ರಸಾಯನಿಕದಿಂ ತಯಾರಾಗಿದೆ. ಈ ಡಿ.ಎನ್.ಎ.ದ ರೂಪ ಮಾತ್ರ ಬಹ ಮುಖ್ಯವಾದದ್ದು. ಒಂದು ರೀತಿಯಲ್ಲಿ ಸುತ್ತಿದ ಏಣಿ ರೂಪವನ್ನು ಡಬಲ್ ಹೆಲಿಕ್ಸ್ ಎಂದು ಕರೆಯುತ್ತಾರೆ. ಏಣಿಯ ಪ್ರತೀ ಮೆಟ್ಟಲೂ ಒಂದೊಂದು ಬೇಸ್ ಪೇ ಅಥವಾ ಮೂಲ ಜೊತೆಗಳು. ಇವು ಮುಖ್ಯ ಮಾಹಿತಿಗಳ ಒದಗಿಸುತ್ತವೆ. ಅಂದಹಾಗೇ ಈ ಮೆಟ್ಟಿಲುಗಳು ಸಡಿಲವಾ ಇಡೀ ಏಣಿಯು ಬಿಚ್ಚಿಕೊಳ್ಳಲು ಸಹಾಯ ಮಾಡುತ್ತ ಇದೇ ಮತ್ತೊಂದು ಡಿ.ಎನ್.ಎ ರೂಪಿಸುವ ಗುಣ ಸಹಾಯವಾಗುತ್ತದೆ. ಮತ್ತೆ ಮಾಹಿತಿಯ ರವಾನಿಸು ಮೂಲ ಹುಟ್ಟುತ್ತದೆ. ನಮ್ಮ ದೇಹದ ಪ್ರ ಜೀವಕೋಶದಲ್ಲೂ ಸುಮಾರು 6,000,000,00 ಮೆಟ್ಟಿಲುಗಳಿವೆ. ಇಂತಹ ಕೇವಲ ಎರಡೇ ಜೀವಕೋಶ ಎಲ್ಲಾ ಮೆಟ್ಟಿಲುಗಳನ್ನೂ ಜೋಡಿಸಿ ಒಂದೇ ಏ ಮಾಡಿದಲ್ಲಿ ಆಗಸದ ಚಂದ್ರನನ್ನು ತಲುಪಬಹುದು. ಜೀವಿ ರೂಪು ಪಡೆದ ಜೀವರಸಾಯನಿಕತೆಯು ತಿಳಿದ ಹ ಅದರಲ್ಲಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವು ಸುಲಭ. ಈ ಮೂಲಕ ತಿಳಿವಿನ ಹುಡುಕಾಟ ಅ ಇಡೀ ಜೀನೋಮ್ ತಿಳಿವಿನ ಮಾಹಿತಿಯಿಂದ ವೈದ್ಯಕೀ ಕೃಷಿ, ಇಕಾಲಜಿ, ಜೀವಿವೈವಿಧ್ಯತೆ ಮುಂತಾದ ಜೀ ವಿಜ್ಞಾನದ ವಿಜ್ಞಾನದ ಶಾಖೆಗಳಲ್ಲಿ ಹೆಚ್ಚಿನ ತಿಳಿವಿಗೆ ಬಳಸ ಅನುಕೂಲ. ಎರಡೇ ಜೀವಕೋಶಗಳ ಒಳಗಿನ ವಸ್ತುವ ಜೋಡಿಸಿ ಚಂದ್ರನನ್ನು ತಲುಪಲು ಸಾಧ್ಯವಾಗುವುದಾದ 17ನೇ ಶತಮಾನದಲ್ಲಿ ರಾಬರ್ಟ್ ಹುಕ್ ಒಳನೋಟಗ ಚಾಚಿದ ದೂರ ಅರಿವಾಗುತ್ತದೆ.

ಇಂದು ಜೆನೆಟಿಕ್ ತಂತ್ರಜ್ಞಾನ ವಿದ್ಯಾರ್ಥಿಗಳು ಹಾ ವ್ಯೋಮ ಪ್ರವಾಸದ ಕನಸುಗಾರರು ಹಿಂತಿರುಗಿ ನೋಡಿ ಕಾಣದ ದೈತ್ಯ ಸಾಧಕರ ಆಜಾನುಬಾಹುಗಳ ಆಗಾಧತೆಯ ಊಹಿಸಬಹುದಷ್ಟೇ. ಅಂದು ನ್ಯೂಟನ್, ರಾಬರ್ ಹುಕ್‌ಗೆ ಬರೆದ ಸಂಗತಿಯಂತೆ ಅವರೇ ದೈತ್ಯರ ತೋಳು ಮೇಲೆ ಕುಳಿತು ಮುಂದೆ ನೋಡುತ್ತಿದ್ದರು. ಇಂದು ನ ಕುಳಿತ ದೈತ್ಯ ಸಾಧಕರ ಅಗಾಧತೆಯನ್ನು ಊಹಿಸುವು ಕಷ್ಟವೇ! ಅವರ ಮುಂದೆ ಕಂಡ ನಮ್ಮ ಅರಿವಿಗೆ ನಿಲುಕ ಸಂಗತಿಗಳೇ ಬೆಟ್ಟದಷ್ಟಿರುವಾಗ ಇನ್ನೂ ನಮ್ಮ ಮು ಅದೆಷ್ಟು ಬೆಟ್ಟಗಳಿವೆಯೋ?



ಯೋಗೇಶ್ ಮಾಸ್ಟರ್

ಪುರಾಣದ ಹೂರಣ



ವೈಷ್ಣವವ್ಯಾಪ್ತಿ




...ಒಂದೂ ಧರ್ಮವೆಂಬುದನ್ನು ಸನಾತನ ...ವೆಂದು ಇಂದು ಹೇಳಿಕೊಳ್ಳುವವರು ಒಂದು ...ಯವನ್ನು ಜಾಗ್ರತೆಯಾಗಿ ಗಮನಿಸಬೇಕು. ಗೌತಮ, ...ರಷ, ಅಷ್ಟಾವಕ್ರ, ಪಾಣಿನಿ, ಪತಂಜಲಿ, ವ್ಯಾಸ, ಪರಾಶರ, ...ಲಕ, ರೈಕ್ವ, ಸತ್ಯಕಾಮ ಜಾಬಾಲಿ, ಶ್ವೇತಕೇತು, ...ವಲ್ಕ್ಯ ನಂತರ ಬಂದ ಶಂಕರ, ರಾಮಾನುಜ, ...ರಿತ್ಯಾದಿಯಾಗಿ ಯಾವ ಧರ್ಮವನ್ನು ...ಪಾದಿಸುತ್ತಿದ್ದರು ಎಂದು. ಅವರಿಗ್ಯಾರಿಗೂ ಹಿಂದೂ ...ವೆಂಬುದು ಪರಿಕಲ್ಪನೆಗೂ ಇರಲಿಲ್ಲವೆಂಬುದು ಸ್ಪಷ್ಟ. ... ಪರಂಪರೆಯ ಮೂಲದಲ್ಲಿಯೇ ತಮ್ಮ ಸಿದ್ಧಾಂತದ ...ಗಳನ್ನು ಕಂಡುಕೊಂಡು, ತಮ್ಮ ಅವಲೋಕಿತ ...ಯಿಂದ ಭಾಷ್ಯಗಳನ್ನು ರಚಿಸಿಕೊಂಡು, ...ಪ್ರತಿವಾದಗಳನ್ನು ಮಾಡಿಕೊಂಡು, ತಮ್ಮ ತತ್ವ ...ಣೆಗೆ ಹೆಣಗಾಡುತ್ತಿದ್ದರು. ಅವರದು ಅವರದೇ ಆದ ...ದಾಯದ ವೈದಿಕ ಧರ್ಮವೇ ಹೊರತು ಹಿಂದೂ ...ವೆಂಬ ಸಂಕೀರ್ಣ ಅಥವಾ ಸಮಗ್ರ ಕಲ್ಪನೆಯಲ್ಲ.

... ಅಲ್ಲದೇ ವೈದಿಕವೂ ಕೂಡ ಒಮ್ಮತವಾದ, ...ಮ್ಮತವಾದ, ಏಕಾಭಿಪ್ರಾಯವಾದ ಸಿದ್ಧಾಂತಗಳನ್ನೇನೂ ...ದಿರಲಿಲ್ಲ, ಆಯಾ ಋಷಿ ದರ್ಶನಗಳಿಗೆ ತಕ್ಕಂತೆ ...ವು ರಚಿತವಾಗುತ್ತಿದ್ದವು. ಅದೇನೂ ತಪ್ಪಲ್ಲ, ಯಾವುದೇ ... ಸಿದ್ಧಾಂತಗಳು ರೂಪುಗೊಳ್ಳುವುದು ಸತ್ಯ, ನಂಬಿಕೆ, ... ಪಾವಿತ್ರ್ಯತೆಗಳ ಮೇಲಲ್ಲ, ದೃಷ್ಟಿಗಳ ಮೇಲೆ. ...ವರ ದೃಷ್ಟಿಗಳಿಗನುಸಾರವಾಗಿ ಸಿದ್ಧಾಂತಗಳು ...ಗೊಂಡು ಪ್ರಸ್ತುತವಾಗುತ್ತವೆ. ಅವು ಸಮ್ಯಕ್ ...ಯುಳ್ಳದ್ದೋ, ದೂರದೃಷ್ಟಿಯುಳ್ಳದ್ದೋ, ಯಥಾರ್ಥ ...ಯುಳ್ಳದ್ದೋ, ದುರ್‌ದೃಷ್ಟಿಯುಳ್ಳದ್ದೋ, ಎಂತಹ ಬಣ್ಣದ ...ರದಿಂದ ಕಾಣುತ್ತಿರುವುದೋ, ಶಾರ್ಟ್ ಸೈಟೆಡ್ದೋ, ... ಸೈಟೆಡ್ದೋ, ದೃಷ್ಟಿಯಿದೆ ಎಂಬ ಭ್ರಮೆಯುಳ್ಳ ...ದ್ದು ದೃಷ್ಟಿಹೀನವಾಗಿರುವ ಕುರುಡಾಗಿವೆಯೋ ಒಟ್ಟಾರೆ ...ದಲ್ಲಿ ಯಾವುದೇ ಸಿದ್ಧಾಂತಗಳು ಸತ್ಯವಾಧಾರಿತವೆನ್ನು...ಂತ ದೃಷ್ಟಿಯಾಧಾರಿತವೆನ್ನುವುದೇ ಹೆಚ್ಚು ಸೂಕ್ತ. ...ನ್ನುವುದು ಆ ದೃಷ್ಟಿಯ ಗ್ರಹಿಕೆ. ನಂಬಿಕೆಯೆನ್ನುವುದು ...ಗ್ರಹಿಕೆಯ ಬಗ್ಗೆ ಅವನಿಗಿರುವ ಭಾವನಾತ್ಮಕ ...ಹ. ಆದರೆ, ಅವು ಬಾಳ್ವೆಗೆ, ಸಮೂಹ ಬದುಕಿಗೆ ...ವಾ ವ್ಯಕ್ತಿಗತ ಜೀವನಕ್ಕೆ ಯೋಗ್ಯವಾಗಿದೆಯೇ, ...ಷಾಮುಕ್ತವಾಗಿದೆಯೇ ಅಥವಾ ತಮ್ಮ ಹಿತಾಸಕ್ತಿಗಳನ್ನು ...ಮಟ್ಟಿಗೆ, ಎಷ್ಟು ಕಾಲದ ಮಟ್ಟಿಗೆ ಕಾಯುತ್ತದೆ ...ತ್ಯಾದಿಗಳ ಆಧಾರದ ಮೇಲೆ ಅವುಗಳನ್ನು ಎತ್ತಿ ...ಯುವುದರ ಬಗ್ಗೆ, ಪಾಲಿಸುವುದರ ಬಗ್ಗೆ, ಅದನ್ನು ...ಸುವುದರ ಬಗ್ಗೆ, ಅದರ ಕುರಿತಾಗಿ ವಾದಿಸುವುದರ ...ಧೋರಣೆಗಳನ್ನು ಹೊಂದಲಾಗುತ್ತದೆ. ಇಂತಹದ್ದೇ ... ಅಸ್ತಿತ್ವದಲ್ಲಿರುವು ದನ್ನು ಒಪ್ಪಿಕೊಂಡು ಅನೇಕ ...ತಗಳ ಸಂಘರ್ಷಗಳನ್ನು ಹಿಂದೂ ಧರ್ಮದ ಅಡಿಯಲ್ಲಿ ...ಯಿತು. ಅದರಲ್ಲಿ ಪ್ರಮುಖವಾಗಿರುವುದು, ರಕ್ತಪಾತ ...ದರುವವು ಶೈವ ಮತ್ತು ವೈಷ್ಣವ ಸಿದ್ಧಾಂತಗಳು.

...ಕ್ರೈಸ್ತ, ಬೌದ್ಧ ಧರ್ಮಗಳ ಉಗಮ ಮತ್ತು ಬೆಳವಣಿಗೆ, ...ವು ವೈದಿಕ ಪದ್ಧತಿಯನ್ನು ನಿರಾಕರಿಸುವಾಗ ತಮ್ಮದನ್ನು ...ಸಿಕೊಳ್ಳುವ ಅನಿವಾರ್ಯತೆಯಿಂದ ತಾವುಗಳು ...ಗಲೇಬೇಕಾಗಿತ್ತು, ಶೈವವಾಗಲಿ, ವೈಷ್ಣವವಾಗಲಿ ...ೂ ವೈದಿಕಗಳೇ. ವಶಿಷ್ಠ, ವಿಶ್ವಾಮಿತ್ರ, ಗೌತಮರ ...ಲ್ಲಿಯೂ ಅವರವರಲ್ಲಿಯೇ ದೃಷ್ಟಿಭೇದಗಳಿದ್ದವು. ... ಸಹಜವೂ ಕೂಡ. ಮುಂದೆ ಎಲ್ಲವನ್ನೂ ಮರೆತು ...ಲ್ಲಾ ಸಿದ್ಧಾಂತಗಳನ್ನು ಹಿಂದೂ ಧರ್ಮದ ಅಡಿಯಲ್ಲಿ ...ದು ಮಾತ್ರ ಅವರಾರೂ ಅಲ್ಲ, ಧರ್ಮ ರಾಜಕಾರಣದ ...ದಿಂದ, ತಮ್ಮ ಸಮೂಹವನ್ನು ಬಲಪಡಿಸಿಕೊಳ್ಳುವ ...ತೆಯಿಂದ ಒಂದಾಗಿರುವ ಒಂದು ಅನಿವಾರ್ಯತೆ. ...ದ್ಧಾಂತಗಳಲ್ಲಿ ಅಥವಾ ಧರ್ಮಗಳಲ್ಲಿ ಒಡಕುಗಳಿರು... ಏನೂ ಹೊಸತಲ್ಲ ಮತ್ತು ಆಶ್ಚರ್ಯವೂ ಅಲ್ಲ. ...ಪದ್ಧತಿಗಳಲ್ಲಿ ಭಿನ್ನತೆಗಳಿದ್ದಂತೆ, ನಂತರದ ಬೌದ್ಧ ... ಕ್ರೈಸ್ತ ಇಸ್ಲಾಂಗಳಲ್ಲೂ ಹೀನಾಯಾನ, ಮಹಾಯಾನ, ...ಬರ, ಶ್ವೇತಾಂಬರ, ಕ್ಯಾಥೋಲಿಕ್, ಪ್ರೊಟೆಸ್ಟಂಟ್, ... ಶಿಯಾ ಇತ್ಯಾದಿಗಳಾಗಿ, ಅವುಗಳಲ್ಲಿ ಹತ್ತು ಹಲವು ...ಂಗಳು ಮೂಡಿರುವುದಕ್ಕೆ ಕಾರಣ ಹತ್ತು ಹಲವು ...ಗಳಿರುವುದಕ್ಕಲ್ಲ, ಹತ್ತು ಹಲವು ದೃಷ್ಟಿಗಳಿರುವುದಕ್ಕೆ. ... ಕಾಣುವುದೇ ಸತ್ಯವೆಂದೋ ಅಥವಾ ಶ್ರೇಷ್ಠವೆಂದೋ ...ಪಿಸುವ ಧಾಷ್ಟ್ಯ ಮತ್ತು ಪೂರ್ವಾಗ್ರಹಗಳಿಂದಾಗಿ ...ಣೆಗಳೂ ಮತ್ತು ರಕ್ತಪಾತಗಳೂ ಆಗಿರುವವು.

ಶೈವ-ಅದ್ವೈತ

...ಶೈವ ಸಂಪ್ರದಾಯವು ಬಹುತೇಕ ಅದ್ವೈತ ಸಿದ್ಧಾಂತವೇ ... ತಂತ್ರಗಳಲ್ಲಿಯೂ ಕೂಡ ನೇರವಾಗಲ್ಲದೇ ಇದ್ದರೂ ...ಲ್ಲದೇ ಒಂದಾಗುವ ಪರಿಕಲ್ಪನೆಗೆ ಮಾನ್ಯತೆ ...ಾಗುತ್ತದೆ. ತಂತ್ರದಲ್ಲಿ ಸಾಧಕನು ಯಾವುದೋ ತಂತ್ರವನ್ನು ಅನುಸರಿಸುವ ಮೂಲಕ ಶಿವನಾಗುತ್ತಾನೆ. ಸಾಧಕನಿಗೂ ಮತ್ತು ಶಿವನಿಗೂ ಪ್ರತ್ಯೇಕತೆಯಿಲ್ಲದೇ ಒಂದಾಗುತ್ತಾನೆ. ನಂತರ ಪುರುಷನು ಸ್ತ್ರೀಯೊಂದಿಗೆ ಒಂದಾಗುವ ಮೂಲಕ ಪ್ರಕೃತಿಯಲ್ಲಿಯೂ ಶಕ್ತಿಯಲ್ಲಿಯೂ ಒಂದಾಗುತ್ತಾನೆ. ಹಂತಹಂತವಾಗಿ ದ್ವಿ-ತ್ವಗಳೆಲ್ಲವೂ ಏಕತ್ವವಾಗುವ ಪ್ರಕ್ರಿಯೆಯಾಗಿರುತ್ತದೆ. ಇಂತಹ ತಂತ್ರಗಳು ಶಂಕರಾಚಾರ್ಯನಿಗೂ ಮುನ್ನವೇ ಪ್ರಚಲಿತದಲ್ಲಿತ್ತು. ಶೈವಾಗಮಕ್ಕೆ ಹೊರಳುವರೆಲ್ಲರಿಗೂ ಅದ್ವೈತ ಅನಿವಾರ್ಯವೆನಿಸುತ್ತದೆ. ಯೋಗದ ಮಹಾಗುರು ಶಿವನೆಂದು ಗುರುತಿಸಿದ್ದು, ಅದರ ಮೂಲ ಪುರುಷನೂ ಅವನೇ ಎಂದಾದರೆ, ಶಿವನೂ ಹೇಳಿದ್ದು ಐಕ್ಯತೆಯೇ. ಯೋಗ ಎಂಬುದು ಯುಜ್ ಎಂಬ ಪದದ ಉತ್ಪನ್ನವಾಗಿದ್ದು, ಸೇರಿಸು, ಕೂಡಿಸು ಎಂಬ ಅರ್ಥ ಬರುತ್ತದೆ. ಯೋಗ ಮತ್ತು ಪ್ರಾಣಾಯಾಮಗಳಂತಹ ಸಾಧನೆಗಳು ತಂತ್ರ ಸಾಧನೆಗಳ ಭಾಗವೇ ಆಗಿದ್ದು ಇವುಗಳನ್ನು ವೈದಿಕರು


ನಂತರ ಬಳಸಿಕೊಂಡಿರುವರು. ಯೋಗವನ್ನು ಸಾಧನೆ ಮಾಡಬೇಕೆಂದರೆ ನೀವು ಹೋಗಬೇಕಾಗಿರುವುದು ಪುರೋಹಿತನ ಬಳಿಗಲ್ಲ, ವೈದಿಕ ಶಾಸ್ತ್ರಜ್ಞನ ಬಳಿಗಲ್ಲ, ಇದು ಸಂಪೂರ್ಣ ಹಠಯೋಗದ ತಾಂತ್ರಿಕನ ಅಭ್ಯಾಸವಾಗಿರುತ್ತದೆ. ಯಜ್ಞಯಾಗಾದಿಗಳನ್ನು ಮಾಡುವವರ ಸೊತ್ತಲ್ಲ ಈ ಯೋಗ ತಂತ್ರ. ವೈದಿಕರಿಗೆ ಶಿವನಾಗಲಿ, ವಿಷ್ಣುವಾಗಲಿ ಪ್ರಧಾನ ದೇವತೆಯಾಗಿರಲಿಲ್ಲ ಎಂಬುದನ್ನು ಮರೆಯದಿರೋಣ. ವೈದಿಕರು ಪ್ರಯೋಗಶೀಲರಾಗಿಯೋ, ತಮ್ಮ ದೃಷ್ಟಿಗಳಿಗೆ ಸ್ಥಳೀಯ ವಿಚಾರಗಳನ್ನು ದಕ್ಕಿಸಿಕೊಳ್ಳುತ್ತಾ ಹೋದ ಪ್ರಕ್ರಿಯೆಗಳಿಂದಲೋ ಅವರ ಆಚರಣೆ ಮತ್ತು ಸಂಪ್ರದಾಯಗಳಲ್ಲಿಯೂ, ಪರಿಕಲ್ಪನೆಗಳಲ್ಲಿಯೂ ಸಾಕಷ್ಟು ಬದಲಾವಣೆಗಳನ್ನು ತಂದಿತು.

ಒಟ್ಟಾರೆ ಯೋಗ ಗುರುವಾಗಿ ಶಿವನನ್ನು ನೋಡುವುದರಿಂದಲೋ, ತಂತ್ರಗಳ ಮೂಲಕ ಪ್ರಾಕೃತಿಕವಾಗಿ ಶಕ್ತಿಗಳನ್ನು ಮಿಳಿತಗೊಳಿಸುವ ಸಾಧನೆಗಳ ಸಂಬಂಧಿತ ಪುರುಷನಾಗಿ ಶಿವನನ್ನು ಗ್ರಹಿಸುವುದರಿಂದಲೋ, ಎರಡೆಂಬುದು ಇಲ್ಲದೇ ಒಂದಾಗುವ ಪರಿಕಲ್ಪನೆಯಿಂದಾಗಿ ಶೈವಾಗಮವು ಸೈದ್ಧಾಂತಿಕವಾಗಿ ಅದ್ವೈತವೇ ಆಗುತ್ತದೆ.

ವೈಷ್ಣವ ದ್ವೈತ

ಆದರೆ ವೈಷ್ಣವರಲ್ಲಿ ಅದ್ವೈತ ಭಾವವಿರದಿರುವುದು ಸ್ಪಷ್ಟವಾಗುತ್ತದೆ. ಸದ್ವೈಷ್ಣವ ದ್ವೈತ ಸಿದ್ಧಾಂತದ ಮಧ್ವ ಸಂಪ್ರದಾಯದಲ್ಲಿ ದೇವತೆಗಳ ಶ್ರೇಣೀಕೃತ ವಿಭಾಗಗಳಾಗಿ ಹರಿಯೇ ಸರ್ವೋತ್ತಮನಾಗುತ್ತಾನೆ. ಸೈದ್ಧಾಂತಿಕವಾದ ಮಂಡನೆಗಳೇನೇ ಇರಲಿ, ವಿಷ್ಣುವಿನ ಆರಾಧನೆ ಮತ್ತು ಆತನಿಗೆ ಶರಣುಹೋಗುವುದು, ಆತನ ಅನುಗ್ರಹಕ್ಕಾಗಿ ಹಾತೊರೆಯುವುದು ಭಕ್ತ ಮತ್ತು ಭಗವಂತನ ನಡುವಿನ ವ್ಯತ್ಯಾಸವನ್ನು ಉಳಿಸುತ್ತದೆ. ಆದರೆ ಶೈವ ಸಂಪ್ರದಾಯದಲ್ಲಿಯೂ ಈ ದ್ವೈತಭಾವವು ನುಸುಳದೇ ಇರುವುದಿಲ್ಲ. ವಿಷ್ಣುವನ್ನು ಸರ್ವೋತ್ತಮ ಮತ್ತು ಸರ್ವಶ್ರೇಷ್ಠನನ್ನಾಗಿ ಮಾಡಿರುವಂತಹ ಕಲ್ಪನೆಯೇ ಶಿವನನ್ನೂ ಅತ್ಯುತ್ತಮನಾಗಿಸಿ ಶ್ರೇಷ್ಠತೆಯ ಗೀಳಿಗೆ ಬಲಿಯಾದ ಸೂಚನೆಗಳು ಭಾರತದಲ್ಲಿ ಕಾಣುತ್ತದೆ.

ಹನ್ನೊಂದು ಮತ್ತು ಹನ್ನೆರಡನೆಯ ಶತಮಾನದಲ್ಲಿ ಶೈವ ಮತು ವೈಷ್ಣವರ ಶ್ರೇಷ್ಠತೆಯ ಗೀಳಿನ ಸಂಘರ್ಷ ತಾರಕಕ್ಕೇರಿತ್ತು, ಶಿವನಾಮವನ್ನು ವೈಷ್ಣವರ ಮುಂದೆ ಹೇಳುವುದಾಗಲಿ, ಹರಿನಾಮವನ್ನು ಶೈವರ ಮುಂದೆ ಹೇಳುವುದಾಗಲಿ; ಇಂತಹ ಸರಳವಾದ ಘಟನೆಗಳು ತಲೆಗಳುರುಳುವಂತಹ ರಕ್ತಪಾತಕ್ಕೆ ಕಾರಣವಾಗುವಷ್ಟು ವ್ಯಗ್ರವಾದ ಉಗ್ರವಾದಗಳ ನಿದರ್ಶನಗಳಿವೆ. ಆದರೆ ಹದಿಮೂರನೆಯ ಶತಮಾನದ ಹೊತ್ತಿಗೆ ಈ ಸಂಘರ್ಷ ಕೊಂಚ ಉಪಶಮನ ಕಂಡಿತ್ತು.

ವೈಷ್ಣವ ಸಂಪ್ರದಾಯದಲ್ಲಿ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ, ಲಕ್ಷ್ಮಿಯನ್ನು ಮಾನ್ಯ ಮಾಡುವ ಶ್ರೀ ಸಂಪ್ರದಾಯ, ವೈಖನಾಸ ರಾಮಾನಂದಿ ಪರಂಪರೆಯ ಸ್ವಾಮಿನಾರಾಯಣರ ಶ್ರೀ ವೈಷ್ಣವ, ಬ್ರಹ್ಮ ಸಂಪ್ರದಾಯ, ವಲ್ಲಭಾಚಾರ್ಯ ಮತ್ತು ವಿಷ್ಣುಸ್ವಾಮಿಯ ಶುದ್ಧಾದ್ವೈತ, ಕುಮಾರ ಸಂಪ್ರದಾಯ, ನಿಂಬಾರ್ಕರ ದ್ವೈತಾದ್ವೈತ; ಎಲ್ಲವೂ ವಿಷ್ಣುವನ್ನು ಮಾನ್ಯ ಮಾಡಿದಂತಹ ಸಂಪ್ರದಾಯಗಳೇ ಆಗಿವೆ. ದಕ್ಷಿಣ ಭಾರತದಲ್ಲಿ ರಾಮಾನುಜಾಚಾರ್ಯರ ಶ್ರೀ ವೈಷ್ಣವ ವಿಶಿಷ್ಟಾದ್ವೈತ ಸಂಪ್ರದಾಯದ ಐಯ್ಯಂಗಾರ್ ಮುಂದೆ ಉತ್ತರ ಶಾಖೆಯಾಗಿ ವಡಕಲೈ, ದಕ್ಷಿಣ ಶಾಖೆಯಾಗಿ ತಂಕಲೈ ವಿಭಾಗಗಳು ಪಂಚರಾತ್ರ ಆಗಮ ಸಂಪ್ರದಾಯವನ್ನು ತಮ್ಮ ವೈಷ್ಣವ ದೇವಾಲಯಗಳಲ್ಲಿ ಅನುಸರಿಸುತ್ತವೆ. ಈ ಎರಡು ಸಂಪ್ರದಾಯಗಳು ರಾಮಾನುಜರ ತರುವಾಯ ಸುಮಾರು ಇನ್ನೂರು ವರ್ಷಗಳ ನಂತರ ತಲೆ ಎತ್ತಿದವು. ವಡಗಲೈ ಸಂಪ್ರದಾಯವು ಸ್ವಾಮಿ ವೇದಾಂತ ದೇಶಿಕರಿಂದ ಪ್ರೇರಿತವಾದರೆ, ತೆಂಗಲೈ ಮನವಾಲ ಮಾಮುನಿಯವರಿಂದ ಪ್ರೇರಿತವಾಯಿತು. ಸಂಸ್ಕೃತದ ಶ್ಲೋಕಗಳನ್ನು ಬಳಸುವಂತೆ, ತಮಿಳಿನ ದಿವ್ಯಪ್ರಬಂಧಂಗಳನ್ನೂ ದೇವಾಲಯಗಳಲ್ಲಿ ಬಳಸಲಾರಂಭಿಸಿದರು.

ವೈಖನಸರು ದೇವಸ್ಥಾನಗಳ ಪುರೋಹಿತ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದವರು. ವೈಖಾನಸ ಆಗಮ ಅವರ ಆರಾಧನಾ ಸಂಪ್ರದಾಯ. ಅವರ ಆರಾಧನೆಯ ಭಾಷಾ ಮಾಧ್ಯಮ ಸಂಸ್ಕೃತವೇ ಆಗಿತ್ತು.

ವೈಷ್ಣವರಲ್ಲಿ ಬ್ರಾಹ್ಮಣರಲ್ಲದ ವರ್ಗಗಳೆಂದರೆ, ಚೆಟ್ಟಿಯಾರ್, ಮೊದಲಿಯಾರ್ (ತುಳುವ ವೆಲ್ಲಾರರು) ತಮಿಳುನಾಡಿನಲ್ಲಿ, ನಾಮಧಾರಿಗಳು ಕರ್ನಾಟಕದಲ್ಲಿ, ಕಮ್ಮ, ಕೋಮಟಿಗರು, ಪದ್ಮಶಾಲಿ, ರೆಡ್ಡಿ, ರಾಜು, ಹರಿದಾಸು ಆಂಧ್ರಪ್ರದೇಶದಲ್ಲಿ ಹಾಗೆಯೇ ಉತ್ತರ ಭಾರತದಲ್ಲಿಯೂ ಕಾಣಬರುತ್ತಾರೆ. ಬ್ರಾಹ್ಮಣೇತರ ಹಲವು ವರ್ಗಗಳು ವೈಷ್ಣವರಾದರೂ ಮಾಂಸಾಹಾರಿಗಳೂ ಆಗಿದ್ದಾರೆ.

ದೇವಾಲಯ ಸಂಪ್ರದಾಯಗಳಲ್ಲಿ ತಿರುಮಲ ದೇವಸ್ಥಾನದಲ್ಲಿ ವೈಖನಸ ಪರಂಪರೆಯದ್ದಾದರೆ, ಉಡುಪಿಯಲ್ಲಿ ಮಾಧ್ವ ಸಂಪ್ರದಾಯವಿದೆ. ಮೇಲುಕೋಟೆಯಲ್ಲಿ ತೆಂಗಲೈ, ತಿರುವಲ್ಲೂರ್‌ನಲ್ಲಿ ವಡಗಲೈ ಸಂಪ್ರದಾಯವನ್ನು ಅನುಸರಿಸುವ ವೈಷ್ಣವರು. ಆದರೆ ಇವು ಯಾವ ಸಂಪ್ರದಾಯವೆಂದು ಏನೂ ಯೋಚಿಸದೇ ಅಬ್ರಾಹ್ಮಣ ವೈಷ್ಣವರು ಪುರೋಹಿತ ವರ್ಗವನ್ನು ಸಾಕುತ್ತಿದ್ದಾರೆ, ಸಲಹುತ್ತಿದ್ದಾರೆ. ಅಬ್ರಾಹ್ಮಣ ಭಕ್ತರು ತಾವು ವೈಷ್ಣವರು ಎಂದೂ ಅರಿವಿರದೇ ತಮ್ಮ ಮನೆ ದೇವರು ತಿರುಪತಿ ತಿಮ್ಮಪ್ಪನೆಂದೂ, ಇನ್ಯಾವುದೋ ನರಸಿಂಹ ಸ್ವಾಮಿ ಎಂತಲೂ, ಶ್ರಾವಣ ಮಾಸದಲ್ಲಿ ನಾಮವೇರಿಸಿಕೊಂಡು ಶನಿವಾರ ಮಾಡುತ್ತೇವೆ ಎಂದೂ ವಿಷ್ಣುವಿಗೆ ನಡೆದುಕೊಳ್ಳುತ್ತಿರುತ್ತಾರೆ. ಅವರಿಗೆ ನಾಮ ಧರಿಸಿರುವ ಯಾವ ಪ್ರತಿಮೆಯಾಗಲಿ ವ್ಯತ್ಯಾಸವಿಲ್ಲ, ಅಕ್ಷರಮುಟ್ಟಗಿನ ವಿಷ್ಣುವಿನ ಭಕ್ತರು ಮತ್ತು ಪುರೋಹಿತರ ಪಾಲಕರು ಅವರು.

ಆದರೆ ಅವರಲ್ಲಿ ಹಣೆಯ ಮೇಲೆ ತಾವಿಡುವ ನಾಮದ ಬಗ್ಗೆಯೇ ವಿವಾದಗಳನ್ನು ಎತ್ತಿಕೊಂಡು, ಕೇಸುಗಳನ್ನು ಜಡಿದುಕೊಂಡು ತಮ್ಮ ಶ್ರೇಷ್ಠತೆಯನ್ನು ಸಾಬೀತುಮಾಡುವ ಭರಾಟೆಯಲ್ಲಿ ಒದ್ದಾಡುತ್ತಾ ಇರುವ ವಿಷಯಗಳಾವುವೂ ಅಬ್ರಾಹ್ಮಣ ವೈಷ್ಣವರಿಗೆ ತಿಳಿಯುವುದೇ ಇಲ್ಲ, ಅವರಿಗೆ ತಿಲಕವೋ, ಮುದ್ರೆಯೋ, U ಆಕಾರವೋ, Y ಆಕಾರವೋ ಏನೂ ತಿಳಿಯದು. ವಿಷ್ಣುವಿನ ಅವತಾರ ಕೃಷ್ಣನಾದರೂ ಸೈ, ರಾಮನಾದರೂ ಸೈ, ತಿಮ್ಮಪ್ಪನಾದರೂ ಸೈ.

ಕೇರಳದಲ್ಲಿನ ವೈಷ್ಣವರೆಂದರೆ ಪಿಶಾರೋದಿಗಳು, ಗೌಡಸಾರಸ್ವತ ಬ್ರಾಹ್ಮಣರು, ಎಂಬ್ರಾಂತಿರಿಗಳು ಜೊತೆಗೆ ತಿರುವಲ್ಲ ಶ್ರೀ ವಲ್ಲಭ ವಿಷ್ಣು ದೇವಸ್ಥಾನವೂ ಕೂಡ ಪರಮ ವೈಷ್ಣವ ಸಂಪ್ರದಾಯದ ಕೇಂದ್ರಗಳಲ್ಲೊಂದು.

ಉತ್ತರ ಭಾರತದಲ್ಲಿ ಕೃಷ್ಣನ ಅನುಸರಿಸುವ ಮೀರಾಬಾಯಿ, ಸೂರದಾಸ್‌ರಂತಹ ಕ್ರಾಂತಿಕಾರಿ ಭಕ್ತಿಪಂಥದ ಸಂತರಿಂದ ಹಿಡಿದು ರಾಮನನ್ನು ಆರಾಧಿಸಿದ ಸಂತ ತುಳಸೀದಾಸ್‌ರಿಂದ ಹಿಡಿದು, ಸಂಪ್ರದಾಯಗಳನ್ನು ಧಿಕ್ಕರಿಸುವ ದಾರ್ಶನಿಕ ಕವಿ ಸಂತ ಕಬೀರನವರೆಗೂ ವೈಷ್ಣವ ಸಂಪ್ರದಾಯದ ಢಾಳಾದ ಛಾಯೆಗಳು ಕಾಣುತ್ತವೆ.

ಇತಿಹಾಸದಲ್ಲಿ ಎರಡನೇ ಚಂದ್ರಗುಪ್ತ (ವಿಕ್ರಮಾದಿತ್ಯ) ನಂತಹ ಅರಸನೂ ಭಾಗವತ ವೈಷ್ಣವನೆಂದು ಕರೆಯಿಸಿಕೊಂಡಿದ್ದನು. ಆದರೆ ದಕ್ಷಿಣಭಾರತದಲ್ಲಿ ಏಳರಿಂದ ಹತ್ತನೆಯ ಶತಮಾನದಲ್ಲಿ ಹನ್ನೆರಡು ಜನ ಆಳ್ವಾರ್‌ರಿಂದ, ಅವರ ಭಕ್ತಿಗೀತೆಗಳ ಪ್ರಭಾವದಿಂದ ವೈಷ್ಣವ ಸಂಪ್ರದಾಯ ಪ್ರಮುಖವಾಗಿ ತಲೆಯೆತ್ತಿದ್ದಂತೂ ನಿಜ.

ವೈಷ್ಣವ ಸಂಪ್ರದಾಯಕ್ಕೆ ಏಕನಾಥ ಮತ್ತು ದಕ್ಷಿಣ ಭಾರತದ ಸಂಗೀತ ಸಂತ ತ್ಯಾಗರಾಜರ ಕೊಡುಗೆಯೂ ಕಡಿಮೆ ಏನಿಲ್ಲ.

ಶಾಕ್ತರು ಮತ್ತು ಶೈವರು ಬೆರೆತು ಹೋದಂತೆ ಕೃಷ್ಣನ ಆರಾಧಕರೂ ಮತ್ತು ವಿಷ್ಣುವಿನ ಆರಧಕರೂ ಬೆರೆತು ಹೋಗಿ ವೈಷ್ಣವ ಸಂಪ್ರದಾಯವು ಬಲಗೊಳ್ಳುತ್ತಾ ಬಂದಿತು. ಅದರ ಫಲವೇ ಅನಂತ ಪದ್ಮನಾಭ ದೇವಾಲಯ, ಗುರುವಾಯೂರು, ಶ್ರೀರಂಗಮ್, ವೃಂದಾವನ, ಮಥುರಾ, ಅಯೋಧ್ಯಾ ತಿರುಪತಿ, ಪಂಡರಾಪುರ, ಪುರಿ, ಮಯಾಪುರ, ನಾಥದ್ವಾರ, ದ್ವಾರಕಾ ಇತ್ಯಾದಿಯಾಗಿ ವೈಷ್ಣವ ಸಂಪ್ರದಾಯದ ದೇವಸ್ಥಾನಗಳು ಬೆಳೆಯತೊಡಗಿದವು. ಇನ್ನು ಅಮೆರಿಕಾ, ಯೂರೋಪ್ ಖಂಡದ ದೇಶಗಳಲ್ಲಿ, ಆಫ್ರಿಕಾ, ರಷಿಯಾ ಮತ್ತು ದಕ್ಷಿಣ ಅಮೆರಿಕೆಯಾ ದೇಶಗಳಲ್ಲಿ ಈಗಿನ ಪ್ರಾಟೆಸ್ಟಂಟ್ ಕ್ರೈಸ್ತರು ಧರ್ಮ ಪ್ರಚಾರ ಮಾಡುವಂತೆ ವೈಷ್ಣವ ಧರ್ಮ ಪ್ರಚಾರವನ್ನು ಮಾಡುತ್ತಾ ವೈಷ್ಣವ ಸಂಪ್ರದಾಯವನ್ನು ಬೆಳೆಸಿದ್ದು ಎ ಸಿ ಭಕ್ತಿವೇದಾಂತ ಸ್ವಾಮಿ ಪ್ರಭುಪಾದ 1966ರಲ್ಲಿ ಇಸ್ಕಾನ್ ಮೂಲಕ.


ತಮ್ಮದೇ ಆದ ಉಚ್ಚಾರಣೆಯಲ್ಲಿ ಮಂತ್ರಗಳನ್ನು ಹೇಳಿಕೊಂಡು, ಕೃತಕವೆನಿಸುವಂತೆ ವೈಷ್ಣವ ಸಿದ್ಧಾಂತವನ್ನು ಪಾಠ ಒಪ್ಪಿಸುತ್ತಾ, ವೈಕುಂಠ, ಕೃಷ್ಣ, ರಾಧೆ ಎಂದು ರೈಲುಗಳಲ್ಲಿ, ವಿಮಾನ ನಿಲ್ದಾಣಗಳಲ್ಲಿ ಕೃಷ್ಣ ಪ್ರಜ್ಞೆಯನ್ನು ಹರಡುವ ಕೈಂಕರ್ಯವನ್ನು ಮಾಡುವ ವಿದೇಶಿಯರನ್ನು ನೋಡಿದರೆ ಪಾಪ ಎನಿಸುತ್ತದೆ.

ಎಲ್ಲಾ ದೇವರುಗಳ ಹುಟ್ಟುಗಳನ್ನು, ಇರುವುಗಳನ್ನು ನಿರಾಕರಿಸುತ್ತಾ, ಖಂಡಿಸುತ್ತಾ, ವಿಡಂಬಿಸುತ್ತಾ ತಮ್ಮ ಪಿತನ, ಸುತನ ಮತ್ತು ಪವಿತ್ರಾತ್ಮದ ತ್ರಿಮೂರ್ತಿಸ್ವರೂಪವೇ ಸತ್ಯ ಎಂಬ ವಾದವನ್ನು ಮಂಡಿಸುತ್ತಾ ಮತಾಂತರಕ್ಕೆ ಯತ್ನಿಸುವ ಆಗ್ರೆಸ್ಸಿವ್, ಅವೈಜ್ಞಾನಿಕ ಮತ್ತು ಅವಿವೇಕಿ ಕ್ರೈಸ್ತ ಪಂಗಡಗಳ ರೀತಿಯಲ್ಲಿಯೇ ಇಸ್ಕಾನ್ ಮಂದಿಯೂ ಕೂಡ ವೈಷ್ಣವ ತತ್ವವನ್ನು ಪ್ರಚಾರ ಮಾಡುವ ಭರದಲ್ಲಿರುತ್ತಾರೆ.

ಶೈವ ಸಂಪ್ರದಾಯವನ್ನು ಮಸುಕು ಮಾಡುವ, ಅದರೊಂದಿಗೆ ಪೈಪೋಟಿ ಬಿದ್ದು ತಮ್ಮ ವೈಷ್ಣವ ಸಂಪ್ರದಾಯವನ್ನು ಎತ್ತಿ ಹಿಡಿಯುವ ಅಗತ್ಯವಾದರೂ ವಿಷ್ಣುಭಕ್ತರಿಗೆ ಏನಿತ್ತು? ಅದರ ರಾಜಕೀಯ ಉದ್ದೇಶಗಳೇನು? ಮುಂದೆ ನೋಡೋಣ. ■

ಮೋದಿಯ ಸರ್ವಾಧಿಕಾರಿ ಮಾದರಿ

ಪ್ರಜಾತಾಂತ್ರಿಕ ವಿಧಾನಗಳ ಮೂಲಕವೇ ಜರ್ಮನಿಯ ಸಂಸತ್ತಿಗೆ ಪ್ರವೇಶಿಸಿದ ನಂತರ ಸಂಸತ್ತನ್ನೇ ರದ್ದುಗೊಳಿಸಿ, ಅಲ್ಲಿನ ಪ್ರತಿರೋಧದ ಧ್ವನಿಗಳನ್ನು ಮತ್ತು ಅಲ್ಪಸಂಖ್ಯಾತ ಯಹೂದ್ಯರನ್ನು ನಿರ್ನಾಮಗೊಳಿಸಿ ಸರ್ವಾಧಿಕಾರಿಯಾಗಿ ಮೆರೆದ ಹಿಟ್ಲರ್‌ನ ಇತಿಹಾಸವನ್ನು ನಾವು ಮರೆತಿವೇ? ತತ್ವಜ್ಞಾನಿ ಜಾರ್ಜ್ ಸಂತಾಯನನ ಪ್ರಕಾರ ಇತಿಹಾಸವನ್ನು ಮರೆಯುವವರು ಅದರ ಪುನರಾವರ್ತನೆಯ ಶಿಕ್ಷೆಗೆ ಒಳಗಾಗಲೇಬೇಕು. ಭಾರತವೀಗ ಅಂಥಾದ್ದೊಂದು ಶಿಕ್ಷೆಗೆ ಗುರಿಯಾಗುತ್ತಿರುವ ಲಕ್ಷಣಗಳು ಗೋಚರಿಸುತ್ತಿವೆ. ಕೇಂದ್ರದಲ್ಲಿ ಅಧಿಕಾರ ಗ್ರಹಣ ಮಾಡಿರುವ ನೂತನ ಸರ್ಕಾರದ ಸುಮಾರು 90 ದಿನಗಳ ಅವಧಿಯಲ್ಲೇ ದೇಶಾದ್ಯಂತ ಅನೇಕ ಅನಪೇಕ್ಷಣೀಯ ಘಟನೆಗಳು ನಡೆದಿವೆ. ಬಿಡಿಬಿಡಿಯಾಗಿ ನಡೆದಿರುವ ಈ ಘಟನೆಗಳೆಲ್ಲವೂ ವಾಸ್ತವದಲ್ಲಿ ಒಂದಕ್ಕೊಂದು ಥಳುಕು ಹಾಕಿಕೊಂಡಿವೆ. ಅವೆಲ್ಲವನ್ನೂ ಜೋಡಿಸುವ ಸಾಮಾನ್ಯ ಎಳೆಯೆಂದರೆ 'ಹಿಂದೂ ರಾಷ್ಟ್ರ' ನಿರ್ಮಾಣದ ಗುರಿ. ಇತ್ತೀಚೆಗೆ ನಡೆದಿರುವ ಒಂದೆರಡು ಘಟನೆಗಳೂ ಇದೇ ಸಾಲಿಗೆ ಸೇರುತ್ತವೆ.



❖ ಕೆಲವು ಮಾಧ್ಯಮಗಳಲ್ಲಿ ಪ್ರಕಟವಾದ ಈ ಚಿತ್ರವನ್ನು ಗಮನಿಸಿ. ಥಕ್ಕನೆ ನೋಡಿದಾಗ ಇದೊಂದು ಸಾಧಾರಣ ಸಭೆಯಲ್ಲವೇ, ಇದರಲ್ಲೇನು ಮಹಾ ವಿಶೇಷ ಅನಿಸಬಹುದು. ಆದರೆ ಪ್ರಧಾನಿ ವೇದಿಕೆಯಲ್ಲಿದ್ದರೆ ಎಂಪಿಗಳು, ಮಂತ್ರಿಗಳು ಕೆಳಗಡೆ ಕುರ್ಚಿಗಳಲ್ಲಿರುವ ಚಿತ್ರವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇದು ಶಿಕ್ಷಕನೊಬ್ಬ ಮಕ್ಕಳನ್ನು ಒಬ್ಬೊಬ್ಬರನ್ನಾಗಿ ಎದ್ದು ನಿಲ್ಲಿಸಿ ಪ್ರಶ್ನೆ ಕೇಳುತ್ತಿರುವಂತಿಲ್ಲವೇ? ಎತ್ತರದ ಸಿಂಹಾಸನದಲ್ಲಿ ಕುಳಿತ ರಾಜನೊಬ್ಬ ಆಸ್ಥಾನದಲ್ಲಿ ನೆರೆದಿರುವ ಮಂತ್ರಿಮಾಗಧರನ್ನು ವಿಚಾರಣೆಗೆ ಒಳಪಡಿಸುವಂತಿಲ್ಲವೇ? ಇಲ್ಲಿ ಧಣಿ-ಸೇವಕ ಮಾದರಿಯ ಮೇಲು, ಕೀಳು ಭಾವನೆಯೊಂದು ಢಾಳಾಗಿ ಎದ್ದುತೋರುತ್ತಿಲ್ಲವೇ? ಇದನ್ನು ಪ್ರಜಾಸತ್ತಾತ್ಮಕ ಕ್ರಮವೆಂದು ಕರೆಯಲು ಸಾಧ್ಯವೇ? ತಮಾಷೆಯೆಂದರೆ ಏಕವ್ಯಕ್ತಿ ಕೇಂದ್ರಿತ ಅಧಿಕಾರವನ್ನು ಗಟ್ಟಿಗೊಳಿಸುವಿಕೆಯ ಈ ಕ್ರಮವನ್ನು ಪರಸ್ಪರರೊಂದಿಗಿನ ಸಂವಹನ ಎಂದು ಕರೆಯಲಾಗುತ್ತಿದೆ! ಮೋದಿ ಹಾಕಿದ ಪ್ರಶ್ನೆಯೊಂದಕ್ಕೆ ಕಾನೂನು ಸಚಿವ ರವಿಶಂಕರ ಪ್ರಸಾದ್ ಬೇರೇನೋ ಉತ್ತರ ಹೇಳತೊಡಗಿದಾಗ ಅರ್ಧದಲ್ಲೇ ತಡೆದ ಮೋದಿ, 'ಅದೆಲ್ಲ ನನಗೆ ಗೊತ್ತು, ರಾಜಕೀಯದಲ್ಲಿ ನಿನ್ನ ಸಾಧನೆ ಏನೆಂದು ಹೇಳು' ಎಂದಾಗ ಆಘಾತಕ್ಕೊಳಗಾದ ಸನ್ಮಾನ್ಯ ಸಚಿವರು ಏನು ಹೇಳಬೇಕೆಂದೇ ತೋಚದೆ ತಡವರಿಸಿದರಂತೆ! ಸಭೆಯಲ್ಲಿದ್ದ ಪ್ರತಿಯೊಬ್ಬನ ಫೋಟೊ ಕ್ಲಿಕ್ಕಿಸಬೇಕೆಂಬ ಆದೇಶ ನೇರವಾಗಿ ಪ್ರಧಾನಿ ಕಚೇರಿಯಿಂದಲೇ ಬಂದಿತ್ತೆನ್ನಲಾಗಿದೆ. ಆಕಾಶದಲ್ಲಿ ಹಾರಾಡುತ್ತಿರುವವರಂತೆ ವರ್ತಿಸುವವರನ್ನು ನೆಲಕ್ಕಿಳಿಸಲೆಂದು ಪ್ರಧಾನಿ ಹೂಡಿದ ಉಪಾಯ ಇದಂತೆ. ಅದಕ್ಕೋಸ್ಕರವೇ ಆ ಚಿತ್ರಗಳನ್ನು ಮಾಧ್ಯಮಗಳ ಮೂಲಕ ಎಲ್ಲೆಡೆ ಬಿತ್ತರಿಸಲಾಯಿತಂತೆ.


❖ ಮೂಲಗಳ ಪ್ರಕಾರ ಸಚಿವ ನಿತಿನ್ ಗಡ್ಕರಿ ಈಗ ಕೆಲವು ವ್ಯಕ್ತಿಗಳನ್ನು ತನ್ನ ಮನೆಯಲ್ಲಿ ಭೇಟಿ ಮಾಡುತ್ತಿಲ್ಲವಂತೆ. ಅವರಿರುವಲ್ಲಿಗೆ ತನ್ನ ಕಾರು ಕಳುಹಿಸಿ, ಪಿಕಪ್ ಮಾಡಿಸಿ, ಬೇರೆಲ್ಲಿಗೋ ಕರೆದುಕೊಂಡು ಹೋಗಿ ಅವರ ಜತೆ ಮಾತುಕತೆ ನಡೆಸುತ್ತಿದ್ದಾರಂತೆ.

❖ ನರೇಂದ್ರ ಮೋದಿಯ ಆದೇಶದ ಮೇರೆಗೆ ಆತನ ಆಪ್ತನನ್ನೇ ಲೋಕಸಭೆಯ ಸ್ಪೀಕರ್ ಅವರ ವಿಶೇಷಾಧಿಕಾರಿಯಾಗಿ ನೇಮಿಸಲಾಗಿದೆ.

ಅಸಲಿಗೆ 'ಗುಜರಾತ್ ಮಾದರಿ' ಅಂದರೆ ಇದೇ. ಗುಜರಾತಿನಲ್ಲಿ ಸುಮಾರು ಒಂದು ಡಜನ್ ಖಾತೆಗಳನ್ನು ತನ್ನ ಮುಷ್ಟಿಯೊಳಗಿಟ್ಟುಕೊಂಡಿದ್ದ ಮೋದಿ ಅಲ್ಲಿ ಸರ್ವಾಧಿಕಾರಿ ಥರ ವರ್ತಿಸುತ್ತಿದ್ದ ವಿಷಯ ಜಗಜ್ಜಾಹೀರಾಗಿದೆ. ಆತ ವಿರೋಧಿಗಳನ್ನು ಸಂಪೂರ್ಣವಾಗಿ ದಮನ ಮಾಡಿದ್ದ. ಗುಜರಾತಿನ ಎಮ್ಮೆಲ್ಲೆಗಳು, ಮಂತ್ರಿಗಳೆಲ್ಲರೂ ರಬ್ಬರ್ ಸ್ಟ್ಯಾಂಪ್ ಥರ ಇದ್ದರು. ಈಗಿನ ಕೇಂದ್ರ ಸಚಿವರ ವರ್ತನೆಯೂ ಅದೇ ಮಾದರಿಯಲ್ಲಿಲ್ಲವೇ?

ಎರಡನೆ ಆತಂಕಕಾರಿ ಬೆಳವಣಿಗೆಯೆಂದರೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಪಟ್ಟ ನೂತನ ಮಸೂದೆ. ಸದ್ಯ ಬಳಕೆಯಲ್ಲಿರುವ ಕಾಲೇಜಿಯಂ ವ್ಯವಸ್ಥೆ ಪಾರದರ್ಶಕವಾಗಿಲ್ಲ ಎಂಬ ಟೀಕೆಗಳು ಹಲವು ವರ್ಷಗಳಿಂದಲೂ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಪಾರದರ್ಶಕತೆಯುಳ್ಳ ಆಯೋಗವೊಂದರ ರಚನೆ ಕುರಿತ ಪ್ರಕ್ರಿಯೆಗಳು ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲೇ ಆರಂಭವಾಗಿದ್ದವು. ತಜ್ಞರ, ಸಂಘಸಂಸ್ಥೆಗಳ, ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ಕ್ರೋಢೀಕರಿಸುವ ಕಾರ್ಯ ಜಾರಿಯಲ್ಲಿತ್ತು. ಆದರೆ ನೂತನ ಎನ್‌ಡಿಎ ಸರ್ಕಾರ ಇದ್ಯಾವುದಕ್ಕೂ ಕಾಯದೆ ತರಾತುರಿಯಲ್ಲಿ ಕೆಲವು ಸಭೆಗಳನ್ನು ನಡೆಸಿ, ರಾಷ್ಟ್ರೀಯ ನ್ಯಾಯಾಧೀಶ ನೇಮಕಾತಿ ಆಯೋಗ (ಎನ್‌ಜೆಎಸಿ) ಎಂಬ ಹೆಸರಿನ ಮಸೂದೆಯೊಂದನ್ನು ರಚಿಸಿ, ಅದನ್ನು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ಮಂಡಿಸಿದ್ದಲ್ಲದೆ ಎರಡೇ ಎರಡು ದಿನಗಳೊಳಗಾಗಿ ಸಂಸತ್ತಿನ ಅನುಮೋದನೆಯನ್ನೂ ಪಡೆದುಕೊಂಡಿದೆ. ಮಹಿಳಾ ಮೀಸಲಾತಿಯಂತಹ ಅತ್ಯಂತ ಪ್ರಗತಿಪರ ಮಸೂದೆಯನ್ನು ಮೂಲೆಗುಂಪು ಮಾಡಿ ಇಷ್ಟೊಂದು ಅವಸರದಲ್ಲಿ ನ್ಯಾಯಾಂಗ ಆಯೋಗ ಮಸೂದೆಯನ್ನು ಮಂಡಿಸಿದ್ದರ ಹಿಂದೆ ಏನಾದರೂ ಒಳಮರ್ಮ ಇದೆಯಾ? ಆಯೋಗದ ಸಂಯೋಜನೆಯನ್ನು ಸೂಕ್ಷ್ಮ ವಿಶ್ಲೇಷಣೆಗೊಳಪಡಿಸಿದಾಗ ಬಹುಶಃ ಈ ಪ್ರಶ್ನೆಗೆ ಉತ್ತರ ಸಿಗಬಹುದು. ಆಯೋಗದ ಒಟ್ಟು ಆರು ಸದಸ್ಯರ ಪೈಕಿ ಮೂವರು ನ್ಯಾಯಾಧೀಶರಾದರೆ ಇನ್ನುಳಿದ ಮೂವರಲ್ಲಿ ಒಬ್ಬರು ಕಾನೂನು ಸಚಿವರು ಮತ್ತು ಇಬ್ಬರು 'ಶ್ರೇಷ್ಠ ವ್ಯಕ್ತಿಗಳು'. ಈ 'ಶ್ರೇಷ್ಠ'ರನ್ನು ಆರಿಸುವವರು ಯಾರು? ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರು, ಪ್ರಧಾನಿ ಮತ್ತು ಪ್ರತಿಪಕ್ಷದ ನಾಯಕ. 'ಶ್ರೇಷ್ಠ ವ್ಯಕ್ತಿ'ಯಾಗಲು ಇರಬೇಕಾದ ಮಾನದಂಡಗಳೇನು ಎಂಬುದರ ಬಗ್ಗೆ ಸ್ಪಷ್ಟತೆ ಇರುವಂತಿಲ್ಲ. ಖ್ಯಾತ ನ್ಯಾಯವಾದಿ ಫಾಲಿ ನಾರಿಮನ್ ಅಭಿಪ್ರಾಯದಲ್ಲಿ (1) ಶ್ರೇಷ್ಠ ವ್ಯಕ್ತಿಗಳನ್ನು ಆಯ್ಕೆ ಮಾಡುವ ಸಮಿತಿಯಲ್ಲಿ ಕೇವಲ ಮುಖ್ಯ ನ್ಯಾಯಮೂರ್ತಿ ಮತ್ತು ರಾಷ್ಟ್ರಪತಿ ಇರಬೇಕೇ ಹೊರತು ರಾಜಕಾರಣಿಗಳು ಇರಲೇಕೂಡದು (2) ನ್ಯಾಯಾಧೀಶರ ಸಂಖ್ಯೆ ಮೂರಕ್ಕಿಂತ ಹೆಚ್ಚಿರುವುದೇ ಸೂಕ್ತವಾದುದು. ಆಯೋಗ ರಚ[ನೆಗೆ] ಮುನ್ನ ನಡೆದ ಸಭೆಗಳಲ್ಲಿ ಭಾಗವಹಿಸಿದವರಲ್ಲಿ ಒಬ್ಬರ[ಾದ] ನಾರಿಮನ್ ಪ್ರಕಾರ ಅಲ್ಲಿ ನಿರ್ಧರಿಸಿದಂತ[ಹ] ವಿಷಯಗಳನ್ನು ಮಸೂದೆಯಲ್ಲಿ ಅಳವಡಿಸಲಾಗಿಲ್ಲ. ಮತ್ತೊಂದು ಪ್ರಮುಖ ವಿಚಾರವೆಂದರೆ ಮಸೂದೆಯನ್ನು ಕಾಯ್ದೆಯಾಗಿಸುವ ಮೊದ[ಲು] ಸಂವಿಧಾನಕ್ಕೆ ನಿರ್ದಿಷ್ಟ ತಿದ್ದುಪಡಿ ತಂದು ಅದಕ್ಕೆ ಕ[ನಿಷ್ಠ] ಅರೆವಾಸಿ ರಾಜ್ಯಗಳ ಒಪ್ಪಿಗೆ ಪಡೆಯಬೇಕೆಂದಿದೆ. ಆ[ದರೆ] ಇಲ್ಲಿ ಎಲ್ಲವೂ ತಿರುವುಮುರುವಾಗಿದೆ. ರಾಜ್ಯ[ಗಳ] ಅನುಮೋದನೆ ಪಡೆಯುವ ಪ್ರಕ್ರಿಯೆ ಆರಂಭವಾಗಿ[ರು]ವುದು ಮಸೂದೆಯನ್ನು ಕಾಯ್ದೆಯಾಗಿಸಿದ ಬಳಿಕ[ವೇ].

ಇದನ್ನೆಲ್ಲ ಗಮನಿಸಿದಾಗ ಬಲವತ್ತರ ಶಂಕೆಯೊಂ[ದು] ಮೂಡುತ್ತಿದೆ. 'ಸುಪ್ರೀಂ ಕೋರ್ಟಿನ ಕ್ಲೀನ್ ಚಿ[ಟ್] ಸಿಕ್ಕಿದೆ' ಎಂಬ ಚುನಾವಣಾಪೂರ್ವದ ಸುಳ್ಳ[ನ್ನು] ಸತ್ಯವಾಗಿಸುವ ಹುನ್ನಾರವೊಂದು ನಡೆಯುತ್ತಿದೆಯೆ[?] ಏಕೆಂದರೆ ಈಗಾಗಲೇ ಸಾಬೀತಾಗಿರುವಂತೆ ಚೊ[ರ] ಗುರು ಚಾಂಡಾಲ ಶಿಷ್ಯರ ಮಹಾ ಅಪಾಯಕಾ[ರಿ] ಕ್ರಿಮಿನಲ್ ಕಾಂಬಿನೇಷನ್ ಏನು ಮಾಡಲ[ೂ] ಹೇಸುವಂಥದ್ದಲ್ಲ. ಪ್ರಜಾತಾಂತ್ರಿಕ ವ್ಯವಸ್ಥೆಯ ಬುಡ[ಕ್ಕೇ] ಕೊಡಲಿಯೇಟು ಹಾಕುವಂತಹ ಈ ಎಲ್ಲ ಬೆಳವಣಿಗೆ[ಗಳ] ಕುರಿತು ಒಂದೋ ಎರಡೋ ಮಾಧ್ಯಮಗಳ[ು] ಹೊರತುಪಡಿಸಿದರೆ ರಾಜಕೀಯ ಪಕ್ಷಗಳೂ ಸೇರಿದ[ಂತೆ] ಮಿಕ್ಕೆಲ್ಲಾ ಕಡೆ ಮೌನ ಆವರಿಸಿರುವುದನ್ನು, ಇತಿಹಾ[ಸ] ಪುನರಾವರ್ತನೆ ಆಗುತ್ತಿರುವುದನ್ನು ಕಂಡ[ರೆ] ಗಾಬರಿಯಾಗುವುದಿಲ್ಲವೇ?



ಪರಮೇಶ್ವರರದ್ದು ದಿಢೀರ್ ದಲಿತ ಪ್ರಜ್ಞೆ

ಶ್ರೀಯುತ ಇಸ್ಮತ್ ಪಜೀರ್ ಅವರು ಉಲ್ಲೇಖಿಸಿದಂತಹ ಸಾಹಿತ್ಯ ಸಮ್ಮೇಳನಗಳ ಬ್ರಾಹ್ಮಣೀಕರಣದ ಪಿಡುಗು ಕರಾವಳಿ ಜಿಲ್ಲೆಗಳಲ್ಲಿ ಬಹಳ ಹಿಂದಿನಿಂದಲೇ ತಣ್ಣಗೆ ವ್ಯಾಪಿಸುತ್ತಲಿದೆ. ಕಲೆ, ಸಾಹಿತ್ಯ ವಿದ್ವತ್ ಎನ್ನುವುದು ಕೇವಲ ಬ್ರಾಹ್ಮಣರೊಬ್ಬರ ಸೊತ್ತು, ಅವರಿಲ್ಲದೇ ಇವುಗಳಿಗೆ ಅಸ್ತಿತ್ವವೇ ಇಲ್ಲವೆನ್ನುವುದು ಇಂಥವರ ನಂಬಿಕೆಯಿರಬೇಕು. "ನೂರು ದೇವರನೆಲ್ಲ ನೂಕಾಚೆ ದೂರ" ಎಂದ ಕುವೆಂಪುರಂಥವರ ಸಾಹಿತ್ಯ ಇಂತವರಿಗೆ ಬಿಸಿತುಪ್ಪವಿದ್ದಂತೆ. ಅವಕಾಶ ಸಿಕ್ಕರೆ ಕುವೆಂಪು, ದೇವನೂರರಂಥವರ ವಿರುದ್ಧ ಅವರುಗಳು ಕವಿಯೇ ಅಲ್ಲವೆಂದು ಕಾರಿಕೊಳ್ಳಲೂ ಹೇಸದವರಿವರು. ಈ ಕಾರಣಕ್ಕೇ ಮಹಾಕಾವ್ಯ ರಚಿಸಿದ ವ್ಯಾಸ, ವಾಲ್ಮೀಕಿ, ಮೋಹನತರಂಗಿಣಿಯನ್ನು ರಚಿಸಿದಂತಹ ಕನಕದಾಸನಂತವರ ಮೂಲದ ಬಗ್ಗೆ ಇಂಥವರಿಗೆ ಯಾವತ್ತೂ ಸಂಶಯ. ಈ ಜಗತ್ತಿನಲ್ಲಿ ಕೇವಲ ಹೊಭ (ಹೊಟ್ಟೆ ಭರ್ತಿಯಾದವ) ರಿಂದಲಷ್ಟೇ ಸಾಹಿತ್ಯ ಕಲೆಗಳು ಸೃಷ್ಟಿಗೊಂಡಿಲ್ಲ, ದುಡಿದು ದಣಿದ ಅರೆಹೊಟ್ಟೆಗರಿಂದಲೂ ಬದುಕಿಗೆ ಹತ್ತಿರವೆನಿಸುವಂತಹ ಅನೇಕಾನೇಕ ಸಂವೇದನಾಶೀಲ ರಚನಾತ್ಮಕ ಸಾಹಿತ್ಯ ಕಲೆಗಳು ಸೃಷ್ಟಿಗೊಂಡಿವೆ. ಸಂಗೀತ, ಕಲೆ, ಸಾಹಿತ್ಯ ನಿರೂಪಣೆಗಳೆಲ್ಲ ಸಾಮಾಜಿಕ ಬದುಕಿಗೆ ಒಗ್ಗಿಕೊಂಡಂತಹ ಮನುಷ್ಯಸಹಜ ಗುಣಗಳೇ ವಿನಃ ಯಾರ ಪೇಟೆಂಟ್‌ಗೂ ಅವು ಒಳಪಟ್ಟಿಲ್ಲ.




ತುಳುನಾಡಿನ ಮಣ್ಣಿನ ಜನರ ಕಥೆ ಹೇಳುವಂತಹ 'ಪಾಡ್ದನ'ವೂ ಇದಕ್ಕೊಂದು ಉದಾಹರಣೆ. (ಬಾಲಿವುಡ್‌ನಲ್ಲಿ ಸೂಪರ್‌ಹಿಟ್ ಎನಿಸಿದ ಅನೇಕ ಹಳೆ-ಹೊಸಹಾಡುಗಳ ಟ್ಯೂನ್‌ಗಳನ್ನು ಅಪ್ಪಿಕಾದಂತಹ ಆದಿವಾಸಿಗಳ ಜನಪದೀಯ ಹಾಡುಗಳಿಂದ ಕದ್ದದ್ದುಂಟು. ಉದಾಹರಣೆಗೆ 'ಹಮ್' ಚಿತ್ರದ 'ಚುಮ್ಮಾ ಚುಮ್ಮಾ ದೇ.. ದೇ..' ಇತ್ಯಾದಿ) ಅವಕಾಶಗಳು ಮತ್ತು ವಿದ್ಯೆಯ ಕಾರಣಗಳಿಂದ ಒಂದು ವರ್ಗದ ತೊಡಗಿಸುವಿಕೆ ಈ ಕಲೆ ಹಾಗು ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಿರುವಂತೆ ಮೇಲ್ನೋಟಕ್ಕೆ ಕಾಣಿಸುವಂತಿದ್ದರೂ ಕೂಡ ಅದೇ ಸತ್ಯವಲ್ಲ. ಹೀಗಿದ್ದೂ ಕೂಡ ಇವನ್ನೆಲ್ಲ ನಿರ್ದಿಷ್ಟ ವ್ಯವಸ್ಥೆಯೊಂದರ ಅಡಿಗೆ ಬಲವಂತವಾಗಿ ಎಳೆದುತರುವಂತಹ ಪ್ರಯತ್ನ ಯಾಕೋ?

ಈ ದೇಗುಲಗಳು ಹೊಟ್ಟೆ ತುಂಬಾ ಉಂಡು ಆರಾಮಾಗಿ ಕೂತು ಪ್ರವಚನ ಕೇಳಲು ಹೆಚ್ಚು ಪ್ರಶಸ್ತವೇ ವಿನಹ ವಿಷಯ ವಿಸ್ತಾರವುಳ್ಳ ಸಾಹಿತ್ಯ ಸಮ್ಮೇಳನಗಳಿಗಲ್ಲವೇ ಅಲ್ಲ. ಹಟಕ್ಕೆ ಬಿದ್ದಂತೆ ದೇಗುಲಗಳಲ್ಲೇ ಸಾಹಿತ್ಯ ಸಮ್ಮೇಳನ ನಡೆಸುವ ಸಂಪ್ರದಾಯವನ್ನು ಒತ್ತಾಯಪೂರ್ವಕವಾಗಿ ಹೇರುವ ಮಂದಿಯ ಹಿಂದಿರುವ ಉದ್ದೇಶಗಳು ಬೇರೆಯೇ ಆಗಿರುವ ಸಾಧ್ಯತೆಗಳಿವೆ. ಯಾರೂ ತಡೆಯಲಾಗದಂತಹ ಒಬ್ಬ ಪ್ರಭಾವೀ ವ್ಯಕ್ತಿ ಎನಿಸಿಕೊಂಡೂ ಕೂಡ ದೇಗುಲದೊಳಗೆ ಹೋಗಲು ತಯಾರಿಲ್ಲದ ಜಗಜೀವನರಾಂನಂತವರಿರುವ ಈ ಕಾಲದಲ್ಲಿ ಈ ದೇಗುಲ ಪ್ರಾಂಗಣದೊಳಗಿನ ಸಾಹಿತ್ಯ ಸಮ್ಮೇಳನಗಳು ಯಾವತ್ತಿಗೂ ಕೂಡ "ಸಾರ್ವಜನಿಕ" ಎನ್ನಿಸಿಕೊಳ್ಳಲು ಸಾಧ್ಯವೇ ಇಲ್ಲ. ಸಾರ್ವಜನಿಕ ಸತ್ಯನಾರಾಯಣಪೂಜೆ, ಸಾರ್ವಜನಿಕ ಗೋಪೂಜೆ, ವರಮಹಾಲಕ್ಷ್ಮಿ ಪೂಜೆ ಅದುಇದೂ ಎಂದು ಸಾರ್ವಜನಿಕರ ದುಡ್ಡೆತ್ತಿ ಮಾಡುವ ಪೂಜೆಪುನಸ್ಕಾರಗಳಲ್ಲಿ ದುಡ್ಡು ಸಾರ್ವಜನಿಕರದ್ದಾದರೂ ಬ್ರಾಹ್ಮಣರಿಗೆ ಮಾತ್ರ ಪ್ರತ್ಯೇಕ ಪಂಕ್ತಿ ಭೋಜನದ ವ್ಯವಸ್ಥೆಯಿರುತ್ತದೆ. "ವೈದಿಕ ಭೋಜನ" ಎಂಬ ಬೋರ್ಡನ್ನೂ ಕೂಡ ನಾಚಿಕೆ ಮುಲಾಜುಗಳಿಲ್ಲದೇ ಹಾಕಿರುತ್ತಾರೆ. ಸಾಹಿತ್ಯ ಸಮ್ಮೇಳನಗಳು ಬ್ರಾಹ್ಮಣರ ಅಧೀನದ ದೇಗುಲಗಳಲ್ಲೇ ನಡೆಯಬೇಕೆನ್ನುವ ಅಲಿಖಿತ ಸಂಪ್ರದಾಯದ ಚಾಳಿ ಮುಂದುವರೆದಂತೆ ಇಲ್ಲಿಯೂ ಕೂಡ ಬ್ರಾಹ್ಮಣರಿಗೆ ಪ್ರತ್ಯೇಕ ಪಂಕ್ತಿಯ ವ್ಯವಸ್ಥೆ ನಿಧಾನವಾಗಿ ಜಾರಿಯಾಗುವುದು ಶತಸಿದ್ಧ. ಇದೀಗ ಕರಾವಳಿಯಲ್ಲಿ ಹಬ್ಬಿಸಲ್ಪಟ್ಟ ಈ ಚಾಳಿ ಇನ್ನಿತರೆ ಜಿಲ್ಲೆಗಳಿಗೂ ನಿಧಾನವಾಗಿ ಹಬ್ಬಲಿದೆ. ಎಷ್ಟೋ ಜಿಲ್ಲೆಗಳಲ್ಲಿ ಇಂದಿಗೂ ಕೂಡ ದೇಶದ ಕಾನೂನನ್ನು ಮೀರಿ ದಲಿತರ ದೇಗುಲ ಪ್ರವೇಶಕ್ಕೆ ತಡೆಯಿದೆ. ಸಾಹಿತ್ಯಾಸಕ್ತ ಮಹಿಳೆಯರು ಹಾಗು ಆಹ್ವಾನಿತ ಕವಯತ್ರಿಯರಿಗೂ ಈ ಮಡಿ ಪರಿಸರದ ಸಮ್ಮೇಳನಗಳು ಮುಜುಗರ ಹಾಗು ಭಯ ತರುವಂತಾದ್ದೇ ಆಗಿದೆ. ಯಾಕೆಂದರೆ, 'ಸಮಸ್ಯೆ'ಯಲ್ಲದ ಸಹಜ ಋತುಚಕ್ರ ಇಲ್ಲಿ ಮೈಲಿಗೆ ಎನಿಸಿಕೊಳ್ಳುತ್ತದೆ. ಅದೇ ರೀತಿ ಸಾವು-ಹುಟ್ಟು ಸಂಭವಿಸಿದ ಮನೆಯವರಿಗೂ ಸಹ ಸೂತಕದ ಭಯ ಇದ್ದೇ ಇದೆ. ಇಂತದೆಲ್ಲದರ ಅರಿವಿದ್ದೂ ಕೂಡ ಮಡಿಮೈಲಿಗೆಯೆಂದು ಮೂರ್ ಮಾರು ಹಾರುವ ಈ ಹಾರವರುಗಳಿಗೆ ಸಾಹಿತ್ಯ ಸಮ್ಮೇಳನಗಳು ದೇವಸ್ಥಾನಗಳಲ್ಲೇ ನಡೆಯಬೇಕೆಂಬ ಹುಚ್ಚು ಹಟ ಎಂಥದಕ್ಕೋ..!!?

-ಶಶಿ ಪುತ್ತೂರು, ದಕ

ಪತ್ರಿಕೆಯಲ್ಲಿ ಇಸ್ಮತ್ ಫಜೀರ್ ಬರೆದಿರುವಂತೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ಹಾಗು ಈ ಎರಡೂ ಜಿಲ್ಲೆಗಳ ಎಂಟು ತಾಲೂಕುಗಳ ಸಾಹಿತ್ಯ ಸಮ್ಮೇಳನಗಳೂ ಬ್ರಾಹ್ಮಣೀಕರಣ ಆಗಿರುವುದು ನಿಜ. ಇದಕ್ಕೆ ಒಂದು ಕಾರಣ ಇಲ್ಲಿಯ ಮಧ್ಯಮ ಜಾತಿಗಳವರು ಇಂಗ್ಲಿಷ್‌ಪ್ರಿಯರಾಗಿ ಪರಿವರ್ತಿತರಾಗಿದ್ದು ಕನ್ನಡ ಸಾಹಿತ್ಯದಿಂದ ದೂರ ಸರಿಯುತ್ತಿದ್ದರೆ ಬ್ರಾಹ್ಮಣರು ಇನ್ನೂ ಕನ್ನಡ ಸಾಹಿತ್ಯ ಪೋಷಿಸುತ್ತಿರುವುದು. ಇನ್ನೊಂದು ಮುಖ್ಯ ಕಾರಣ ಇಲ್ಲಿಯ ಹಿಂದೂ ಶೂದ್ರ ಸಾಹಿತಿಗಳೂ ಕ್ರಮೇಣ ಕೇಸರಿಯ ನೆರಳಿಗೆ ಬರುತ್ತಿರುವುದು. ಇವರಲ್ಲಿ ಹೆಚ್ಚಿನವರಿಗೆ 'ಕಟ್‌ಪೇಸ್ಟ್ ಸಾಹಿತಿ ' ಎಂದೇ ಹೆಸರು! ಯಾಕೆಂದರೆ ಇವರು ನಿಜವಾದ ಸಾಹಿತಿಗಳಾಗಿರದೇ ಶಿಕ್ಷಣ ಕ್ಷೇತ್ರದಲ್ಲಿ ನೌಕರರಾಗಿರುವುದರಿಂದ ಇವರಿಗೆ ಸಿಗುವ ಭರಪೂರ ರಜೆಯನ್ನು ಹಾಗೂ ಲೈಬ್ರರಿಗಳ ಉಚಿತ ಪ[ುಸ್ತಕ] ಸೌಲಭ್ಯಗಳನ್ನು ಉಪಯೋಗಿಸಿ ಇವರು ರಾಮಾಯ[ಣ], ಮಹಾಭಾರತ, ಗೀತೆ ಉಪನಿಷತ್ತುಗಳಿಂದ ವಿಷಯಗಳ[ನ್ನು] ಸಂಸ್ಕೃತ, ಹಳೆಗನ್ನಡ ಅಥವಾ ಇಂಗ್ಲಿಷ್ ಮೂಲಗಳ[ಿಂದ] ಕದ್ದು, ಜತೆಗೆ ಸ್ಥಳೀಯ ಭಾಷೆಯಾದ ತುಳುವಿನ ಜಾನ[ಪದ] ಮೂಲದಿಂದ ಕೆಲವನ್ನು ಎಗರಿಸಿ, ಅವನ್ನು ಕನ್ನಡಕ್ಕೆ [...] ಇಳಿಸಿ ಸಾಹಿತಿಗಳೆನಿಕೊಂಡವರು. ಇವರ ಸ್ವತಂತ್ರ ಕೃತಿ[ಗಳು] ತುಂಬಾ ಕಡಿಮೆ. ನಮ್ಮ ಹಿಂದೂ ಪುರಾಣಗಳಿಂದ ಇ[...] ಕಟ್ ಪೇಸ್ಟ್ ಮಾಡಿ ಸಾಹಿತಿಗಳೆನಿಕೊಂಡಿರುವುದರಿ[ಂದ] ವೈದಿಕ ಧರ್ಮಕ್ಕೆ ಇವರು ಕೃತಜ್ಞರಾಗಿ ಇರಬೇಕಾದು[ದು] ನ್ಯಾಯ ತಾನೇ! ಹಾಗಾಗಿ ಇಲ್ಲಿಯ ಅನೇಕ ಶ[ೂದ್ರ] ಸಾಹಿತಿಗಳ ಮನಸ್ಸೂ ಬ್ರಾಹ್ಮಣೀಕರಣಗೊಂಡಿರುವ[ುದು] ಸಹಜ. ಆದುದರಿಂದ ಇವರಿಗೆಲ್ಲ ಹಿಂದೂ ದೇವಸ್ಥಾನ[ಗಳಲ್ಲಿ] ನಡೆಯುವ ಬ್ರಾಹ್ಮಣೀಕರಣಗೊಂಡ ಸಾಹಿತ್ಯ ಸಮ್ಮೇಳನ[ಗಳು] ರುಚಿಸುವುದು. ವಿಚಿತ್ರವೆಂದರೆ ಇಲ್ಲಿಯ ಪ್ರಬಲ ಒಕ್[ಕಲು] ಜಾತಿಯಾದ ಬಂಟರ ಮಾತೃ ಸಂಘ ಪ್ರಕಟಿಸುವ 'ಸಂಪ[...]' ಎಂಬ ಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳೂ ವೈ[ದಿಕ] ಪರವಾಗಿರುವುದೇ ಹೆಚ್ಚು. ಬಂಟ ಲೇಖಕನ ಹೆಸ[ರಿನಲ್ಲಿ] ಬ್ರಾಹ್ಮಣರು ಬರೆದ ಲೇಖನಗಳೂ ಇರುತ್ತವೆ! ಅ[...] ವಿಚಾರವಾದಿಗಳ ಲೇಖನಗಳಿಗೆ ಇಂತಹಾ ಶೂ[ದ್ರ] ಮಾಸಿಕದಲ್ಲೂ ಸ್ಥಳವಿರುವುದಿಲ್ಲ!


-ರವಿ ಬಿ. ಶೇಣವ, ಮಂಗಳ[ೂರು]



ಕೃಷ್ಣಸುಂದರಿ ಕಾಜೋಲ್ ಬಗ್ಗೆ ಪ್ರಕಟಗೊಂಡ ಲೇಖನ ಉತ್ತಮವಾಗಿತ್ತು. 'ನೂಲಿನಂತೆ ಸೀರೆ ತಾಯಿಯಂತೆ ಮಗಳು' ಎಂಬ ಆಡು ಮಾತು ನಮ್ಮಲ್ಲಿದೆ. ಅದರಂತೆ ಕಾಜೋಲ್ ತಾಯಿ ತನುಜಾ ಕೂಡ ಒಂದು ಕಾಲದಲ್ಲಿ ಬೇಡಿಕೆಯನ್ನು ಹೊಂದಿದ್ದ ನಟಿ.



ರೋಚಕ ನಟ
ರಾಬರ್ಟ್ ರೆಡ್‌ಫೋರ್ಡ್



ಹಾಲಿವುಡ್ ನಟ ರಾಬರ್ಟ್ ರೆಡ್‌ಫೋರ್ಡ್‌ಗೆ ವಯಸ್ಸು 78. ಈ ಇಳಿವಯಸ್ಸಿನಲ್ಲೂ ನಟನೆ ...ಗಿನ ಆಸಕ್ತಿ ಮತ್ತು ಸಿನಿಮಾ ಬಗೆಗಿನ ಕಾಳಜಿ ...ನಲ್ಲಿ ಕಿಂಚಿತ್ತೂ ಕಡಿಮೆಯಾಗಿಲ್ಲ. ಈತ 33 ವರ್ಷ ...ಸ್ಸಾಗುವ ಹೊತ್ತಿಗೆ ಸೂಪರ್ ಸ್ಟಾರ್ ಆಗಿದ್ದವನು. ...ರ್ ಸ್ಟಾರ್‌ಗಿರಿಗಿಂತ ನಟನಾಗಿ ಉಳಿಯುವುದೇ ...ಮ್ಯ ಎಂದು ಭಾವಿಸಿ ಆ ನಿಟ್ಟಿನಲ್ಲಿ ಹಲವಾರು ...ಗಗಳನ್ನು ಇಟ್ಟವನು.

ಈತ ಹುಟ್ಟಿದ್ದು ಕ್ಯಾಲಿಫೋರ್ನಿಯಾದ ಸ್ಯಾಂಟತ ...ನಿಕಾದಲ್ಲಿ. ಹುಡುಗನಾಗಿದ್ದಾಗಿಂದಲೇ ತುಂಟನಾಗಿದ್ದ ...ರ್ಟ್ ಹುಟ್ಟಾ ಪೋಲಿಯೂ ಆಗಿದ್ದ. ಅಷ್ಟೇನೂ ...ಮ ವಿದ್ಯಾರ್ಥಿಯಾಗಿರದಿದ್ದ ಈತ ಗ್ಯಾಂಗು ಕಟ್ಟಿ ...ಡು ಬಿಯರ್ ಇತ್ಯಾದಿಗಳನ್ನು ಕಳ್ಳತನ ಮಾಡುತ್ತಿದ್ದ. ...ದು ಸಲ ಬಂಗಾರ ಕದಿಯುವಾಗ ಪೊಲೀಸರಿಗೆ ...ಬಿದ್ದಿದ್ದ. ತನ್ನ ಇಷ್ಟದ ಗ್ಯಾಂಗಿನೊಡನೆ ಸದಾ ಕುಡಿದು ...ಟಾ ಮಾಡುತ್ತಿದ್ದ ರಾಬರ್ಟ್ ಹೈಸ್ಕೂಲಿನಲ್ಲಿದ್ದಾಗ ...ಕೇಳುವುದು ಬಿಟ್ಟು ಕೊನೆಯ ಬೆಂಚಿನಲ್ಲಿ ಕೂತು ...ಚಂದಮಾಮ, ಬಾಲಮಂಗಳದಂತಹ ಅಲ್ಲಿಯ ...ವಿ ಬರಹಗಳ ಪತ್ರಿಕೆ ಮ್ಯಾಡ್ ಮ್ಯಾಗಜಿನ್ ...ತ್ತಿದ್ದ. ಹೇಗೋ ಹೈಸ್ಕೂಲು ಮುಗಿಸಿ ಕೊಲರಾಡೋ ಯುನಿವರ್ಸಿಟಿಯಲ್ಲಿ ಕಲೆಯನ್ನು ಅಭ್ಯಸಿಸಿ ಅನಿಮೇಶನ್ ...ಒಲವು ತೋರಿದ. 1959ರ ಸುಮಾರಿಗೆ ನಾಟಕ, ...ತೆರೆಯಲ್ಲಿ ನಟಿಸಲಾರಂಭಿಸಿದ. ಆತ ಎಲಿಜಬೆತ್ ...ಯ ಗಂಡನಾಗಿ ನಟಿಸಿದ 'ಬೇರ್‌ಫುಟ್ ಇನ್ ದಿ ...' ಎಂಬ ನಾಟಕ ಹಾಗೂ 'ದಿ ವಾಯ್ಸ್ ... ಚಾರ್ಲಿ ಫೋಂಟ್' ಟಿವಿ ಸೀರೀಸ್ ...ಕರಲ್ಲಿ ಎಂಥ ಸಂಚಲನ ಉಂಟು ...ದವೆಂದರೆ 'ವಾರ್ ಹಂಟ್' ಎಂಬ ...ದ ಮೂಲಕ ರೆಡ್‌ಫೋರ್ಡ್ ಸಿನಿಮಾ ...ಹೂ ಆದ.

...ಹೊಂಬಣ್ಣದ ಕೂದಲು, ನೀಲಿ ...ಗಳು, ಮುದ್ದಾದ ನಗು, ಬೆಳ್ಳಗೆ ...ಳುತ್ತಿದ್ದ ದಂತಗಳು, ಸುಂದರವಾದ ...ಮ... ಇದೆಲ್ಲದರೊಂದಿಗೆ ಪಕ್ವವಾಗಿದ್ದ ...ಭೆಯನ್ನೂ ಹೊಂದಿದ್ದ ರಾಬರ್ಟ್ 60ರ ...ದಲ್ಲಿ ಹಾಲಿವುಡ್ ಅಪಾರ ಬೇಡಿಕೆಯ ...ನಾಗಿದ್ದ. ಆದರೆ ಸ್ಟಾರ್ ಆಗಿ ...ಚುವುದು, ತನ್ನ ಸ್ಫುರದ್ರೂಪವನ್ನೇ ...ಬಂಡವಾಳವಾಗಿ ಮಾಡಿಕೊಳ್ಳುವುದು, ...ನನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದಿಟ್ಟು ...ಳ್ಳುತ್ತಿದ್ದ ಸ್ಟುಡಿಯೋಗಳ ತಾಳಕ್ಕೆ ಕುಣಿಯು...ದು ರಾಬರ್ಟ್‌ಗೆ ಬೇಕಿರಲಿಲ್ಲ. ತಾನು ...ಮಾ ಜಗತ್ತಿಗೆ ಬಂದಿದ್ದೇ ನಟಿಸಲು ಎಂದು ಗಾಢವಾಗಿ ನಂಬಿದ್ದ ರಾಬರ್ಟ್ ತನ್ನ ಸ್ಟಾರ್‌ಗಿರಿಯನ್ನು ಕಳೆದುಕೊಳ್ಳುವುದಕ್ಕೆಂದೇ ಕಳ್ಳನಾಗಿ, ಮೋಸಗಾರನಾಗಿ, ಅತ್ಯಾಚಾರಿಯಾಗಿ ಹಲವಾರು ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡ.

ರಾಬರ್ಟ್ ನಟನಾಗಿ ಜನಪ್ರಿಯತೆಯ ಉತ್ತುಂಗದಲ್ಲಿದ್ದಾಗಲೇ ನಿರ್ದೇಶನಕ್ಕೆ ಕೈಹಾಕಿದ. ಆಗ ಎಲ್ಲರೂ 'ಇವನಿಗೆ ಹುಚ್ಚು ಹಿಡಿದಿರಬೇಕು? ನಟನಾಗಿ ಸುಮ್ಮನಿರುವ ಬದಲು ಇವನಿಗ್ಯಾಕೆ ನಿರ್ದೇಶಕನಾಗುವ ಗೀಳು?' ಎಂದು ಲೇವಡಿ ಮಾಡಿದ್ದರು. ಆದರೆ ಅದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ರಾಬರ್ಟ್ ತಾನೇ ಬೇಡಿಕೆಯನ್ನು ಹೊಂದಿದ್ದ ನಟನಾಗಿದ್ದರೂ ಬೇರೆ ನಟರನ್ನು ಕರೆದು 'ಆರ್ಡಿನರಿ ಪೀಪಲ್' ಎಂಬ ಸಿನಿಮಾವನ್ನು ನಿರ್ದೇಶಿಸಿದ. ಶ್ರೀಮಂತ ಕುಟುಂಬವೊಂದರಲ್ಲಿ ಸಂಭವಿಸುವ ಸಾವು ಅದೆ ಹೇಗೆ ಇಡೀ ಕುಟುಂಬವನ್ನೇ ಬಲಿ ತೆರೆದುಕೊಳ್ಳುತ್ತದೆ ಎಂಬ ಕತೆಯನ್ನು ಹೊಂದಿದ್ದ



ಆ ಸಿನಿಮಾ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿಯನ್ನು ಗೆದ್ದಿತು. ಅಂದಹಾಗೆ ರಾಬರ್ಟ್ ಖ್ಯಾತ ನಟನಾಗಿದ್ದರೂ - ಜೀವಮಾನದ ಸಾಧನೆಗಾಗಿ ಪಡೆದ ಆಸ್ಕರ್ ಪ್ರಶಸ್ತಿಯನ್ನು ಹೊರತುಪಡಿಸಿದರೆ - ಆತ ಗೆದ್ದಿರುವ ಏಕೈಕ ಆಸ್ಕರ್ ಪ್ರಶಸ್ತಿ ಇದು ಎಂಬುದೇ ಸೋಜಿಗದ ಸಂಗತಿ!

ರಾಬರ್ಟ್ ರೆಡ್‌ಫೋರ್ಡ್ ಈಗಲೂ ಜೀನ್ಸ್, ಟೀ-ಶರ್ಟ್, ಜಾಕೆಟ್, ಕ್ಯಾಪ್ ಹಾಕಿಕೊಂಡು ತನ್ನ ಎರಡನೆಯ ಮಡದಿ ಸಿಬಿಲ್ಲಿ ಜೊತೆ ಹೊರಗೆ ಸುತ್ತಲು ಹೋಗುತ್ತಾನೆ. ಜಾಲಿ ಮನುಷ್ಯನಾದ ಈತ ಉತ್ಸಾಹದಿಂದ ಪ್ರವಾಸಿತಾಣಗಳಿಗೆ ಭೇಟಿಕೊಡುತ್ತಾನೆ. ಕಾರ್‌ಗಳನ್ನು ವೇಗವಾಗಿ ಚಲಿಸುತ್ತಾ ಆನಂದಿಸುತ್ತಾನೆ. ಎಪ್ಪತ್ತೆಂಟು ವರ್ಷದ ಈ ಇಳಿವಯಸ್ಸಿನಲ್ಲಿಯೂ ನಿಯಮಿತವಾಗಿ ಕುದುರೆಸವಾರಿ ಮಾಡುತ್ತಾನೆ, ಟೆನಿಸ್ ಆಡುತ್ತಾನೆ. "ಐ ಸ್ಟಿಲ್ ಹ್ಯಾವ್ ಎನರ್ಜಿ. ಯಾವಾಗ ನನ್ನ ಎನರ್ಜಿ ಕ್ಷೀಣಿಸುತ್ತದೆಯೋ ಆಗ ನನ್ನ ವಯಸ್ಸಿನ ಬಗ್ಗೆ ಥಿಂಕ್ ಮಾಡುತ್ತೇನೆ" ಎನ್ನುತ್ತಾನೆ. "ಮನುಷ್ಯನಿಗೆ ವಯಸ್ಸಾಗುತ್ತಿದ್ದಂತೆಯೇ ಬದುಕಿನ ಪಾಠಗಳನ್ನೂ ಕಲಿಯಲು ದಾರಿಯಾಗುತ್ತದೆ" ಎಂದು ನಂಬಿರುವ ರಾಬರ್ಟ್ "ಯಶಸ್ಸು ಎಂಬ ಸಿಗ್ನಲ್ ಲೈಟಿನ ಹತ್ತಿರ ಬರುತ್ತಿದ್ದಂತೆ ನಮ್ಮ ಚಲನೆಯನ್ನು ನಿಲ್ಲಿಸಬಾರದು, ಅದನ್ನೂ ದಾಟಿ ಮುಂದೆ ಸಾಗಬೇಕು" ಎಂಬ ಸಿದ್ಧಾಂತವನ್ನು ತನ್ನ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿದ್ದಾನೆ.

ರಾಬರ್ಟ್ ನಟನಾಗುವ ಮುನ್ನ ಕಲೆ ಅಭ್ಯಾಸ ಮಾಡಲು ಪ್ಯಾರಿಸ್‌ಗೆ ಹೋದ. ಅಲ್ಲಿ ಆತನೊಂದಿಗೆ ಅಭ್ಯಸಿಸುತ್ತಿದ್ದ ವಿದ್ಯಾರ್ಥಿಗಳು ಹಂಗೇರಿ ಪರ ಪ್ರತಿಭಟಿಸಲು ಮುಂದಾದಾಗ ರಾಜಕೀಯದಲ್ಲಿ ರಾಬರ್ಟ್‌ಗೆ ಅಷ್ಟೇನೂ ಆಸಕ್ತಿ ಅಥವಾ ಅನುಭವವಿಲ್ಲದಿದ್ದರೂ ತಾನೂ ಪ್ರತಿಭಟನೆಯಲ್ಲಿ ಭಾಗವಹಿಸಿ ಪೊಲೀಸರ ಕೈಲಿ ಒದೆ ತಿಂದು ಗಾಯಗೊಂಡ. ಆನಂತರ ಪ್ಯಾರಿಸ್ ಬಿಟ್ಟು ಇಟಲಿಗೆ ತೆರಳಿ ಯೂತ್ ಹಾಸ್ಟೆಲುಗಳಲ್ಲಿ ತಂಗುವ ಬದಲು ಕೊರೆಯುವ ಚಳಿಗಾಲವಿದ್ದರೂ ಫುಟ್‌ಪಾತಿನಲ್ಲಿ, ಅಷ್ಟೇನೂ ಸ್ವಚ್ಛತೆಯಿಂದಿರದ ಜಾಗಗಳಲ್ಲಿ ನಿದ್ರಿಸುತ್ತಿದ್ದ.

ನಟನಾದ ನಂತರ 1971ರಲ್ಲಿ ಕೇಂಬ್ರಿಡ್ಜ್‌ನಲ್ಲಿದ್ದ ಬರಹಗಾರ ಜೆರೆಮಿ ಲ್ಯಾರ್ನರ್‌ನ ಮನೆಯಲ್ಲಿ ಸಿನಿಮಾ ಸ್ಕ್ರಿಪ್ಟೊಂದರ ರಚನೆಯಲ್ಲಿ ರಾಬರ್ಟ್ ತೊಡಗಿದ್ದ ಸಂದರ್ಭದಲ್ಲಿ ಒಂದು ಘಟನೆ ಜರುಗಿತು. ಅದೇನೆಂದರೆ, ಈ ಜೆರೆಮಿ ಲ್ಯಾರ್ನರ್ ತನ್ನ ಮನೆಯಲ್ಲಿ ಆರ್.ಎ.ಎನ್.ಡಿ ಎಂಬ ಸಂಘಟನೆ ಕೆಲಸ ಮಾಡುತ್ತಿದ್ದ ಡೇನಿಯಲ್ ಎಲ್ಸ್‌ಬರ್ಗ್ ಎಂಬಾತನನ್ನು ಅಡಗಿಸಿಟ್ಟಿದ್ದ. ಈ ಆರ್.ಎ.ಎನ್.ಡಿ (ರಿಸರ್ಚ್ ಅಂಡ್ ಡೆವಲಪ್‌ಮೆಂಟ್) ಎಂಬ ಸಂಘಟನೆಯು ಆರಂಭದಲ್ಲಿ ಅಮೆರಿಕದ ರಕ್ಷಣಾ ವಿಭಾಗದೊಂದಿಗೆ ಕೆಲಸ ಮಾಡುತ್ತಿದ್ದರೂ ಆನಂತರ ಪ್ರತ್ಯೇಕಗೊಂಡು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿತ್ತು.

ಬಚ್ಚಿಟ್ಟುಕೊಂಡಿದ್ದ ಎಲ್ಸ್‌ಬರ್ಗ್ ಏನು ಮಾಡಿದ್ದನೆಂದರೆ ವಿಯೆಟ್ನಾಂ ವಿರುದ್ಧದ ಯುದ್ಧಕ್ಕೆ ಸಂಬಂಧಿಸಿದಂತೆ ಅಮೆರಿಕದ ಸರ್ಕಾರ ಕೈಗೊಂಡಿದ್ದ ನಿರ್ಧಾರ ಹಾಗೂ ಅದಕ್ಕೆ ಸಂಬಂಧಪಟ್ಟ ಟಾಪ್ ಸೀಕ್ರೆಟ್‌ಗಳನ್ನು ಹೊಂದಿದ್ದ ಪೆಂಟಗಾನ್ ದಾಖಲೆಗಳನ್ನು 1971ರಲ್ಲಿ ಸಾರ್ವಜನಿಕವಾಗಿ ಬಿಡುಗಡೆ ಮಾಡಿ ಭಾರೀ ವಿವಾದಕ್ಕೆ ಗುರಿಯಾಗಿದ್ದ.

ಈ ಭಯಂಕರ ಪ್ರಕರಣದಿಂದ ಅಲ್ಲೋಲಕಲ್ಲೋಲ ಸೃಷ್ಟಿಯಾಗಿದ್ದರಿಂದ ಒಂದಿಷ್ಟು ದಿನ ತಲೆಮರೆಸಿಕೊಂಡಿರಲು ಜೆರೆಮಿ ಲ್ಯಾರ್ನರನ ಮನೆಯಲ್ಲಿ ಅಡಗಿಕೊಂಡಿದ್ದ. ಈತ ಅಲ್ಲಿ ಅಡಗಿಕೊಂಡಿದ್ದ ವಿಷಯ ಸ್ಕ್ರಿಪ್ಟ್ ರಚನೆಗೆಂದು ಹೋಗಿದ್ದ ರಾಬರ್ಟ್‌ಗೆ ತಡವಾಗಿ ಗೊತ್ತಾಯಿತು. ಆ ಬಗ್ಗೆ ರಾಬರ್ಟ್ ತಮಾಷೆಗೆ ಹೀಗೆ ಹೇಳುತ್ತಾನೆ: "ಜೆರೆಮಿ ಓರ್ವ ಪ್ರಾಮಾಣಿಕ ಮನುಷ್ಯ ಎಂದೂ, ಆತ ವಿಯಟ್ನಾಮ್ ಯುದ್ಧವನ್ನು ವಿರೋಧಿಸುತ್ತಿದ್ದ ಎಂದೂ ನನಗೆ ಗೊತ್ತಿತ್ತು. ಆದರೆ ಆತ ಆ ಎಲ್ಸ್‌ಬರ್ಗ್‌ನನ್ನು ತನ್ನ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದು ಒಂದು ತರಹ ಜೇಮ್ಸ್ ಬಾಂಡ್ ಸಿನಿಮಾದಂತಿತ್ತು. ನಾವಿಬ್ಬರೂ ಇತ್ತ ಟೇಬಲ್ ಮುಂದೆ ಕೂತು ಕೆಲಸ ಮಾಡುತ್ತಿದ್ದರೆ ಅತ್ತ ಕಡೆಯಿಂದ ಎಲ್ಸ್‌ಬರ್ಗ್ ಕೊಸರಾಡುವುದು ಕೇಳಿಸುತ್ತಿತ್ತು. ಆಗ ಜೆರೆಮಿ "ಸುಮ್ಮನಿರು ಡೇನಿಯಲ್" ಎಂದು ಸಮಾಧಾನ ಮಾಡುತ್ತಿದ್ದದ್ದು ಮಜವಾಗಿತ್ತು.""

ರಾಬರ್ಟ್ ಕಠಿಣ ಸಂದರ್ಭಗಳಲ್ಲೂ ಧೃತಿಗೆಡದೆ ಮನಸ್ಸನ್ನು ತಹಬಂದಿಯಲ್ಲಿಟ್ಟುಕೊಳ್ಳುತ್ತಿದ್ದಂಥ ಮನುಷ್ಯ. ಒಮ್ಮೆ ಏನಾಯಿತೆಂದರೆ 'ಇನ್ ಸೈಡ್ ಡೈಸಿ ಕ್ಲೋವರ್' ಎಂಬ ಸಿನಿಮಾದ ಚಿತ್ರೀಕರಣ ಸಂದರ್ಭದಲ್ಲಿ ರಾಬರ್ಟ್ ತನ್ನ ಸಹನಟಿ ನಟಾಲಿ ವುಡ್ ಜೊತೆ ದೋಣಿಯಲ್ಲಿ ಕೂತು ನಟಿಸಬೇಕಿತ್ತು. ರಾಬರ್ಟ್ ಮುಲ್ಲಿಗನ್ ನಿರ್ದೇಶನದಲ್ಲಿ ಚಿತ್ರೀಕರಣ ಸಾಂಗವಾಗಿಯೇ ಸಾಗುತ್ತಿತ್ತು. ಆದರೆ ಅಚಾನಕ್ಕಾಗಿ ಗಾಳಿಯ ಬೀಸುವಿಕೆಯ ದಿಕ್ಕು ಬದಲಾಗಿ ದೋಣಿ ಆಯತಪ್ಪಿ ತೂಗಾಡುತ್ತ ಅಪಾಯದ ಮುನ್ಸೂಚನೆಯನ್ನು ತಂದೊಡ್ಡಿತು. ಆಗ ವುಡ್ ಆತಂಕಗೊಳಗಾದಳು. ತಾವಿರುವುದು ಅಪಾಯದ ಸ್ಥಿತಿಯಲ್ಲಿ ಎಂಬುದನ್ನರಿತು ರಾಬರ್ಟ್ ಜೋಕ್ಸ್ ಹೇಳುವ ಮೂಲಕ, ನಗಿಸುವ ಮೂಲಕ ವುಡ್‌ಳನ್ನು ಆತಂಕದಿಂದ ದೂರ ಮಾಡಲು, ಆಕೆಯನ್ನು ಶಾಂತವಾಗಿರಿಸಲು ಯತ್ನಿಸುತ್ತಿದ್ದ. ಈ ಘಟನೆಯಿಂದಾಗಿ ಇವರಿಬ್ಬರ ಸ್ನೇಹ ಗಟ್ಟಿಗೊಂಡು ಮುಂದೊಮ್ಮೆ ಇವರಿಬ್ಬರ ನಡುವೆ ಲವ್ ಅಫೇರ್ ಕುರಿತ ರೂಮರ್‌ಗಳು, ಗಾಸಿಪ್‌ಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಆಕೆಯ ಬಗ್ಗೆ ಸೆಳೆತವಿತ್ತಾದರೂ ಎಂದೂ ಆಕೆಯನ್ನು ಟಚ್ ಮಾಡಿರದಿದ್ದ ರಾಬರ್ಟ್ "ನಮ್ಮೊಂದಿಗೆ ನಟಿಸುವ ಮಹಿಳೆಯರೊಂದಿಗೆ ಸರಸದಲ್ಲಿ ತೊಡಗುವುದು ತುಂಬಾ ಅಪಾಯಕಾರಿ" ಎಂದಷ್ಟೇ ಹೇಳಿ ಸುಮ್ಮನಾಗುತ್ತಾನೆ.

ರಾಬರ್ಟ್‌ಗೆ ಪರಿಸರ ರಕ್ಷಣೆ ಮತ್ತು ಸರಳ ಜೀವನವೆಂದರೆ ತುಂಬಾ ಇಷ್ಟ. ಆತ ನಟಿಸಿದ ಮೊದಲ ಚಿತ್ರದ ಸಂಭಾವನೆಯಿಂದ ಉತಾಹ ರಾಜ್ಯದಲ್ಲಿ ಎರಡು ಎಕರೆ ಜಮೀನನ್ನು ಕೊಂಡು ತನ್ನ ಕೈಯಾರೆ ಒಂದು ಕುಟೀರವನ್ನು ಕಟ್ಟಿದ. ಅದು ಜನಸಂಪರ್ಕದಿಂದ ಅದೆಷ್ಟು ದೂರವಿತ್ತೆಂದರೆ ಆ ಕುಟೀರಕ್ಕೆ ಕುಡಿಯುವ ನೀರಿನ ಸಂಪರ್ಕವೂ ಇರಲಿಲ್ಲ. ಆದರೂ ರಾಬರ್ಟ್ ತನ್ನ ಆಗಿನ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ಅಲ್ಲಿಗೆ ಹೋಗಿ ತಂಗುತ್ತಿದ್ದ.

ನಂತರದ ವರ್ಷಗಳಲ್ಲಿ ಅಭಿವೃದ್ಧಿಯ ಹೆಸರಲ್ಲಿ ನಾಗರಿಕತೆ ಪರಿಸರವನ್ನು ನಾಶಮಾಡುವ ಪರಿಯನ್ನು ಕಂಡು ರಾಬರ್ಟ್ ಆತಂಕಿತನಾದ. ಆಗ ತನಗೆ ಸಿಕ್ಕ ಹಣವನ್ನೆಲ್ಲ ಭೂಮಿ ಖರೀದಿಸಲು ವ್ಯಯಿಸಲಾರಂಭಿಸಿದ. ಈಗ ಆತ 7,000 ಎಕರೆ ಪ್ರದೇಶದ ಒಡೆಯ. ಆತನ ಸುಪರ್ದಿಯಲ್ಲಿರುವ ಭೂಮಿಯಲ್ಲಿ ರಸ್ತೆ ಕಟ್ಟಡ ಇತ್ಯಾದಿಗಳಿಲ್ಲ, ಬದಲಾಗಿ ಅಭಿವೃದ್ಧಿಯಿಂದ, ಮಾಲಿನ್ಯದಿಂದ ದೂರವಿರುವ, ಗುಡ್ಡಗಾಡುಗಳ, ಹಿಮ ಬೀಳುವ ಅಪ್ಪಟ ಸ್ವಚ್ಛ ಪರಿಸರವಿದೆ. ತನ್ನ ಈ ಆಸ್ತಿಯಲ್ಲಿ ಸಂಚರಿಸಲು ಈಗಲೂ ರಾಬರ್ಟ್ ಕುದುರೆಗಳನ್ನು, ಸ್ಕೀಗಳನ್ನು ಮತ್ತು ಸ್ನೋ ಮೊಬೈಲ್‌ಗಳನ್ನು ಬಳಸುತ್ತಾನೆ- ಏಕೆಂದರೆ ಅಲ್ಲೆಲ್ಲ ಕಾರ್‌ನಲ್ಲಿ ಸುತ್ತಾಡಲು ರಸ್ತೆಗಳೇ ಇಲ್ಲವಲ್ಲ ಅದಕ್ಕೆ!

ಅಂದಹಾಗೆ ಇದೇ ಪ್ರದೇಶದಲ್ಲಿ ಸನ್‌ಡ್ಯಾನ್ಸ್ ಎಂಬ ಸಂಘಟನೆಯೂ ಇದೆ. ಮೊದಲೇ ಹೇಳಿದಂತೆ ನಟನಟಿಯರ ಮತ್ತು ನಿರ್ದೇಶಕರ ಮೇಲೆ ಸ್ಟುಡಿಯೋಗಳು ಹೊಂದಿದ್ದ ಹಿಡಿತವನ್ನು ವಿರೋಧಿಸುತ್ತಿದ್ದ ರಾಬರ್ಟ್ ಆನಂತರದ ದಿನಗಳಲ್ಲಿ ಸಿನಿಮಾಗಳಲ್ಲಿ ತಂತ್ರಗಾರಿಕೆ, ಗ್ರಾಫಿಕ್ಸ್ ಮತ್ತು ಬಂಡವಾಳಗಳೂ ಹೆಚ್ಚಾಗುತ್ತಾ ಹೋದದ್ದನ್ನೂ ವಿರೋಧಿಸಿದ. "ಸಿನಿಮಾಗೆ ಎಲ್ಲಕ್ಕಿಂತ ಮುಖ್ಯವಾಗಿ ಬೇಕಾಗುವುದು ಕತೆ. ಅದೇ ಈಗ ಗೌಣವಾಗುತ್ತಿದೆ" ಎಂದು ವಾದಿಸಲಾರಂಭಿಸಿದ. ಮಾತ್ರವಲ್ಲ, ಸ್ಟುಡಿಯೋಗಳನ್ನು ಅವಲಂಬಿಸದೆ ಸ್ವತಂತ್ರವಾಗಿ ಸಿನಿಮಾಗಳನ್ನು ಮಾಡುವ ಜನರನ್ನು ಪ್ರೋತ್ಸಾಹಿಸಲು ಪ್ರತಿವರ್ಷ 'ಸನ್‌ಡ್ಯಾನ್ ಫಿಲಂ ಫೆಸ್ಟಿವಲ್'ಗಳನ್ನು ಪ್ರಾಯೋಜಿಸಲಾರಂಭಿಸಿದ.


ದುರಾದೃಷ್ಟವಶಾತ್ ಈ ಚಿತ್ರೋತ್ಸವ ಅದೆಷ್ಟು ಜನಪ್ರಿಯವಾಯಿತೆಂದರೆ ಕಾಲಕ್ರಮೇಣ ಯಾವ ಸ್ಟುಡಿಯೋಗಳ ವಿರುದ್ಧ ರಾಬರ್ಟ್ ಅದನ್ನು ಹುಟ್ಟುಹಾಕಿದ್ದನೋ ಅದೇ ಸ್ಟುಡಿಯೋಗಳು ಆ ಚಿತ್ರೋತ್ಸವವನ್ನೇ ಆಪೋಷನ ಮಾಡಿಕೊಂಡವು.

ಪರಿಸರ ರಕ್ಷಣೆಯಂತೇ ರಾಬರ್ಟ್ ಅಮೆರಿಕದ ಮೂಲ ನಿವಾಸಿಗಳ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಹೋರಾಡುವವರನ್ನೂ ಬೆಂಬಲಿಸುತ್ತಾನೆ. ನ್ಯೂಯಾರ್ಕ್ ನಗರದಲ್ಲಿರುವ 'ನ್ಯಾಚುರಲ್ ರಿಸೋರ್ಸಸ್ ಡಿಫೆನ್ಸ್ ಕೌನ್ಸಿಲ್'ನ ಟ್ರಸ್ಟಿಯೂ ಆಗಿದ್ದಾನೆ. ಕಳೆದ ಬಾರಿಯ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಬರಾಕ್ ಒಬಾಮಾರನ್ನು ರಾಬರ್ಟ್ ಬೆಂಬಲಿಸಿದ್ದ. ಯಾಕೆಂದರೆ ಅವರು ಚುನಾವಣಾ ಪ್ರಚಾರದ ಸಮಯದಲ್ಲಿ ಪರಿಸರವನ್ನು ರಕ್ಷಿಸಲು ಒತ್ತು ಕೊಡುವುದಾಗಿ ಭರವಸೆ ನೀಡಿದ್ದರು. ಆದರೀಗ ರಾಬರ್ಟ್‌ಗೆ ಬೇಸರವಾಗಿದೆ "ಒಬಾಮಾ ಅವರು ಸ್ವಚ್ಛ ಗಾಳಿ, ನೀರು ಮತ್ತು ಭೂಮಿ ಮುಖ್ಯ ಎಂದಿದ್ದರು. ಆದರೀಗ ಅವರು ಆ ನಿಟ್ಟಿನಲ್ಲಿ ಕ್ರಮಕೈಗೊಳ್ಳುತ್ತಿಲ್ಲ" ಎಂದು ಟೀಕಿಸುತ್ತಾನೆ.

ನಟನೆ ಬಗ್ಗೆ ಈಗಲೂ ರಾಬರ್ಟ್‌ಗೆ ಅದೆಷ್ಟು ಉತ್ಸಾಹ ಎಂದರೆ ಕಳೆದ ವರ್ಷ ಆತ 'ಆಲ್ ಈಸ್ ಲಾಸ್ಟ್' ಎಂಬ ಸಿನಿಮಾದಲ್ಲಿ ನಟಿಸಿದ್ದ. ಈ ಇಡೀ ಚಿತ್ರದಲ್ಲಿ ಆತ ಏಕೈಕ ನಟ ಮತ್ತು ಚಿತ್ರದುದ್ದಕ್ಕೂ ಒಂದೇ ಒಂದು ಡೈಲಾಗ್ ಎಂಬುದೇ ಇಲ್ಲ. ತಾನಿರುವ ಹಡಗು ಇಂಡಿಯನ್ ಓಶಿಯನ್‌ನಲ್ಲಿ ಮುಳುಗಿದ ನಂತರ ಎಂಟು ದಿನಗಳ ಕಾಲ ತನ್ನ ಪ್ರಾಣವನ್ನು ಕಾಪಾಡಿಕೊಳ್ಳಲು ಹರಸಾಹಸ ಮಾಡುವ ಮುದಿ ನಾವಿಕನ ಪಾತ್ರ ಅದು. ಆ ಚಿತ್ರದಲ್ಲಿ ಹಲವು ಸ್ಟಂಟ್‌ಗಳಿದ್ದು ಅದಕ್ಕೆ ಸ್ಟಂಟ್ ಮಾಡುವವರನ್ನು ಉಪಯೋಗಿಸಲು ಚಿತ್ರದ ನಿರ್ದೇಶಕ ನಿರ್ಧರಿಸಿದ್ದರೂ ಅವನನ್ನು ವಿರೋಧಿಸಿ ರಾಬರ್ಟ್ ಸ್ವತಃ ತಾವೇ ಎಲ್ಲ ಸ್ಟಂಟ್‌ಗಳಲ್ಲೂ ಭಾಗವಹಿಸಿದ್ದರು. "ಚಿತ್ರೀಕರಣದ ಸಮಯದಲ್ಲಿ ಹಲವೊಮ್ಮೆ ರಾಬರ್ಟ್ ನೀರಿನಲ್ಲಿ ಸತತ ಎಂಟು ಗಂಟೆಗಳ ಕಾಲ ಇರಬೇಕಿತ್ತು. ಈ ಕಾರಣಕ್ಕೇ ರಾಬರ್ಟ್ ಅವರಿಗೆ ನೀರಿನಿಂದ ಹೊರಗೆ ಬಂದರೆ ಸಾಕು ಎನಿಸಬಹುದು ಎಂದು ನಾನು ಭಾವಿಸಿದ್ದೆ. ಆದರೆ ಚಿತ್ರೀಕರಣ ಮುಗಿದು ಹೋಟೆಲ್‌ಗೆ ಹಿಂದಿರುಗಿದ ನಂತರ ನಾನು ಕಂಡಿದ್ದು ಏನನ್ನು? ರಾಬರ್ಟ್ ಈಜುಕೊಳದಲ್ಲಿ ಈಜುತ್ತಿದ್ದರು!!" ಎಂದು ಚಿತ್ರದ ನಿರ್ದೇಶಕ ಅಚ್ಚರಿ ವ್ಯಕ್ತಪಡಿಸಿದ್ದ.

ರಾಬರ್ಟ್ ತನ್ನ ಬದುಕಿನುದ್ದಕ್ಕೂ ಒಂದಿಲ್ಲೊಂದು ಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಅಚ್ಚರಿಯಾಗಿ ಅರಳುತ್ತ ಜಗತ್ತಿನ ಚಿತ್ರರಸಿಕರ ಆತ್ಮಗಳಲ್ಲಿ ನೆಲೆ ನಿಂತಿರುವ ಅಪರೂಪದ, ಅದ್ವಿತೀಯ, ಅನನ್ಯ ಪ್ರತಿಭೆ. ಈ ಸರಳ, ವಿರಳ, ಕಲಾವಿದನಿಂದ ಈ ಪೀಳಿಗೆಯ ಸಿನಿಮಾ ಮಂದಿ ಅರಿಯಬೇಕಾದುದು, ಅಳವಡಿಸಿಕೊಳ್ಳಬೇಕಾದುದು ಬಹಳಷ್ಟಿದೆ ಅಲ್ಲವೇ?

■ ಹೃದಯಶಿವ



ಕಾಜೋಲ್‌ಳ ದೊಡ್ಡವ್ವ ನೂತನ್ ಎಂಬ ನಟಿ. ಕಾಜೋಲ್‌ಳ ತಾಯಿ ತನುಜಾ ಮತ್ತು ನೂತನ್ ಅಕ್ಕತಂಗಿಯರು. ನೂತನ್ ಭಾರತ ನಾರಿಯರ ಪಾತ್ರಕ್ಕೆ ಸೈ ಎನಿಸಿಕೊಂಡಿದ್ದಾಕೆ. ಅವರು ತಮ್ಮ ಕಾಲದ ಅನೇಕ ಹಿರಿಯ ನಟರ ಜೊತೆ ನಟಿಸಿ ಗಮನ ಸೆಳೆದಿದ್ದರು. ...ಕಪೂರ್ ಜೊತೆ 'ಲಾಟ ಸಾಬ್' ಚಿತ್ರದಲ್ಲಿ ಇಜುಡಿಗೆ ...ಟ್ಟಿ ಜನರನ್ನು ರಂಜಿಸಿದ್ದಳು. ನೂತನ್, ತುನುಜಾ, ...ಜೋಲ್ - ಈ ಮೂವರೂ ತುಂಬಾ ಸುಂದರಿಯರು. ...ಅವರಿಗೆ ಹುಟ್ಟಾ ಕರಗತವಾಗಿದೆ.

...ಕಾಜೋಲ್‌ಳ ಕೈಹಿಡಿದಿರುವ ಅಜಯ್ ದೇವಗನ್ ...ರ್ ಸ್ಟಂಟ್ ಮಾಸ್ಟರ್‌ರವರ ಮಗ. ಸ್ವತಃ ಕಾಜೋಲ್ ...ಕ ಸಿನಿಮಾಗಳಲ್ಲಿ ನಟಿಸಿ ಅಪಾರ ಜನಪ್ರಿಯತೆಯನ್ನು ...ರುವ ಮಹಿಳೆ. ಕಾಜೋಲ್ ತರಹದ ಅಪ್ಪಟ ...ಯನ್ನು ಬಗ್ಗೆ ಬರೆದ ಲೇಖಕ ಹೃದಯಶಿವ ಅವರಿಗೂ, ...ಕೆಗೂ ಧನ್ಯವಾದಗಳು.

-ತಾರಗಲ್ಲ ಉಮೇಶ್, ರಾಮದುರ್ಗ

...ಆಗಸ್ಟ್ 27ರ ಸಂಚಿಕೆಯಲ್ಲಿ ಕೊಪ್ಪಳ ಜಿಲ್ಲೆಯ ಕನಕಗಿರಿ ...ಪಡ ಹೊಸಗುಡ್ಡ ಗ್ರಾಮದಲ್ಲಿ ದಲಿತ ಮಹಿಳೆ ...ಮಮ್ಮ ಕೊಲೆಯಾಗಿದ್ದನ್ನು ಕುರಿತು ವರದಿಯನ್ನು ...ಸಿದ್ದೀರಿ. ಆದರೂ ಹುಸುಮಮ್ಮಳ ಕೊಲೆ ಪ್ರಕರಣವನ್ನು ...ತ ಮಂತ್ರಿ, ತಂಗಡಗಿಯ ಹಿಂಬಾಲಕರು ಮುಚ್ಚಿ ...ದ್ದಾರೆ. ಇದಕ್ಕೆ ತಂಗಡಗಿಯ ಕುಮ್ಮಕ್ಕು ಇದೆ ...ಸುತ್ತದೆ. ದಲಿತ ಮಂತ್ರಿಯ ಪಕ್ಕದಲ್ಲೇ ದಲಿತ ...ಳೆಯ ಕೊಲೆಯಾಗಿದೆ ಎಂದರೆ ಇನ್ನು ಇಳಿದವರ ...ನು? ಮಂತ್ರಿ ತಂಗಡಗಿಗೆ ದಲಿತರ ಬಗ್ಗೆ ಕಾಲಜಿ ...ರೆ ಹುಸುಮಮ್ಮಳ ಆತ್ಮಕ್ಕೆ ನ್ಯಾಯ ಕೊಡಿಸಲಿ..

- ಬಿ.ಬಿ.ರಾಜು, ಎಚ್.ಬಿ.ಹಳ್ಳಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...kesh70@rediffmail.com ಗೆ ಮಿಡಿ... ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ...ಪ್ರಾಯಗಳನ್ನು 9980331427 ನಂಬರ್‌ಗೂ ...ಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 03-09-2014 RNI No. KARKAN2005/14648

ಬಂದ ಬಂದ ಗಣಪ... ದಾರಿ ಬಿಡಿ, ಸ್ವಲ್ಪ



'ಕರಿಯ'ದಂತಹ ಚಿತ್ರಕ್ಕೆ ಹಣ ಹಾಕಿ ಪ್ರೇಮ್ ಎಂಬ ನಿರ್ದೇಶಕನಿಗೆ ಚಾನ್ಸ್ ಕೊಟ್ಟ ಆನೇಕಲ್ ಬಾಲರಾಜ್ ತಮ್ಮ ಮಗನನ್ನೂ ಹೀರೋ ಮಾಡಲು ಹೋಗಿ 'ಕೆಂಪ' ಎಂಬ ಚಿತ್ರವನ್ನು ನಿರ್ಮಿಸಿದ್ದರು. ಆ ಚಿತ್ರಕ್ಕೆ ಗುರುಕಿರಣ್ ಒಳ್ಳೆಯ ಹಾಡುಗಳನ್ನೇ ಮಾಡಿಕೊಟ್ಟಿದ್ದರು. ನಿರ್ದೇಶಕ ಜಗದೀಶ್ ಕೂಡ ಒಳ್ಳೆಯ ಸ್ಕ್ರಿಪ್ಟನ್ನೇ ಮಾಡಿಕೊಂಡಿದ್ದರು. ಆದರೆ ಅದೇಕೋ ಚಿತ್ರ ಹಿಟ್ ಆಗಲಿಲ್ಲ. ಆನೇಕಲ್ ಬಾಲರಾಜರ ಮಗ ಸಂತೋಷ್ ಇನ್ನು ಎಳಸು ಎಳಸಾಗಿ ಕಂಡಿದ್ದರಿಂದಲೋ ಏನೋ ಸಿನಿಮಾ ಸೂಪರ್ ಫ್ಲಾಪ್ ಆಗಿತ್ತು, ಆಮೇಲೆ ನಿರ್ದೇಶಕ ಜಗದೀಶ್ ಕೂಡ ಕೆಲಸವಿಲ್ಲದೆ ಮತ್ತೆ ನಿರ್ಮಾಪಕರ ಬೆನ್ನು ಹತ್ತಿ ತಿರುಗುವಂತಾಯಿತು.

ಆನಂತರ ಅದೇ ಆನೇಕಲ್ ಬಾಲರಾಜ್ ನಿರ್ಮಾಣದಲ್ಲಿ ಚಕ್ರವರ್ತಿ ನಿರ್ದೇಶನದಲ್ಲಿ ಸಂತೋಷ್ ಮತ್ತೊಮ್ಮೆ ನಾಯಕರಾದರೂ ಪ್ರಯೋಜನವಾಗಲಿಲ್ಲ. ಸಿನಿಮಾ ಬಿಡುಗಡೆಯಾಗಿದ್ದು ಯಾವಾಗ, ಥಿಯೇಟರಿನಿಂದ ಎತ್ತಂಗಡಿ ಆಗಿದ್ದು ಯಾವಾಗ ಎಂಬುದೇ ಗೊತ್ತಾಗದಷ್ಟು ಬೇಗನೆ ಮಾಯವಾಗಿತ್ತು, ಅಂದರೆ ಎರಡನೇ ಬಾರಿಯೂ ಸಂತೋಷ್ ಹೀರೋ ಆಗಲಿಲ್ಲ. ಇಂತಹ ಇತಿಹಾಸವಿರುವ ಸಂತೋಷ್ ಈ ಬಾರಿ 'ಗಣಪ' ಎಂಬ ಶೀರ್ಷಿಕೆಯಡಿ ಮತ್ತೆ ಹೀರೋ ಆಗಲು ಹೊರಟಿದ್ದಾರೆ. ಆದರೆ ಈ ಬಾರಿ ಆನೇಕಲ್ ಬಾಲರಾಜರ ಬದಲಿಗೆ ಪರಮೇಶ್ವರ್-ಪ್ರೇಮ್ ಕುಮಾರ್ ಜೋಡಿ ಹಣ ಹಾಕಿ ಸಿನಿಮಾ ಮಾಡಿದ್ದಾರೆ. ಇದೇ ಪರಮೇಶ್ವರ್-ಪ್ರೇಮ್ ಕುಮಾರ್ ಜೋಡಿ ನಿರ್ಮಿಸಿದ್ದ 'ಪಲ್ಲಕ್ಕಿ' ಚಿತ್ರದ ಹಾಡುಗಳಿಗೆ ಡಾನ್ಸ್ ಕಂಪೋಸ್ ಮಾಡಲು ಚೆನ್ನೈನಿಂದ ಬಂದಿದ್ದ ತಮಿಳಿಗ ಪ್ರಭು ಶ್ರೀನಿವಾಸ್ ಎಂಬಾತ ಹೇಗೋ ಈ ನಿರ್ಮಾಪಕದ್ವಯರನ್ನು ಪಟಾಯಿಸಿ ಹಣ ಹಾಕಿಸಿ 'ಗಣಪ' ಕೂಡಿಸಿದ್ದಾರೆ. ಈ 'ಗಣಪ' ಈಗ ಪಕ್ಕಾ ಸೀಸನ್ನಿನಲ್ಲಿ ಹಾಡುಗಳನ್ನು ಬಿಡುಗಡೆ ಮಾಡಿಕೊಂಡಿದ್ದಾನೆ. ಹಾಡುಗಳು ಚೆನ್ನಾಗಿವೆ ಎನ್ನುವ ಮಾತುಗಳೂ ಕೇಳಿಬರುತ್ತಿವೆ. ಈ ಬಾರಿಯಾದರೂ ಆನೇಕಲ್ ಸಂತೋಷ್ ಹೀರೋ ಆಗ್ತಾರಾ ನೋಡ್ಬೇಕು.

ಸ್ವಾಮಿಯೇ ಶರಣಂ ಅಯ್ಯಪ್ಪ

ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ, ಸಂಗೀತ, ಛಾಯಾಗ್ರಹಣ, ಸಂಕಲನ, ಕಲೆ, ನಿರ್ದೇಶನ, ಅಭಿನಯ, ನೃತ್ಯ ಸೇರಿದಂತೆ ಇನ್ನಿತರ ತಾಂತ್ರಿಕ ವಿಭಾಗಗಳಲ್ಲಿನ



ಪರಿಶ್ರಮ, ತಯಾರಿ, ಪಕ್ವತೆ ಎಲ್ಲವೂ ಸರಿಯಾಗಿದ್ದಾಗ ಒಂದು ಸಿನಿಮಾ ಚೆನ್ನಾಗಿ ಮೂಡಿಬಂದು ಪ್ರೇಕ್ಷಕ, ಚಿತ್ರತಂಡದ ವಲಯದಲ್ಲಿ ಸಕ್ಸಸ್ ಕಂಡು ಮನರಂಜನೆಯ ಜೊತೆಗೆ ನಿರ್ಮಾಪಕನ ಜೇಬು ತುಂಬಿಸಬೇಕು ಎಂದು ಆಶಿಸುವುದರಲ್ಲಿ ಅರ್ಥವಿದೆ. ಆದರೆ ಗಾಂಧಿನಗರದ ಕೆಲವು ಮಂದಿ ಇವ್ಯಾವನ್ನೂ ಗಂಭೀರವಾಗಿ ಪರಿಗಣಿಸದೆ - ಅಂದರೆ ಕಥೆಯ ಅಂತಃಸ್ಸತ್ವ, ರುಚಿವತ್ತಾದ ಹಾಡುಗಳು, ಪಕ್ವ ತಂತ್ರಜ್ಞಾನದತ್ತ ಧ್ಯಾನಿಸದೆ, ಚಿಂತಿಸದೆ - ಬರೀ ಭಗವಂತನ ಮೇಲೆ ಭಾರ ಹಾಕಿ 'ನನ್ನ ಸಿನಿಮ ಗೆಲ್ಲಿಸು ದೇವ್ರೇ' ಅನ್ನುವವರಿದ್ದಾರೆ.

ಈ ನೆಪದಲ್ಲಿ ಚಿತ್ರದ ಟೈಟಲ್‌ನಿಂದ ಹಿಡಿದು, ನಿರ್ದೇಶಕ, ನಾಯಕ, ನಾಯಕಿಯ ಜಾತಕದಿಂದ ಹಿಡಿದು, ಚಿತ್ರದ ಮುಹೂರ್ತ ಯಾವತ್ತು? ಎಲ್ಲಿ ಮಾಡಬೇಕು? ಯಾವ ಪುರೋಹಿತನನ್ನು ಕರೆಸಿ ಮಾಡಬೇಕು? ಎಂಬಿತ್ಯಾದಿ ಸಂಗತಿಗಳತ್ತ ಗಮನ ಕೊಡುವುದು ಮೊದಲಿನಿಂದಲೂ ವಿಚಿತ್ರ ಚೋದ್ಯ ಎಂಬಂತೆ ಕಂಡುಬರುತ್ತಿದೆ. ಆ ನಿಟ್ಟಿನಲ್ಲಿ ದಿನೇಶ್ ಗಾಂಧಿ ಎಂಬ ಗಾಂಧಿನಗರದ ವ್ಯಕ್ತಿ ಇನ್ನೂ ಒಂದು ಕೈ ಮುಂದೆ ಹೋಗಿ ತಮ್ಮ ಹೊಸ ಚಿತ್ರ 'ಕನ್ವರ್‌ಲಾಲ್'ನ ಸ್ಕ್ರಿಪ್ಟ್ ಪೂಜೆಗೆಂದು ಖುದ್ದು ಶಬರಿಮಲೆಗೇ ಹೋಗಿಬಂದಿದ್ದಾರೆ. ಇದನ್ನು ಭಕ್ತಿ ಎನ್ನಬೇಕೋ, ಕಾಮಿಡಿ ಎನ್ನಬೇಕೋ ಆ ಅಯ್ಯಪ್ಪನೇ ಹೇಳಬೇಕು.

ಇನ್ನೊಂದು ಗುಟ್ಟಿನ ಮಾತೆಂದರೆ ದೇವರ ಮೇಲೆ ಇಷ್ಟೊಂದು ಭಕ್ತಿಭಾವ ಹೊಂದಿರುವ ದಿನೇಶ್ ಗಾಂಧಿ ತಾವು ನಿರ್ಮಾಣ ಮಾಡಿದ್ದ 'ಮಲ್ಲಿಕಾರ್ಜುನ' ಚಿತ್ರಕ್ಕೆ ಕೆಲಸ ಮಾಡಿದ್ದ ಕೆಲವೊಂದು ತಂತ್ರಜ್ಞರಿಗೆ ಸಂಭಾವನೆಯನ್ನೇ ಚುಕ್ತಾ ಮಾಡಲಿಲ್ಲವಂತೆ!

ನಾನಲ್ಲದೇ ಬೇರಾರೂ ಕಾರಣರಲ್ಲ



ಡಾ.ರಾಜಕುಮಾರ್ 'ಭಕ್ತ ಅಂಬರೀಷ' ಮಾಡಬೇಕು ಎಂದು ಕನಸು ಕಂಡಿದ್ದರು. ಆ ಕನಸು ನನಸು ಆಗಲೇ ಇಲ್ಲ. ರಾಜ್ ಹೊರಟೇಹೋದರು. ಆದರೆ ಅಂಬರೀಶ್-ದರ್ಶನ್ ಕಾಂಬಿನೇಶನ್ನಿನಲ್ಲಿ 'ಅಂಬರೀಷ' ಎಂಬ ಶೀರ್ಷಿಕೆಯಡಿ ಮಹೇಶ್ ಸುಖಧರೆ ನಿರ್ದೇಶನದ ಚಿತ್ರ ಸೆಟ್ಟೇರಿರುವುದು ನೀವೂ ಕಂಡಿದ್ದೀರಿ. ಈ 'ಅಂಬರೀಷ' ಶುರುವಾಗಿ ಇಲ್ಲಿಗೆ ಕರೆಕ್ಟಾಗಿ ಒಂದು ವರ್ಷವೇ ಆಯಿತು. ಆದರೆ ಚಿತ್ರ ಕಂಪ್ಲೀಟ್ ಆಗಲೇ ಇಲ್ಲ. ಯಾಕೆ ಈ ಚಿತ್ರ ಇನ್ನೂ ನೆನೆಗುದಿಯಲ್ಲಿಯೇ ಬಿದ್ದಿದೆ ಎಂಬ ಪ್ರಶ್ನೆಗೆ 'ನಾನೇ ಕಾರಣ' ಎಂದವರು ಬೇರಾರೂ ಅಲ್ಲ, ಈ ಚಿತ್ರದ ನಾಯಕರಲ್ಲಿ ಒಬ್ಬರಾದ ದರ್ಶನ್. ಅಂಬರೀಶ್ ಈ ಮಧ್ಯೆ ಅನಾರೋಗ್ಯದಿಂದ ಬಳಲುತ್ತಿದ್ದು, ಅವರಿಲ್ಲದೆ ತಾವೊಬ್ಬರೇ 'ಅಂಬರೀಷ'ದಲ್ಲಿ ನಟಿಸಲು ಸಾಧ್ಯವಾಗದೆ ಹೋಗಿದ್ದು, ಅದರಾಚೆಗೆ ಇನ್ನಿತರ ಕಾರಣಗಳಿಂದ ತಾವು 'ಅಂಬರೀಷ'ಕ್ಕಾಗಿ ತೊಡಗಿಸಿಕೊಳ್ಳದೆ ಹೋಗಿದ್ದು- ಎಲ್ಲ ಸೇರಿ ಈ ಚಿತ್ರ ಇಷ್ಟು ತಡವಾಗಲು ತಾವೇ ಕಾರಣ ಎಂಬುದ ದರ್ಶನ್ ಒಪ್ಪಿಕೊಂಡಿದ್ದಾರೆ.

ಇಷ್ಟು ತಡವಾಗಿದ್ದರೂ ಸಂಯಮದಿಂದಿರುವ ನಿರ್ದೇ ಮಹೇಶ್ ಸುಖಧರೆಗೆ 'ಥ್ಯಾಂಕ್ಸ್' ಅಂದಿದ್ದಾರೆ. ಇನ್ನೂ ತಡವಾ 'ಅಂಬರೀಷ' ಸೆಪ್ಟೆಂಬರ್‌ನಲ್ಲಿ ತೆರೆಗೆ ಬಂದರೆ ಅದರ ಕ್ರೆಡಿ ದರ್ಶನ್‌ಗೇ ಸಲ್ಲಬೇಕು ಅಂತಾಯ್ತು.

ಬಿ.ಸುರೇಶ ಚಿತ್ರದಲ್ಲಿ ದರ್ಶ...

ಬಿ.ಸುರೇಶ ನಿರ್ಮಾಣದ ಚಿತ್ರದಲ್ಲಿ ಮುಂದಿನ ವರ್ಷ... ದರ್ಶನ್ ನಟಿಸುವ ಸಾಧ್ಯತೆ ಇದೆ. ದರ್ಶನ್ ಪಿ.ಎನ್... ನಿರ್ದೇಶನದ 'ಮೆಜೆಸ್ಟಿಕ್' ಚಿತ್ರದಲ್ಲಿ ಪ್ರಥಮಬಾರಿಗೆ ನಾಯಕ... ಆಗುವ ಮುಂಚೆಯೇ ಬಿ.ಸುರೇಶರ 'ಸಾಧನೆ' ಧಾರಾವಾಹಿಯ... ಪುಟ್ಟ ಪಾತ್ರ ಮಾಡಿದ್ದರು. 'ಅಂಬರೀಷ' ಆಡಿಯೋ ಅನಾವ... ಸಂದರ್ಭದಲ್ಲಿ ಆ ನೆನಪಿಗೆ ಜಾರಿದ ದರ್ಶನ್-ಸುರೇಶ ಜೋ... ಕೂಡಿ ಒಂದು ಸಿನಿಮಾ ಮಾಡುವ ಬಗ್ಗೆ ಯೋಚಿಸಿದೆಯಂತೆ. ಒಂದು ... ಈ ಕನಸಿನ ಸಿನಿಮಾ ಆಗುವುದೇ ಆದರೆ ದಿನಕರ್-ದರ್ಶನ್ ಜೋಡಿ... 'ಸರ್ವಾಂತರ್ಯಾಮಿ'ಯ ನಂತರವಷ್ಟೇ ಆಗಬೇಕು. ಹಳೆಯ ಪರಿಚಯ... ನೆಪದಲ್ಲಿ ಗಣೇಶ್ ಜೊತೆ 'ಸಕ್ಕರೆ' ಮಾಡಿ ಕಹಿ ಅನುಭವಿಸಿದ ಬಿ.ಸುರೇಶ... ಬಾರಿ ದರ್ಶನ್ ಜೊತೆ ಸಿನಿಮಾ ಮಾಡಿ ಗೆದ್ದರೆ ಸಂತೋಷ ಪಡದ... ಯಾರಿದ್ದಾರೆ ಹೇಳಿ?

ಅಟ್ಲಾಂಟ ನಾಗೇಂದ್ರರ ಬಾಲಿವುಡ್ ಕನ...

ಕನ್ನಡದ ಪ್ರತಿಭಾವಂತ ನಿರ್ದೇಶಕ ಕೆ.ವಿ.ರಾಜು ಒಂದು ಕಾಲ... ಹಿಂದಿಯಲ್ಲಿ ಸಿನಿಮಾ ಮಾಡಲು ಬಾಂಬೆಗೆ ಹೋಗಿದ್ದು ನಿಮಗೆಲ್ಲ ಗೊ... ಅವರ ನಂತರ ರಾಜೇಂದ್ರ ಸಿಂಗ್ ಬಾಬು 'ಮೇರಿ ಆವಾಜ್ ಸುನೋ', ... ಸೆ ಭಲೇ ದೋ', 'ಮೇರಾ ಪೈಸಾ', 'ಆಗ್ ಕ ದರಿಯಾ' ತರಹದ ... ವೊಂದಿಷ್ಟು ಹಿಂದಿ ಚಿತ್ರಗಳನ್ನು ನಿರ್ದೇಶಿಸಿದ್ದೂ ನಿಮಗೆಲ್ಲ ಗೊತ್ತಿದೆ. ಅದೇ... ಹೇಮಂತ್ ಹೆಗ್ಡೆ ತರಹದ ಕೆಲವರೂ ಹಿಂದಿ ಸಿನಿಮಾ ಮಾಡಿದ ಕನ್ನಡಿ... ಈಗ ಆ ಪಟ್ಟಿಗೆ ಹೊಸದಾಗಿ ಸೇರ್ಪಡೆಯಾಗಿರುವ ಹೆಸರು ಅಟ... ನಾಗೇಂದ್ರ.

ಈ ಅಟ್ಲಾಂಟ ನಾಗೇಂದ್ರ ಈಗ 'ಮುಂಬೈ ಕನೆಕ್ಷನ್ಸ್' ಎಂಬುದೊ... ಹಿಂದಿ ಸಿನಿಮಾ ನಿರ್ದೇಶಿಸಿದ್ದಾರೆ. ಬೆಂಗಳೂರಿನವರಾದ ಇವರು ಸಾಫ್ಟ್‌ವೇ... ಉದ್ಯೋಗಿಯಾಗಿದ್ದು ಅಮೆರಿಕದಲ್ಲಿ ನೆಲೆಸಿರುವಂಥವರು. ಈ ಮೊ... ರಮೇಶ್ ಅಭಿನಯದ 'ಜೋಕ್‌ಫಾಲ್ಸ್' ಚಿತ್ರಕ್ಕೆ ಹಣ ಹಾಕಿ ಹಣ ತೆಗೆದಿ... ಆನಂತರ ಅಷ್ಟಾಗಿ ಕನ್ನಡ ಸಿನಿಮಾಗಳತ್ತ ತಿರುಗಿ ನೋಡದ ಇ... ಮೊನ್ನೆಮೊನ್ನೆಯಷ್ಟೇ 'ರಾಂಬೋ' ಎಂಬ ಚಿತ್ರವನ್ನು ನಿರ್ಮಿಸುವ ಮೂಲಕ ಶರಣ್ ಎಂಬ ಹಾಸ್ಯನಟನನ್ನು ಹೀರೋ ಮಾಡಿದರು. ಈಗ ಶರಣ್ ಕೋಟಿ ಕನಸಿನ ಹೀರೋ. ಇಂತಹ ಅಟ್ಲಾಂಟ ನಾಗೇಂದ್ರ ಈಗ ತಮ್ಮ ಹಿಂದಿ ಚಿತ್ರದ ಆಡಿಯೋ ಹಾಗೂ ಟ್ರೈಲರ್‌ಗಳನ್ನು ಬಿಡುಗಡೆ ಮಾಡಿದ್ದಾರೆ.



ಈ ಮೊದಲು ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಪ್ಯಾರಿಸ್ ಪ್ರಣಯ'ಕ್ಕೆ ಮ್ಯೂಸಿಕ್ ಮಾಡಿದ್ದ ಸ್ಟಿ... ಪ್ರಯೋಗ್ ಈ 'ಮುಂಬೈ ಕನೆಕ್ಷನ್'ಗೆ ಹಾಡಿನ ಪ್ರಯೋ... ಮಾಡಿದ್ದಾರೆ. 'ಮುಂಬೈ ಕನೆಕ್ಷನ್' ಚಿತ್ರಕ್ಕೆ ಈಗಾ... ಒಂದಿಷ್ಟು ಅವಾರ್ಡ್‌ಗಳು ಬಂದಿರುವುದಾಗಿ... ಚಿತ್ರದ ಕಥೆಯು ಇನ್ಫಾರ್ಮೇಶನ್ ಟೆಕ್ನಾಲಜಿ ಕ್ಷೇತ್ರ... ಭಯೋತ್ಪಾದನೆಗೆ ಸಂಬಂಧಿಸಿದೆ ಎಂದೂ ನಾಗ... ಹೇಳುತ್ತಾರೆ.

ಅಟ್ಲಾಂಟ ನಾಗೇಂದ್ರರಿಗೆ ಬ... ಶುಭಾಶಯ ಹೇಳಿಬಿಡೋಣ ಅಲ್ವೇ?



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com